ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಡಿಸೆಂಬರ್ 2019, ಬೆಲೆ ರೂ. 5/-



# ಪುರುಷೋತ್ತಮನಿಗೆ ಪುಷ್ಪಯಾಗ................

**ತಿರುಮಲೆ**
**ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ**
**ಉಭಯ ದೇವಿಯರೊಂದಿಗೆ ಸ್ವಾಮಿಯವರಿಗೆ**
**04-11-2019 ರಂದು ನಡೆದ**
**ಪುಷ್ಪಯಾಗ ಮಹೋತ್ಸವ ದೃಶ್ಯಗಳು**















## ಭಗವದ್ಗೀತೆ

**ಧೃಷ್ಟ ಕೇತು ಶ್ಚೇಕಿತಾನಃ ಕಾಶೀರಾಜಶ್ಚ ವೀರ್ಯವಾನ್**
**ಪುರುಜಿತ್ ಕುಂತಿ ಭೋಜಶ್ಚ ಶೈಬ್ಯಶ್ಚ ನರಪುಂಗವಃ**

**(ಶ್ರೀ ಮದ್ಭಗವದ್ಗೀತೆ ಅಧ್ಯಾಯ - 1, ಶ್ಲೋಕ - 5)**

**ಧೃಷ್ಟಕೇತು, ಚೇಕಿತಾನ, ವೀರನಾದ,**
**ಕಾಶಿರಾಜ ಪುರುಜಿತು, ಕುಂತಿ ಭೋಜ**
**ಮತ್ತು ಮನುಷ್ಯರಲ್ಲಿ ಶ್ರೇಷ್ಠನಾದ ಶೈಬ್ಯ**
**ಇವರೆಲ್ಲ ಇದ್ದಾರೆ.**




ಮಾರ್ಗಳಿತ್ತಿಂಗಳ್ ಮದಿನಿರೈಂದ ನನ್ನಾಳಾಲ್
ನೀರಾಡಪ್ಪೋದುವೀರ್ ಪೋದುಮಿನೋ ನೇರಿಳೈಯೀರ್
ಶೀರ್‌ಮಲ್ಗು ಮಾಯ್‌ಪ್ಪಾಡಿ ಶೆಲ್ವಚ್ಚಿರುಮೀರ್‌ಕಾಳ್,
ಕೂರ್ವೇಲ್ ಕೊಡುಂ ತೊಳಿಲನ್ ನನ್ದಗೋಪನ್ ಕುಮರನ್
ಎರಾರ್‌ನ್ದ ಕಣ್ಣಿ ಯಶೊದೈ ಯಿಳಂ ಶಿಂಗಂ
ಕಾರ್‌ಮೇನಿಚ್ಚೆಂಗಣ್ ಕದಿರ್‌ಮದಿಯಮ್ಬೋಲ್ ಮುಕತ್ತಾನ್
ನಾರಾಯಣನೇ ನಮಕ್ಕೇ ಪರೈ ತರುವಾನ್
ಪಾರೋರ್ ಪುಕ್ಕಳಿಪ್ಪಡಿನ್ದೇಲೋರೆಂಬಾವಾಯ್

**ಭಾವಾ ವಿವರಣೆ**

ಮಂಗಳ ಕಾರ್ಯಗಳನ್ನು ಮಂಗಳಕರ ಕಾಲದಲ್ಲಿ ಪ್ರಾರಂಭಿಸಬೇಕು. ಅಂತೆಯೇ ಈ ಮಾರ್ಗಶಿರ ಮಾಸವು ದೇವತೆಗಳಿಗೆ ಉಷಃಕಾಲವಾದ್ದರಿಂದ, ಸಕಲರಿಗೂ ಮಂಗಳವನ್ನುಂಟು ಮಾಡುವ ಕಾಲ. ಈ ಕಾಲದಲ್ಲಿ ಮುಕ್ಕೋಟಿ ದೇವತೆಗಳೂ ಚೈತನ್ಯದ ಚಿಲುಮೆಗಳಾಗಿ ವಟಪತ್ರಶಾಯಿಯಾದ ದೇವಕೀತನಯನನ್ನು ಸ್ತುತಿಸುತ್ತಾ ಆ ಪರಂಧಾಮನ ಕೃಪಾಕಟಾಕ್ಷಕ್ಕಾಗಿ ಎದುರು ನೋಡುವ ಕಾಲ ಆದ್ದರಿಂದ ಎಲೈ ಸಖಿಯರೆ,ನಾವೂ ಸಹ ಬ್ರಾಹ್ಮೀ ಕಾಲದಲ್ಲಿ ಎದ್ದು ಯಮುನಾ ನದಿಯಲ್ಲಿ ಸ್ನಾನ ಮಾಡಿ ಭಕ್ತಿ ಜಲಧಿಯಲ್ಲಿ ಮಿಂದು ಶ್ರೀ ಹರಿಯನ್ನು ಧ್ಯಾನಿಸಿ ಪೂಜಿಸಿ ಪುನೀತ ರಾಗೋಣ. ಇದರಿಂದ ಆ ದೇವತೆಗಳೂ ಪ್ರಸನ್ನರಾಗುತ್ತಾರೆ. ದೇವ ದೇವನೂ ಸಹ ಪ್ರಸನ್ನನಾಗಿ ವರಗಳನ್ನು ನೀಡುತ್ತಾನೆ. ನಮಗೆ ಮುಕ್ತಿಮಾರ್ಗ ಪ್ರದವಾದ ವಿದ್ಯೆಯನ್ನು ಅನುಗ್ರಹಿಸುತ್ತಾನೆ.

(ನಾಲ್ಕನೆಯ ದಶಕವು)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

ದಿಶಿ ದಿಶಿ ಗತಿವಿದ್ಭಿರ್ದೇಶಿಕೈರ್ನೀಯಮಾನಾ ಸ್ಥಿರತರಮನುಕಂಪೇ ಸ್ತ್ಯಾನಲಗ್ನಾ ಗುಣೈಸ್ತ್ವಂ

ಪರಿಗತವೃಷಶೈಲಂ ಪಾರಮಾರೋಪಯಂತೀ ಭವಜಲಧಿಗತಾನಾಂ ಪೋತಪಾತ್ರೀ ಭವಿತ್ರೀ ॥ ೩೮ ॥

ಹಿಂದಿನ ಪದ್ಯದಲ್ಲಿ ಭಗವದ್ದಿವ್ಯದೇಶವಾಸ ಮಾಡುವವರ ವಿಷಯದಲ್ಲಿ ದಯಾ ದೇವಿಯು ಮಾಡುವ ಉಪಕಾರವು ಹೇಳಲ್ಪಟ್ಟಿತು. ಈ ಪದ್ಯದಲ್ಲಿ ಸಂಸಾರಸಾಗರದಲ್ಲಿ ಬಿದ್ದು ಒದ್ದಾಡುವಂತಹ ಎಲ್ಲರಿಗೂ ಅವಳು ಮಾಡುವ ಹಿತವು ನಿರೂಪಿಸಲ್ಪಡುವುದು.

ಹಿಂದಿನವರು ಹೇಳಿರುವಂತೆ ಶ್ರೀನಿವಾಸನ ದಯೆಯನ್ನು ಕವಿಯು ಒಂದು ನಾವೆಯನ್ನಾಗಿ ಚಿತ್ರಿಸಿರುವರು. ಅನೇಕ ಅಲೆಗಳಿಂದಲೂ ಭಯಂಕರ ಜಂತುಗಳಿಂದಲೂ ಕೂಡಿರುವ ಒಂದು ಸಮುದ್ರವನ್ನು ನಾವೆಯಿಂದ ದಾಟಬೇಕಾದರೆ, ಆ ನಾವೆಯು ಸಮುದ್ರದ ದಾರಿಯನ್ನೂ, ಆ ನಾವೆಯ ಗತಿಯನ್ನೂ (ಶಕ್ತಿಯನ್ನೂ) ತಿಳಿದು ಕೊಂಡಿರುವ ನಾವಿಕರಿಂದ ನಡೆಸಲ್ಪಡಬೇಕು. ಅವರು ನಡೆಸಿಕೊಂಡು ಹೋಗುವ ಸ್ಥಳಕ್ಕೇ ಅದರಲ್ಲಿರುವ ಜನರನ್ನು ಅದು ಸೇರಿಸಬಲ್ಲದು ಮತ್ತು ನಾವೆಯು ಅನೇಕ ಹಗ್ಗಗಳಿಂದ ಧೃಢವಾಗಿಯೂ, ಚೆನ್ನಾಗಿಯೂ ಕಟ್ಟಲ್ಪಟ್ಟಿರಬೇಕು. ಇಲ್ಲದಿದ್ದರೆ ಸೇರಬೇಕಾದ ಸ್ಥಳವನ್ನು ಸೇರಲಾರದು. ಹಾಗೆಯೇ ದಯೆಯೂ ಒಂದು ನೌಕೆಯಂತಿರುವುದು. ಇದನ್ನು ನಡೆಸುವವರು ಆಚಾರ್ಯರುಗಳು. ಆಚಾರ್ಯರುಗಳು ನಡೆಸಿಕೊಂಡು ಹೋಗುವ ದಾರಿಯಲ್ಲಿಯೇ ದಯೆಯು ಹೋಗುವುದು. ಯಾವಾಗ, ಎಲ್ಲಿ ಹೇಗೆ ನಡೆಸಿಕೊಂಡು ಹೋಗಬೇಕೆಂಬ ಎಲ್ಲ ವಿಷಯಗಳನ್ನೂ ತಿಳಿದವರು ಆಚಾರ್ಯರುಗಳೆ. ಭಗೀರಥನ ದಾರಿಯನ್ನು ಗಂಗೆಯು ಅನುಸರಿಸಿದಂತೆ ಆಚಾರ್ಯರ ದಾರಿಯನ್ನು ದಯೆಯು ಅನುಸರಿಸುವುದು. ನಾವಿಕನ ಅನುಮತಿಯಿಲ್ಲದೆ ನಾವೆಯು ಹೇಗೆ ಚಲಿಸಲಾರದೋ ಹಾಗೆಯೇ ಆಚಾರ್ಯರ ಅನುಗ್ರಹವಿಲ್ಲದೆ ದಯೆಯು ಉಂಟಾಗಲಾರದು. ಆಚಾರ್ಯರ ಮೂಲಕವಾಗಿಯೇ ಅದು ನಮ್ಮನ್ನು ಕಾಪಾಡುವುದು. ಹಾಗೆಯೇ ಭಗವಂತನ ಜ್ಞಾನಬಲವೇ ಮೊದಲಾದ ಎಲ್ಲ ಕಲ್ಯಾಣಗುಣಗಳೆಂಬ ಹಗ್ಗಗಳಿಂದ ದಯೆಯು ದೃಢವಾಗಿ ಕಟ್ಟಲ್ಪಟ್ಟಿದೆ. ಅಂದರೆ, ಆ ಎಲ್ಲ ಗುಣಗಳನ್ನೂ ತನಗೆ ಉಪಕರಣಗಳನ್ನಾಗಿ ಮಾಡಿಕೊಂಡು ಅವುಗಳೊಡನೆ ಪೂರ್ಣವಾದ ಸಂಬಂಧವನ್ನು ಹೊಂದಿ ತಾನು ಮಾಡುವ ಕಾರ್ಯದಲ್ಲಿ ಅವುಗಳೊಡನೆ ಅತ್ಯಂತ ಸಹಕಾರಿಗಳನ್ನಾಗಿ ಮಾಡಿಕೊಳ್ಳುವುದು. ಈ ದಯಾನೌಕೆಯಲ್ಲಿ ಮತ್ತೊಂದು ವೈಲಕ್ಷಣ್ಯವುಂಟು. ಸಾಮಾನ್ಯವಾದ ನೌಕೆಯ ಆಳವಾಗಿರುವ ಪ್ರದೇಶದಲ್ಲಿ ಮಾತ್ರ ಹೋಗಿ ತೀರವನ್ನು ಸೇರಬಲ್ಲದು. ಆದರೆ ಈ ದಯಾ ನೌಕೆಯು ಎತ್ತರವಾದ ಭೂಪ್ರದೇಶದಲ್ಲಿಯೂ (ಮಲೆಯ ಮೇಲೂ) ಹೋಗಿ ದಡವನ್ನು ಸೇರಿ, ತನ್ನನ್ನು ಆಶ್ರಯಿಸಿರುವವರನ್ನೂ ಸೇರಿಸುವುದು. ಆದ್ದರಿಂದ ಈ ದಯೆಯನ್ನು ನೌಕೆಯೆಂದು ಹೇಳಲು ಅಡ್ಡಿಯಿಲ್ಲ.

ಯದೃಚ್ಛಾಸುಕೃತವೇ ಮೊದಲಾದವುಗಳಿಂದ ಸದಾಚಾರ್ಯ ಸಂಪದವು ಏರ್ಪಟ್ಟ ಆ ಆಚಾರ್ಯರುಗಳಿಂದ ಭಗವಂತನ ದಯೆಗೆ ವಿಷಯಿಭೂತರಾಗಿ ಮಾಡಲ್ಪಟ್ಟ ಸಂಸಾರಿಗಳಾದ ಜೀವರು ಆ ದಯಾದೇವಿಯ ಅನುಗ್ರಹದಿಂದ ಸಂಸಾರವೆಂಬ ಸಮುದ್ರಕ್ಕೆ ದಡವೆಂದು ಪರಿಗಣಿಸಲ್ಪಟ್ಟ ಪರಮ ಪುರುಷನನ್ನು (ಶ್ರೀನಿವಾಸನನ್ನು) ಹೊಂದುವರು. "ಅನುಚರ ಶಕ್ತ್ಯಾದಿಗುಣಾಂ" ಎಂಬ ಪದ್ಯದಲ್ಲಿ ಹೇಳಿರುವಂತೆ ಈ ದಯೆಗೆ ಭಗವಂತನ ಇತರ ಗುಣಗಳೆಲ್ಲ ಪರಿಚರ್ಯೆಯನ್ನು ಮಾಡಿ ಇವಳು ಮಾಡುವ ಕಾರ್ಯದಲ್ಲಿ ಅತ್ಯಂತ ಅನುಕೂಲಗಳಾಗಿವೆ ಎಂಬ ಶಾಸ್ತ್ರಾರ್ಥವು ಇಲ್ಲಿ ವಿವಕ್ಷಿತವಾದುದು.

"ಸ್ಥಿರತರಂ" ಎಂಬಲ್ಲಿ "ಸ್ಥಿರಚರಂ" ಎಂಬ ಪಾಠವನ್ನು ಕೆಲವರು ಆದರಿಸುವರು. ನಾವೆಯು ದೃಢವಾಗಿಯೂ ಇರಬೇಕು ಮತ್ತು ಚಲಿಸಲು ಅನುಕೂಲವಾಗಿಯೂ ಇರಬೇಕು. ಇವುಗಳಲ್ಲಿ ಯಾವುದೊಂದು ಗುಣವಿಲ್ಲದಿದ್ದರೂ ನಾವೆಯಿಂದ ಪ್ರಯೋಜನವಿಲ್ಲವೆಂಬ ಸ್ವಾರಸ್ಯವಾದ ಅರ್ಥವು ಈ ಪಾಠಾಂತರದಿಂದ ವ್ಯಕ್ತವಾಗುವುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ
ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ
ಸಂಪುಟ - 50 ಸಂಚಿಕೆ - 7

ಶ್ರೀ ವಿಕಾರಿನಾಮ ಸಂವತ್ಸರ
ಮಾರ್ಗಶಿರ - ಪುಷ್ಯ ಮಾಸ
ಸಂಚಿಕೆ

ಡಿಸೆಂಬರ್ 2019



## ವಿಷಯಸೂಚಿಕೆ

ಸಂಪಾದಕೀಯ 6
ಧನುರ್ಮಾಸದ ವಿಶಿಷ್ಟತೆ 7
- ಎಸ್. ವೆಂಕಟರಾಘವನ್
ಗೀತಾಜಯಂತಿ ಭಗವದ್ಗೀತೆ ಬದುಕಿನ ಭಾಷ್ಯ 12
- ಡಾ|| ಗುರುರಾಜ ಪೋಶೆಟ್ಟಿಹಳ್ಳಿ
ಶ್ರೀ ವಿಲ್ಲಿಪುತ್ತೂರು 15
- ಶ್ರೀಮತಿ. ಗೀತಾ
ರಿಷಭದೇವನ ಅವತರಣಿಕೆ 17
- ಡಿ. ಎಸ್. ಬದ್ರಿನಾಥ್
ಶ್ರೀ ರಾಮ ಸಮರ್ಥ 20
- ಶ್ರೀಮತಿ. ಕೆ.ವಿ. ಪದ್ಮಾವತಿ
ಕೃಷ್ಣಂ ವಂದೇ ಜಗದ್ಗುರಂ 23
-ಶ್ರೀಮತಿ. ಎ. ಗೀತವೀರರಾಘವನ್
ಹಸಿರುತೋರಣ
ಗೋದಾದೇವಿ ತಿರುಪ್ಪಾವೈ ತತ್ತ್ವ 31
- ಕೆ. ನರಸಿಂಹಮೂರ್ತಿ
ವಿವಾಹ ಮತ್ತು ಮಹತ್ತ್ವ 36
-ಬಿ. ಆರ್. ಶ್ರೀಕಂಠಯ್ಯ
ಚಂಪಾ ಷಷ್ಠಿ 40
- ಶ್ರೀಮತಿ. ಸುಮಚಂದ್ರಶೇಖರ್
ನಮ್ಮ ಆರೋಗ್ಯಕ್ಕಾಗಿ ಪ್ರಕೃತಿಯ ಕೊಡುಗೆ - ಹೊಂಗೆ 46
- ಶ್ರೀಮತಿ
ಗೀತಾಜಯಂತಿ 48
- ಡಿ.ಎಸ್.ಭೂಮಿಕ
ದಿವ್ಯಕ್ಷೇತ್ರ ತಿರುಮಲೆ 50
- ಶ್ರೀಮತಿ. ಬಿ. ಪದ್ಮಜ

ಮುಖಚಿತ್ರ - ಶ್ರೀ ಪದ್ಮಾವತಿ ಅಮ್ಮನವರ ಪುಷ್ಪಯಾಗ ಮಹೋತ್ಸವ
ಹಿಂಬದಿಚಿತ್ರ - ಗೋದಾ ಅಲಂಕಾರದಲ್ಲಿ ಗೋವಿಂದನು

ಗೌರವ ಸಂಪಾದಕರು
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

ಪ್ರಧಾನ-ಸಂಪಾದಕರು
ಡಾ||ಕೆ.ರಾಧಾರಮಣ,ಎಮ್.ಎ.ಎಮ್.ಫಿಲ್.ಪಿಎಚ್.ಡಿ.

ಸಂಪಾದಕರು
ಡಾ|| ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

ಮುದ್ರಣ
ಶ್ರೀ ಆರ್.ವಿ. ವಿಜಯಕುಮಾರ್, ಬಿ.ಎ.ಬಿ.ಇಡಿ.,
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

ಡಿ.ಟಿ.ಪಿ.
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

ಛಾಯಗ್ರಹಣ:
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

| | | |
|---|---|---|
| ಬಿಡಿ ಪ್ರತಿ | ರೂ. | 05/- |
| ವಾರ್ಷಿಕ ಚಂದಾ | ರೂ. | 60/- |
| ಆಜೀವ ಚಂದಾ | ರೂ. | 500/- |
| ವಿದೇಶಿ ವಾರ್ಷಿಕ ಚಂದಾ | ರೂ. | 850/- |

ಇತರ ವಿವರಗಳಿಗೆ
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ: 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ
ದೂರವಾಣಿ ಸಂಖ್ಯೆ
0877 - 2277777,
2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800 - 425 - 4141

ಲೇಖನ/ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ-517507
ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ
ವೀಕ್ಷಿಸಬಹುದು.

ಸಪ್ತಗಿರಿಯಲ್ಲಿ ಪ್ರಕಟವಾಗುವ
ಲೇಖನಗಳಲ್ಲಿನ ಅಭಿಪ್ರಾಯಗಳು
ಸಂಪಾದಕವರ್ಗದ, ಪತ್ರಿಕೆಯ,
ಅಭಿಪ್ರಾಯಗಳೇ ಆಗಿರಬೇಕು
ಎಂದಿಲ್ಲ. - ಸಂಪಾದಕ

ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@
tirumala.org



# ಕೃಷ್ಣಂ ವಂದೇ ಜಗದ್ಗುರಮ್

## ಸಂಪಾದಕೀಯ

ಭಗವದ್ಗೀತೆ ಎಲ್ಲಾ ಕಾಲಕ್ಕೂ ನಿದರ್ಶನವಾಗಿರುವ ಮಹಾನ್ ಗ್ರಂಥ. ಎಲ್ಲರಿಗೂ, ಎಲ್ಲೆಡೆಯಲ್ಲೂ ಸದಾ ಮಾರ್ಗದರ್ಶನ ನೀಡುವಂತಹಾ ಪವಿತ್ರ ಗ್ರಂಥ. ಈ ಗ್ರಂಥದಲ್ಲಿ ಜಗಜ್ಜನಿತವಾದ ಸತ್ಯಗಳು, ಸಮಕಾಲೀನ ಉಪಯುಕ್ತ ಧರ್ಮಗಳು, ಅನೇಕವು ಇವೆ. ಅದಕ್ಕೇ ಇದು ಇಂದಿನ ಕಾಲದೊಂದಿಗೇ ನಡೆದುಕೊಂಡು ಬರುತ್ತಿದೆ. ನಿಜ ಹೇಳಬೇಕೆಂದರೆ ಭಗವದ್ಗೀತೆಯನ್ನು ಶ್ರೀ ಕೃಷ್ಣನು ಅರ್ಜುನನಿಗೆ ಪ್ರಬೋಧಿಸಿದ್ದು ಕುರುಕ್ಷೇತ್ರದಲ್ಲೇ ಆದರೂ ಆ ಉಪದೇಶವು ಅನುದಿನವೂ ಎಲ್ಲಾ ಮಾನವ ಹೃದಯಕ್ಷೇತ್ರದಲ್ಲಿ ರಾರಾಜಿಸುತ್ತಿದೆ. ಕುರುಕ್ಷೇತ್ರ ಧರ್ಮಕ್ಷೇತ್ರ. ಇಂದ್ರೀಯಗಳೆಂಬ ರಥಾಶ್ವಗಳನ್ನು ಹಿಡಿತದಲ್ಲಿಟ್ಟುಕೊಳ್ಳುವಂತಹಾ ಕೃಷ್ಣನು ಸರ್ವಾಂತರ್ಯಾಮಿ.

ಭಾರತೀಯ ಆಧ್ಯಾತ್ಮಿಕ ಸಂಸ್ಕೃತಿಯಲ್ಲಿ ಕೃಷ್ಣನು ಒಬ್ಬ ಗುರು, ಪರಿಪೂರ್ಣನಾದಂತಹವನು. ಅರ್ಜುನನು ಅವನ ಶಿಷ್ಯ, ಸಾಧಕ. ಇದು ಒಂದು ಗುರುಶಿಷ್ಯರ ಸಂಪ್ರದಾಯ. ಈ ಗೀತೆಯಲ್ಲಿ ಕೃಷ್ಣನು, ಜೀವನವೆಂಬ ಕುರುಕ್ಷೇತ್ರದಲ್ಲಿ ಮನುಜನು ಐಹಿಕ ಅಶ್ವಗಳು ಅಂದರೆ ಇಂದ್ರಿಯಗಳನ್ನು ಹಿಡಿತದಲ್ಲಿ ಇಟ್ಟುಕೊಂಡರೆ ಆತ್ಮಾನಂದಾನುಭೂತಿಗೆ ನಿಲಯನಾಗಬಲ್ಲನೆಂದು ಸಾರುತ್ತಿದ್ದಾನೆ. ಅಕ್ಷರ ಗೀತೆ ನಮ್ಮ ಕಣ್ಣ ಮುಂದೆ ಇದೆ. ಆ ಉಪದೇಶ ಮಾನವ ಸಮಾಜಕ್ಕೆ ಹಿತೋಪದೇಶವಾಗುತ್ತದಾದ್ದರಿಂದ ಶ್ರೀಮದ್ಭಗವದ್ಗೀತೆ ಇಂದಿಗೂ ನಿತ್ಯ ನೂತನವಾಗಿ ಆವಿಷ್ಕಾರಗೊಳ್ಳುತ್ತಲೇ ಇದೆ. ಮನುಜರಿಗೆ ಅನುಗಾಲವೂ ಅದರ ಅಗತ್ಯವಿದ್ದೇ ಇದೆ.

ಧರ್ಮಕ್ಷೇತ್ರವಾದ ಕುರುಕ್ಷೇತ್ರದಲ್ಲಿ ಕೃಷ್ಣನು ಅರ್ಜುನನಿಗೆ ಮಾಡಿದ ಗೀತೋಪದೇಶವೇ ಕಾಲಾತೀತವಾದ ಆತ್ಮಜ್ಞಾನ ಸಂಕಲನ. ಇಷ್ಟಕ್ಕೂ ಈ ಕ್ಷೇತ್ರದ ವಿಶೇಷತೆ ಏನೆಂದರೆ ಕುರುಕ್ಷೇತ್ರದಲ್ಲಿ ವೀರಮರಣವನ್ನು ಹೊಂದಿದವರು ಸ್ವರ್ಗ ವಾಸಿಗಳಾಗುತ್ತಾರೆಂದು ಕುರುರಾಜನಿಗೆ ಬ್ರಹ್ಮ ಅಭಯನೀಡಿದ್ದ!

ಸೃಷ್ಟಿಯ ಆರಂಭದಿಂದಲೂ ಭರತಖಂಡವನ್ನು ಆಧಾರವಾಗಿರಿಸಿಕೊಂಡಿರುವ ಭೂಗ್ರಹ ಚರಿತ್ರೆಯೇ ಮಹಾಭಾರತ! ಮಹಾಭಾರತವನ್ನು ಮೀರಿದ ಮತ್ತೊಂದು ಮಹಾ ಗ್ರಂಥ ಪ್ರಪಂಚ ಸಾಹಿತ್ಯದಲ್ಲೇ ಇಲ್ಲ. ಎಷ್ಟು ಸಾವಿರ ವರ್ಷಗಳು ಮುಂದುರುಳುತ್ತಿದ್ದರೂ ನಮ್ಮಲ್ಲಿನ ಪ್ರತೀ ಒಬ್ಬರೂ ಗೀತೆಯಲ್ಲಿ ನಮ್ಮ ಸ್ವರೂಪವನ್ನೇ ಕಾಣಬಹುದು.

ನಮ್ಮ ಮನಸ್ತತ್ವವನ್ನು, ನಮ್ಮ ವ್ಯಕ್ತಿತ್ವವನ್ನು ನಮ್ಮ ತತ್ತ್ವವನ್ನು ನಾವೇ ಗೀತೆಯಲ್ಲಿ ನೋಡಬಹುದು. ಕುರುಕ್ಷೇತ್ರದ ಸಂಗ್ರಾಮದ ಸಮಯದಲ್ಲಿ ಕೃಷ್ಣನು ಅರ್ಜುನನಿಗೆ ತಿಳಿಸಿದ ಕರ್ಮ, ಭಕ್ತಿ , ಜ್ಞಾನ, ಯೋಗಗಳ ತ್ರಿಪುಟಿ ಭಗವದ್ಗೀತೆ ಹದಿನೆಂಟು ಅಧ್ಯಾಯಗಳಾಗಿ, ಮೂರು ವಿಭಾಗಗಳಾಗಿ, ಏಳುನೂರು ಶ್ಲೋಕಗಳಿಂದ ಕೂಡಿದ್ದೂ, ಇಂದಿಗೂ ಸಂಪೂರ್ಣವಾದ, ಸಮಗ್ರ ವಿಶ್ಲೇಷಣೆಗೆ ನಿಲುಕದೇ ಇರುವಂತಹ ಮಹಾಗ್ರಂಥ.

ಭಗವದ್ಗೀತೆ, ವೃತ್ತಿ-ಸಾಮಾಜಿಕ - ಆತ್ಮ ಧರ್ಮಗಳ ಪರವಾಗಿ ತಿರೋಗಮಿಸಿದೇ ಕರ್ತವ್ಯ ಪಾಲನೆಯನ್ನು ಹೇಗೆ ಮಾಡಬೇಕೆಂದು ಸ್ಪಷ್ಟ ಪಡಿಸುತ್ತಿದೆ. ಈ ಕರ್ತವ್ಯಕ್ಕೆ ಮತ್ತೊಂದು ಮುಖವೇ ಕರ್ಮ ಫಲಾಪೇಕ್ಷೆಯಿಲ್ಲದೆ ಕರ್ತವ್ಯವನ್ನು ಆಚರಿಸುವುದೇ ಮುಖ್ಯವೆಂದು ಗೀತೆಯ ಸಾರ. ಮಾನವ ಜನ್ಮ ಎನ್ನುವುದು ಕೇವಲ ಈ ದೇಹಕ್ಕೆ ಮಾತ್ರಾ ಸೀಮಿತವಲ್ಲ. ದೇಹವೆಂದರೆ ಕ್ಷರ - ನಶಿಸುವುದು - ಅಶಾಶ್ವತವಾದುದು. ಆದ್ದರಿಂದ ಈ ಸ್ಥಿತಿಗಳಿಗೆಲ್ಲಾ ಸಾಕ್ಷಿಯಾಗಿ ನಿಲ್ಲುತ್ತಾ ಅತೀತವಾಗುವುದೇ ಮುಖ್ಯ. ಅದು ಆತ್ಮ ಜೀವನ.

ಆತ್ಮ ಎಂದರೆ ಅಕ್ಷರ - ನಾಶವಾಗದೇ ಇರುವುದು - ಶಾಶ್ವತವಾದುದು - ಅಮೃತ. ಪುನಃ ಪುನಃ ಜನಿಸುವುದೆಲ್ಲಾ ಒಂದು ಮಾಯಾವಲಯ. ಈ ಭ್ರಮಾನ್ವಿತ ದೃಶ್ಯದಿಂದ ಯೋಗ ಧ್ಯಾನಾದಿ ಮಾರ್ಗಗಳ ಮೂಲಕ ಆತ್ಮಕ್ಕೆ ಅತೀಂದ್ರೀಯತೆಯನ್ನು ಪಡೆಯಬಹುದೆಂದು ಗೀತೆಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಗುರುಶಿಷ್ಯ ಸಂವಾದದ ರೂಪದಲ್ಲಿ ಚೈತನ್ಯ ಸ್ಥಿತಿಗಳ ರಹಸ್ಯಗಳನ್ನು ಕಂಡು ಕೊಳ್ಳುವುದನ್ನು ತಿಳಿಸಿದೆ. ನಮ್ಮಲ್ಲಿನ ಪ್ರತೀಯೊಬ್ಬರಿಗೂ ಒಂದು ‘ಖಗೋಳ ಕರ್ತವ್ಯ” ಸಾರುವುದೇ ಈ ಗೀತೆಯ ವಿಶೇಷತೆಯಾಗಿದೆ. ಕೃಷ್ಣನು ಕೇವಲ ಅರ್ಜುನನಿಗೆ ಅಲ್ಲದೇ ನಮಗೂ ತಿಳಿಸಿದ್ದಾನೆ. ಗೀತೆಯಲ್ಲಿ ನಿಷ್ಕಾಮಕರ್ಮ ಸಿದ್ಧಾಂತವನ್ನು ಉಪದೇಶಿಸಿ, ಮಾನವನು ಸಕಲ ಕರ್ಮಗಳನ್ನು ಮಾಡುತ್ತಿದ್ದರೂ ಕರ್ಮ ಬಂಧದಲ್ಲಿ ಸಿಲುಕಿಕೊಳ್ಳದೇ ಯಾವ ರೀತಿ ಮುಕ್ತನಾಗಬಹುದು ಎಂದು ಅಚ್ಚುಕಟ್ಟಾಗಿ ತಿಳಿಸಲಾಗಿದೆ. ಗೀತೆ - ಸಕಲ ಉಪನಿಷತ್ತುಗಳ ಸಾರವಾಗಿದೆ. ಯೋಗಶಾಸ್ತ್ರ, ಧರ್ಮಶಾಸ್ತ್ರ, ಕರ್ಮಶಾಸ್ತ್ರ, ಜ್ಞಾನಶಾಸ್ತ್ರ - ಎಲ್ಲವನ್ನೂ ಮೇಳೈಸಿ ಒಂದು ಒಳ್ಳೆಯ, ಮಾನವ ಜೀವನದ ಆನಂದ ರಹಸ್ಯವನ್ನು - ಅರ್ಜುನನ ನಿಮಿತ್ತವಾಗಿ ಲೋಕಕ್ಕೆ ನೀಡಿದ ಅತ್ಯುತ್ತಮವಾದ ಗ್ರಂಥರಾಜ! ಗೀತೋಪದೇಶದೊಂದಿಗೇ ಕೃಷ್ಣನು ಜಗದ್ಗುರವಾದ. ಗೀತೆ ಆವಿರ್ಭವಿಸಿದ ಪುಣ್ಯದಿನವನ್ನು ಪುರಸ್ಕರಿಸಿಕೊಂಡು ಆ ದಿನವನ್ನು ಪ್ರತೀ ಭಾರತೀಯನೂ ಒಂದು ಹಬ್ಬವೆಂದು ಆಚರಿಸಿಕೊಂಡು ಎಲ್ಲಾ ರೀತಿಯಲ್ಲೂ ಶುಭ ಫಲಗಳನ್ನು ಪಡೆಯಬೇಕೆಂದು ನಮ್ಮ ಆಸೆ!



# ಧನುರ್ಮಾಸದ ವಿಶಿಷ್ಟತೆ

ಎಸ್. ವೆಂಕಟರಾಘವನ್
- 9845793917

ಕಷ್ಟವೇನು ಮನುಜ ಕೃಷ್ಣನ ಭಜಿಸಲು
ನಷ್ಟವಿಲ್ಲ ವಯ್ಯಾ ಶ್ರೀ ಹರಿಯ ಭಜಿಸಲು ।
ದುಷ್ಟ ರಾಕ್ಷಸ ನಾಶಕ ಜಗದ್ರಕ್ಷಕನಿವನು
ಇಷ್ಟದಿಂದ ಭಜಿಸೋ ನೆನೆಯೋ ಮನದಲಿ॥
ಅಷ್ಟಮ ತಿಥಿಯಲಿ ಅಷ್ಟಮ ಗರ್ಭದಲ್ಲಿ ಕೊಟ್ಟ
ವರವನ್ನು ದೇವಕಿ ವಸುದೇವ ಸುತನಾಗಿ ।
ಸೋದರ ಮಾವ ದುಷ್ಟ ಕಂಸನ ಮುಷ್ಠಿ
ಇಂದ ಎದೆ ಬಡಿದು ನೆಲಕೊರಿಗಿಸಿದ॥
ಯದುಕುಲವನು ಉಳಿಸಲು ಎತ್ತಿದನಯ್ಯಾ ಗೋವರ್ಧನ
ಗಿರಿಯನು ಉಂಗುಷ್ಟವ್ರೂ ಯಾಕೆ ಕಿರು ಬೆರಳಿನಿಂದ ।
ಉತ್ತಿಷ್ಠನಾತನೆ ಗೋವಿಂದನಾತನೆ
ಗೋವಿನ ಸಂರಕ್ಷಣೆ ಮಾಡುತಲಿದ್ದನು ॥
ಸಂಕಟ ಬಂದಾಗ ಸನ್ನಿಹಿತ ಸ್ನೇಹಭಾವ
ಬಡವನಾದ ಕುಚೇಲನಿಗೆ ಕೊಟ್ಟನಯ್ಯಾ ಸಿರಿ ಸಂಪದೆ।
ಕೆಟ್ಟ ಕೌರವರ ದುಷ್ಟ ಕೆಲಸಕೆ ನಾರಿ ದ್ರೌಪದಿಯ ಮಾನವನುಳಿಸಿದ॥
ಮದವೇರಿದ ಕಾಳಿಂಗನ ಫಣಿಯ ಮೇಲೆ
ನಾಟ್ಯವಾಡಿದನಯ್ಯಾ ನರಹರಿ ಆತನೇ ।
ಸಂಕಟ ಹರಿಸಲು ಧರ್ಮವ ಉಳಿಸಲು
ನಿಂತನೋಡಿರಯ್ಯ ಸಪ್ತಗಿರಿಯ ಮೇಲೆ,
ಶ್ರೀ ಶ್ರೀನಿವಾಸ ಜಗನ್ಮಾತೆ ಪದ್ಮಾವತಿ ಜತೆಗೂಡಿ॥

ಕಾಲ ಚಕ್ರದಲ್ಲಿ ಕಾಲದ ಗಣನೆ ದಿನ. ರಾತ್ರಿ, ವಾರ, ಮಾಸ ಮತ್ತು ವರ್ಷ ಮಾಪಕದಲ್ಲಿ ಗಣಿಸಲಾಗುವುದು. ಗ್ರಹಗಳಿಗೆ ಕಾಂತಿ ಮತ್ತು ಶಕ್ತಿ ಕೊಡುವವರು ಸೂರ್ಯ ದೇವರು. ನವಗ್ರಹಗಳಿಗೆ ಸೂರ್ಯ ಅಧಿಪತಿ. ಭೂಮಿಗೆ ಚಂದ್ರ ಪ್ರಕೃತಿ ಸಿದ್ಧವಾದ ಉಪಗ್ರಹ. ಸೂರ್ಯನ ಉಷ್ಣತೆ, ಸೌರಶಕ್ತಿ ಮತ್ತು ಚಂದ್ರನ ತಂಪು ಕಿರಣಗಳು ಭೂಮಿಯನ್ನು ತಾಕಿ ಜೀವಕೋಟಿಗೆ ಆಧಾರವಾಗಿರುವರು. ಚಂದ್ರನ ಚಲನೆ ಅನುಸರಿಸಿ ಅಮಾವಾಸ್ಯೆ ಹುಣ್ಣಿಮೆಗಳ ಆಧಾರದ ಮೇಲೆ ಮಾಸ ಗಣನೆ ಮಾಡುವ ಪದ್ಧತಿಗೆ ಚಾಂದ್ರಮಾನ ಎಂದು ಕರೆಯಲಾಗುವುದು. ಚಂದ್ರ ಹುಣ್ಣಿಮೆಯಂದು ಇರುವಾಗ ನಕ್ಷತಾನುಸಾರವಾಗಿ ಮಾಸ ಮೊದಲಾಗುವುದು. ಚಿತ್ರಾ ನಕ್ಷತ್ರವಿದ್ದರೆ ಚೈತ್ರ ಮಾಸ. ಸೂರ್ಯರಾಶಿಯಿಂದ ರಾಶಿಗೆ ಪ್ರವೇಶಿಸಲು ಒಂದು ತಿಂಗಳು ಬೇಕಾಗುತ್ತದೆ. ಸೂರ್ಯ ನಾರಾಯಣ ಮೇಷರಾಶಿ ಮೊದಲು ಹನ್ನೆರಡು ರಾಶಿಯಲ್ಲಿ ಸಂಚರಿಸುವರು. ಸೂರ್ಯ ಧನುರಾಶಿಯಲ್ಲಿ ಪ್ರವೇಶವಾದಾಗ ಧನುರ್ಮಾಸ ಆರಂಭವಾಗುವುದು. ಅದರಂತೆಯೇ ಸೂರ್ಯ ಧನುರಾಶಿಯಲ್ಲಿ ಪ್ರವೇಶ ಮಾಡಿ ಮಕರರಾಶಿಗೆ ಪ್ರವೇಶ ಮಾಡಲು ಒಂದು ತಿಂಗಳ ಅವಧಿ ಬೇಕಾಗುತ್ತದೆ. ಈ ಒಂದು ತಿಂಗಳನ್ನು "ಧನುರ್ಮಾಸ"ಎಂದು ಕರೆಯುತ್ತಾರೆ. ಈ ಮಾಸವನ್ನು ಶೂನ್ಯ ಮಾಸವೆಂದೂ ಕರೆಯುತ್ತಾರೆ. ಚಾಂದ್ರಮಾನ ಮಾಸಗಳಲ್ಲಿ ಮಾರ್ಘಶಿರ ಮಾಸ, ಸೌರಮಾನದ ಪ್ರಕಾರ ಧನುರ್ಮಾಸ ಎಂದು ಕರೆಯಲಾಗುವುದು. ಉತ್ತರಾಯಣ ಆರು ತಿಂಗಳು ಮತ್ತು ದಕ್ಷಿಣಾಯಣ ಆರು ತಿಂಗಳು. ದಕ್ಷಿಣಾಯಣ ದೇವತೆಗಳಿಗೆ ರಾತ್ರಿ ಮತ್ತು ಉತ್ತರಾಯಣ ಹಗಲು. ಧನುರ್ಮಾಸ ದಕ್ಷಿಣಾಯನದ ಕೊನೆಯ ಮಾಸ ಆದುದರಿಂದ ದೇವತೆಗಳಿಗೆ ಇದು ಬ್ರಾಹ್ಮೀ ಮುಹೂರ್ತ ಇದ್ದಂತೆ ಈ ಮಾಸದಲ್ಲಿ ದೈವ ಪ್ರಾರ್ಥನೆ. ಪೂಜೆ, ವ್ರತ ಆಚರಣೆ ಮಾಡುವುದರಿಂದ ವಿಶೇಷ ಫಲ ಪ್ರಾಪ್ತಿ ಆಗುವುದು.

### ಧನುರ್ಮಾಸದಲ್ಲಿ ವಿಷ್ಣು ಆರಾಧನೆ :

ಹಿಂದೂ ಪಂಚಾಂಗದ ಹನ್ನೆರಡು ಮಾಸಗಳಲ್ಲಿ ಧನುರ್ಮಾಸಕ್ಕೆ ವಿಶೇಷ ಮಹತ್ವವಿದೆ. ಭಗವದ್ಗೀತೆ ಬೋಧನೆಯ ಹತ್ತನೇ ಅಧ್ಯಾಯದಲ್ಲಿ ಶ್ರೀ ಕೃಷ್ಣ ಪರಮಾತ್ಮ ವಿಭೂತಿ ರೂಪಗಳನ್ನು ತಿಳಿಸಿದರು.

"ನಾಂತೋಽಸ್ತಿ ಮಮ ದಿವ್ಯಾ ನಾಂ<br>
ವಿಭೂತೀ ನಾಂ ಪರಂತಪ ಏಷ ತೂದ್ದೇ ಶತಃ<br>
ಪ್ರೋಕ್ತೋ ವಿಭೂತೇ ರ್ವಿಸ್ತರೋ ಮಯಾ"

ಪರಂತಪನೇ! ನನ್ನ ದಿವ್ಯ ವಿಭೂತಿಗಳಿಗೆ ಕೊನೆಯೇ ಇಲ್ಲ. ನನ್ನ ವಿಭೂತಿಗಳು ವಿಸ್ತಾರವಾಗಿದ್ದರೂ ಸಂಕ್ಷಿಪ್ತವಾಗಿ ಹೇಳಿದ್ದೇನೆ!

"ಬೃಹತ್ಸಾಮ ತಥಾ ಸಾಮ್ನಾಂ<br>
ಗಾಯತ್ರಿ ಛಂದಸಾಮಹಮ್॥<br>
ಮಾಸಾನಾಂಮಾರ್ಗ ಶೀರ್ಷೋಽಹ<br>
ಮೃತೂನಾಂ ಕುಸುಮಾಕರಃ"

ಕೃಷ್ಣ ಪರಮಾತ್ಮ ಅರ್ಜುನನಿಗೆ ತಾನು ಎಲ್ಲೆಲ್ಲಿ ಇದ್ದೇನೆಂದು ವಿವರಿಸುತ್ತಾ "ಗಾಯನ ಮಾಡಲು ಯೋಗ್ಯವಾದ ಶ್ರುತಿಗಳಲ್ಲಿ ಬೃಹತ್ಸಾಮವು ನಾನೇ! ಹಾಗೆಯೇ ಛಂದಸ್ಸುಗಳಲ್ಲಿ ಗಾಯತ್ರಿ ಛಂದಸ್ಸು ನಾನು! ತಿಂಗಳುಗಳಲ್ಲಿ ಮಾರ್ಗಶೀರ್ಷವೂ, ಋತುಗಳಲ್ಲಿ ವಸಂತ ಋತುವು ನಾನೇ ಆಗಿದ್ದೇನೆ" ಹಾಗಾಗಿ ಮಾರ್ಗಶೀರ್ಷ ತಿಂಗಳಿಗೆ ಪ್ರಾಮುಖ್ಯತೆ ಇದೆ. ಉತ್ಥಾನ ದ್ವಾದಶಿಯಂದು ನಿದ್ರೆಯಿಂದ ಎದ್ದ ಭಗವಂತನಿಗೆ ಧನುರ್ಮಾಸವು ಅರುಣೋದಯ. ಶ್ರೀಹರಿಯ ಪೂಜೆಗೆ ವಿಶೇಷ ಕಾಲ. ಶಾಸ್ತ್ರಗಳು ಈ ಮಾಸವನ್ನು ದೇವತಾ ಕಾರ್ಯಗಳಿಗೆ ಮಾತ್ರ ಮೀಸಲಾಗಿ ಇಟ್ಟಿದೆ. ಈ ಕಾಲದಲ್ಲಿ ಮದುವೆ ಮುಂತಾದ ಶುಭ ಕಾರ್ಯಗಳನ್ನು ಮಾಡುವಂತಿಲ್ಲ.

### ಬ್ರಾಹ್ಮೀ ಮುಹೂರ್ತ ಮತ್ತು ಶ್ರೀಹರಿ ಪೂಜೆ

ವಾಸವಿರುವ ಸ್ಥಳದಲ್ಲಿ ಸೂರ್ಯೋದಯವಾಗುವ ತೊಂಬತ್ತು ನಿಮಿಷಗಳ ಮುಂದಿನ ಸಮಯವನ್ನು ಬ್ರಾಹ್ಮೀ ಮುಹೂರ್ತ ಎನ್ನುವರು. ಈ ಸಮಯದಲ್ಲಿ ಗ್ರಹಗಳ ಪ್ರಭಾವ ಇರುವುದಿಲ್ಲ ಎಂದು ಬ್ರಹ್ಮ ದೇವರು ಕೊಟ್ಟ ವರದಿಂದ ಈ ಸಮಯವನ್ನು ಬ್ರಾಹ್ಮೀ ಮುಹೂರ್ತ ಎಂದು ಕರೆಯಲ್ಪಡುವುದು. ಧನುರ್ಮಾಸದಲ್ಲಿ ಬ್ರಾಹ್ಮೀ ಮುಹೂರ್ತ ಸಮಯ ಶ್ರೀ ಹರಿಯ ಪೂಜೆಗೆ ತುಂಬಾ ಉತ್ತಮವಾದ ಕಾಲ.



"ಮುಖ್ಯಾರಣೋದಯೇ ಪೂಜಾ ಮಧ್ಯಮಾ ಲುಪ್ತತಾರಕಾ।<br>
ಅಧಮಾ ಸೂರ್ಯ ಸಹಿತಾ ಮಧ್ಯಾಹ್ನೇ ನಿಷ್ಫ ಲಾಭವೇತ್।"

ಅರುಣೋದಯದ ಮುನ್ನ ಪೂಜೆ ಫಲ ಪ್ರಾಪ್ತಿಕಾರಿ ಮತ್ತು ಮಧ್ಯಾಹ್ನದ ವೇಳೆ ನಿಷ್ಪ್ರ ಯೋಜನೆ.

"ಕೋದಂಡಸ್ಥೇ ಸವಿ ತರಿ ಪ್ರತ್ಯೂಷಃ ಪೂಜ ನಾದ್ಧರೇಃ।<br>
ಸಹಸ್ರಾ ಬ್ದಾರ್ಚನಫಲಂ ದಿನೇನೈಕೇನ ಲಭ್ಯತೇ",

ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಹರಿಯ ಪೂಜೆ ಮಾಡುವವರಿಗೆ ಸಹಸ್ರ ವರ್ಷಗಳ ಪೂಜಾ ಫಲ ಸಿಗುವುದು. ಪ್ರಾತಃ ಕಾಲದಲ್ಲಿ ಶ್ರೀ ಹರಿಯ ಪೂಜೆ, ಪೂಜೆಯ ನಂತರ ಮುದ್ಗಾನ್ನ ನೈವೇದ್ಯ ಸಮರ್ಪಣೆ ಮಾಡಬೇಕು ಮುದ್ಗಾನ್ನ ಎಂದರೆ ಅಕ್ಕಿ ಹೆಸರು ಬೇಳೆ, ಮೆಣಸು, ಉಪ್ಪು, ತುಪ್ಪದಿಂದ ತಯಾರಿಸಿದ ಅನ್ನವನ್ನು ಮುದ್ಗನ್ನ ಅಥವಾ ಹುಗ್ಗಿ ಅಥವಾ ಪೊಂಗಲ್ ಎನ್ನುವರು."

"ಯಸ್ತು ದಾರಿದ್ರ್ಯ ಬುದ್ಧ್ಯಾ ಮುದ್ಗಾನ್ನಂ ನ ನಿವೇದಯೇತ್।<br>
ವಿಷ್ಣವೇ ಕಾರ್ಮುಕೇ ಪ್ರಾತಃ-ಸಪ್ತಜನ್ಮಸು ನಿರ್ಧನಃ"

ಮುದ್ಗಾನ್ನವನ್ನು ನಿವೇದನೆ ಮಾಡದಿದ್ದರೆ ಸಪ್ತ ಜನ್ಮದಲ್ಲಿ ದಾರಿದ್ರ್ಯ, ಅಲ್ಪ ಬುದ್ಧಿ ಮತ್ತು ರೋಗವನ್ನು ಅನುಭವಿಸುವರು ಎಂದು ಸೂಚಿಸಲಾಗಿದೆ. ಧನುರ್ಮಾಸದಲ್ಲಿ ಶ್ರೀ ಹರಿಯನ್ನು ಮಧುಸೂಧನ ನಾಮದಿಂದ ಪೂಜೆ ಮಾಡಿ ನೈವೇದ್ಯವನ್ನು ಸಮರ್ಪಣೆ ಮಾಡುವ ಆಚಾರವಿದೆ. ಧನುರ್ಮಾಸದಲ್ಲಿ ಪ್ರಾತಃ ಕಾಲದಲ್ಲಿ ಶ್ರೀ ಹರಿಯ ಪೂಜೆ, ಸ್ಮರಣೆ ಮತ್ತು ನಿವೇದನೆಯಿಂದ ಯಾಗಗಳ ಫಲ, ತೀರ್ಥ ಸ್ನಾನಗಳ ಫಲ ಪ್ರಾಪ್ತಿಯಾಗುವುದು.

### ಗೋದಾದೇವಿ

ಶ್ರೀವೈಷ್ಣವ ಸಂಪ್ರದಾಯದಲ್ಲಿ ಭಕ್ತಿ ಸಾಗರದಲ್ಲಿ ಮುಳುಗಿ ತೇಲಿದವರನ್ನು "ಆಳ್ವಾರರು" ಎಂದು ಕರೆಯುವರು. ಹನ್ನೆರಡು



ಆಳ್ವಾರರಲ್ಲಿ ವಿಷ್ಣುಚಿತ್ತರು ಒಬ್ಬರು. ಇವರನ್ನು ಪೆರಿಯಾಳ್ವಾರ್ ಎಂದು ಕರೆಯು ವರು.ವಿಷ್ಣು ಚಿತ್ತರು ಶ್ರೀ ಹರಿಯ ಪರಮ ಭಕ್ತರು, ಶ್ರೀವಿಲ್ಲಿಪುತ್ತೂರ್ ವಟಪತ್ರಶಾಯಿಯಾದ ಶ್ರೀ ಹರಿಯ ದೇಗುಲದಲ್ಲಿ ಸದಾ ಸೇವೆ ಸಲ್ಲಿಸುತ್ತಿದ್ದರು. ಪ್ರತಿ ದಿನ ಭಕ್ತಿಯಿಂದ ದೇವ ಸ್ಥಾನದ ವನದಿಂದ ಹೂ ಗಳನ್ನು,ತುಳಸಿಯನ್ನು ಸೇಕ ರಿಸಿ ಮಾಲೆಯನ್ನು ಕಟ್ಟಿ ಶ್ರೀ ಹರಿಗೆ ಭಕ್ತಿಯಿಂದ ಸಮರ್ಪಣೆ ಮಾಡುತಲಿದ್ದರು. ಶ್ರೀ ವಿಲ್ಲಿ ಪುತ್ತೂರ್ ಇಂದಿನ ತಮಿಳನಾಡು ರಾಜ್ಯದಲ್ಲಿ ಮಧುರೈ ಹತ್ತಿರದಲ್ಲಿದೆ. ಶ್ರೀಹರಿಯ ಸೇವೆ ಮಾಡುತ್ತಾ ತುಳಸಿ ವನದಲ್ಲಿ ಹೂಗಳನ್ನು, ತುಳಸೀ ದಳಗಳನ್ನು ರಾಜ್ಯದಲ್ಲಿ ಮಧುರೈ ಹತ್ತಿರದಲ್ಲಿದೆ. ಶ್ರೀಹರಿಯ ಸೇವೆ ಮಾಡುತ್ತಾ ತುಳಸಿ ವನದಲ್ಲಿ ಹೂಗಳನ್ನು ತುಳಸೀ ದಳಗಳನ್ನು ಸೇಕರಿಸುವಾಗ ಗೋದಾ ದೇವಿ ಬಾಲಕಿಯ ರೂಪದಲ್ಲಿ ಶ್ರೀ ತುಳಸಿ ಗಿಡದ ಕೆಳಗಡೆ ಕಾಣಿಸಿ ಕೊಂಡರು. ಭೂದೇವಿಯ ಅನುಗ್ರಹವೆಂದು ಭಾವಿಸಿ, ವಿಷ್ಣುಚಿತ್ತರು ಮಗುವನ್ನು ಮನೆಗೆ ಕರೆದುಕೊಂಡು ಹೋಗಿ "ಕೋದೈ" ಎಂದು ಹೆಸರಿಟ್ಟರು. ಕೋದೈ ಅಂದರೆ ಹೂವಿನ ಹಾರವೆಂದು ಅರ್ಥ. ಗೋದಾದೇವಿಯನ್ನು "ಅಂಡಾಳ್" ಎಂತಲೂ ಕರೆಯುವರು. ಗೋದಾದೇವಿಯನ್ನು ಮುದ್ದಾಗಿ ಬೆಳಸಿ ಹರಿಭಕ್ತಿ ಮತ್ತು ಭಾಗವತದ ಸಾರಾಂಶವನ್ನು ಬೋಧಿ ಸುತ್ತಿದ್ದರು. ವಿಷ್ಣುಚಿತ್ತರು ಶ್ರೀ ರಂಗನಾಥ ಸ್ವಾಮಿಯ ಮಹಿಮೆ ಮತ್ತು ಸುಂದರ ರೂಪವನ್ನು ಗೋದಾದೇವಿಗೆ ತಿಳಿಸುತ್ತಾರೆ. ಕಟ್ಟಿದ ಹೂ ಮಾಲೆಗಳನ್ನು ಗೋದಾದೇವಿಗೆ ಕೊಟ್ಟು ಶ್ರೀ ಹರಿಗೆ ಅಲಂಕರಿಸಬೇಕೆಂದು ವಿಷ್ಣುಚಿತ್ತರು ಹೇಳಿದರು. ಗೋದಾದೇವಿ ಶ್ರೀ ಹರಿಗೆ ಹಾರವ ಅಲಂಕರಿಸುವ ಮುನ್ನ ಸ್ವತಹ ಧಾರಣೆ ಮಾಡಿ ಶ್ರೀಹರಿಗೆ ಸಮರ್ಪಿಸುತ್ತಿದ್ದರು. ಒಂದು ದಿನ ಹೂ ಮಾಲೆ ಯನ್ನು ಗೋದಾದೇವಿಯು ಅಲಂಕರಿಸಿ ಕೊಂಡಿರುವುದನ್ನು ತಿಳಿದು ಗೋದಾದೇವಿ ಯನ್ನು ಪ್ರಶ್ನಿಸಿದಾಗ, ಹೂಮಾಲೆ ಚೆನ್ನಾ ಗಿದೆಯೇ? ಎಂಬುದನ್ನು ನಾನು ಧರಿಸಿ ಭಗವಂತನಿಗೆ ಸಮರ್ಪಿಸುತ್ತಿದ್ದೇನೆ! ಎಂದು ನುಡಿದರು. ವಿಷ್ಣುಚಿತ್ತರು ಶ್ರೀ ಹರಿಗೆ ಅಪರಾಧ ಕ್ಷಮೆ ಯಾಚಿಸಿ ಮನೆಗೆ ತೆರಳಿದರು. ಸ್ವಪ್ನದಲ್ಲಿ ಶ್ರೀಹರಿ ಕಂಡು ಗೋದಾ ದೇವಿ ಧರಿಸಿದ ಮಾಲೆಯನ್ನೇ ಸಮ ರ್ಪಿಸಬೇಕೆಂದು ಆಜ್ಞೆ ಕೊಟ್ಟರು. ಗೋದಾದೇವಿ ಬೆಳೆದು ದೊಡ್ಡವರಾಗಿ ಶ್ರೀ ರಂಗನಾಥ ಸ್ವಾಮಿಯ ಮದುವೆ ಆಗಲು, ಸದಾ ಶ್ರೀ ಕೃಷ್ಣ ಸ್ಮರಣೆ ಮತ್ತು ಚಿಂತನೆಯಲ್ಲಿ ಕಾಲವನ್ನು ಕಳೆಯು ತ್ತಿದ್ದರು. ದ್ವಾಪರಯುಗದಲ್ಲಿ ಗೋಪಿ ಯರು ಶ್ರೀ ಕೃಷ್ಣನ ಕೃಪೆ ಮತ್ತು ಸಾನ್ನಿಧ್ಯ ಹೊಂದಲು ಕಾತ್ಯಾ ಯನಿ ವ್ರತವನ್ನು ಆಚರಿಸಿದರು.ಗೋದಾದೇವಿ ಶ್ರೀ ಹರಿಯ ಕೃಪಾಕಟಾಕ್ಷ ಮತ್ತು ಪತಿಯಾಗಿ ಹೊಂದಲು ಧನುರ್ಮಾಸದಲ್ಲಿ ವ್ರತವನ್ನು ಆರಂಭಿಸಿದರು. ಧನುರ್ಮಾಸದಲ್ಲಿ ಯದುಕುಲದ ಗೋಪಿಕೆಯಂತೆ ವೇಷಧಾರಣೆ ಮಾಡಿ ತನ್ನ ಗೆಳತಿಯರೊಡನೆ ಅನುದಿನ ಪ್ರಾತಃ ಕಾಲದಲ್ಲಿ ಶ್ರೀ ಹರಿಯ ದೇಗುಲದಲ್ಲಿ ಪೂಜೆ ಮತ್ತು ಪಾಶುರವನ್ನು ರಚಿಸಿ ಶ್ರೀಹರಿಗೆ ಸಮರ್ಪಿಸುತ್ತಿದ್ದರು. ಮೂವತ್ತು ದಿನಗಳಲ್ಲಿ ಮೂವತ್ತು ಪಾಶುರಗಳನ್ನು ರಚಿಸಿ ಶ್ರೀ ರಂಗನಾಥರಲ್ಲಿ ಐಕ್ಯವಾದರು.

**ತಿರುಪ್ಪಾವೈ**

ಕಲಿಯುಗದಲ್ಲಿ ಮಾನವ ಕನ್ಯೆಯಾಗಿ ಶ್ರೀಕೃಷ್ಣನ ಭಕ್ತಿಯಿಂದ ಪಾಶುರಗಳನ್ನು ರಚಿಸಿ ಧನುರ್ಮಾಸದಲ್ಲಿ ಶ್ರೀಹರಿಗೆ ಸಮರ್ಪಣೆ ಮಾಡಿದವರು ಗೋದಾದೇವಿ.ಪಾಶುರವೆಂದರೆ ಭಕ್ತಿಭಾವದ ಪದ್ಯ ಅಥವಾ ಭಕ್ತಿ ಗೀತೆ ಎನ್ನುವ ಅರ್ಥವಿದೆ. ತಿರುಪ್ಪಾವೈ ಎಂದರೆ ಶ್ರೀವ್ರತ, ತಿರುಪ್ಪಾವೈಯನ್ನು ಭಗವತಿ ಗೀತೆ ಎಂದು ಕೂಡ ಕರೆಯುತ್ತಾರೆ.

**ಮೊದಲನೆಯ ಪಾಶುರ**

"ಮಾರ್ಗಳಿತ್ತಿಂಗಳ್ ಮದಿನಿರೈಂದ ನನ್ನಾಳಾಲ್ ನೀರಾಡ ಪ್ಪೋದುವೀರ್। ಪೋದುಮಿನೋ ನೇರಿನೈ ಈರ್!.. ಮೊದಲನೇ ಪಾಶುರದಲ್ಲಿ ಶ್ರೀ ಹರಿಗೆ ಅತ್ಯಂತ ಪ್ರೀತಿಕರವಾದ ಮಾರ್ಗ ಶಿರ, ಹುಣ್ಣಿಮೆ ಚಂದ್ರ ಹದಿನಾರು ಕಳೆಗಳಿಂದ ಪ್ರಕಾಶಿಸುವ ದಿನಗಳಿವು! ವ್ರತ ಸ್ನಾನ ವನ್ನು



ಮಾಡಲು ಬನ್ನಿ! ಮಂಗಳ ಕಾರ್ಯಗಳನ್ನು ಮಂಗಳ ಕಾಲದಲ್ಲಿ ಆರಂಭಿಸಬೇಕು!

ಎನ್ನುತ್ತಾ ಮುಂದೆ ಸಾರುವುದು. ಮೂವತ್ತು ಪಾಶುರಗಳಲ್ಲಿ ವೇದ, ಉಪನಿಷತ್ತುಗಳ ಸಾರವನ್ನು ವರ್ಣಿಸಿದ್ದಾರೆ ಗೋದಾದೇವಿ. ಗೋದಾದೇವಿ ಒಂದೊಂದು ಪಾಶುರದಲ್ಲಿ ಶ್ರೀ ಕೃಷ್ಣನ ಮಹಿಮೆ,ಲೀಲೆ ಕೊಂಡಾಡಿದರು. ಪ್ರತಿ ಪಾಶುರದ ಅಂತ್ಯದಲ್ಲಿ ವ್ರತದ ಉದ್ದೇಶ್ಯ ವ್ಯಕ್ತಪಡಿಸಲಾಗಿದೆ. ಕೊನೆಯ ಪಾಶುರದ ಅಂತ್ಯದಲ್ಲಿ ಮೂವತ್ತು ಪಾಶುರಗಳನ್ನು ವರುಸ ಕ್ರಮದಲ್ಲಿ ಭಾವ ಸಹಿತವಾಗಿ ಭೂ ಮಂಡಲದಲ್ಲಿ ಪಾರಾಯಣ ಮಾಡುವವರಿಗೆ ಬೆಟ್ಟದಂತೆ ನಾಲ್ಕು ಭುಜಗಳು,ಕೆಂಪುದಿವ್ಯವಾದ ಕಣ್ಣುಗಳುಳ್ಳ ದಿವ್ಯ ಮುಖಾರವಿಂದವುಳ್ಳ ಲಕ್ಷ್ಮೀಪತಿ ಕೃಪಾಕಟಾಕ್ಷ ಪಡೆದು ಸುಖ ಜೀವನ ಪಡೆಯುವರು ಎಂದು ಗೋದಾದೇವಿ ಆಶ್ವಾಸನೆ ಮತ್ತು ಆಶೀರ್ವಚನ ಕೊಡುವ ಭಾವನೆ ಮೂಡಿ ಬರುವುದು. ಒಂದೊಂದು ಹೂವು ಸೇರಿ ಸುಂದರ ಮಾಲೆ ಆದ ಹಾಗೆ ಒಂದೊಂದು ಪಾಶುರ ಸೇರಿ ಶ್ರೀ ಹರಿಯ ಭಕ್ತಿಯ ಗೀತಾ ಮಾಲಿಕೆ ಆಗಿರುವುದು ತಿರುಪ್ಪಾವೈ. ಧನುರ್ಮಾಸ ಪ್ರಾತಃ ಕಾಲದಲ್ಲಿ ಪಾಶುರ ಪಾರಾಯಣ ಮಾಡಿ ಶ್ರೀ ಹರಿಗೆ ನೈವೇದ್ಯ ಸಮರ್ಪಿಸುವ ಸಂಪ್ರದಾಯ ಶ್ರೀ ವೈಷ್ಣವ ಆಲಯಗಳಲ್ಲಿ ಇದೆ. ರಾಮಾನುಜಾಚಾರ್ಯರು ಎಲ್ಲರೂ ಭಗವಂತನಿಗೆ ಸಂಪೂರ್ಣ ಶರಣಾಗತಿ ಆಗಬೇಕು ಎನ್ನುವ ಸಿದ್ಧಾಂತ ಬೋಧಿಸಿದರು. ಶ್ರೀರಂಗಂನಲ್ಲಿ ಭಗವಂತನ ಮಹಿಮೆ ಪ್ರಚಾರ ಮಾಡುತ್ತಾ ತಿರುಪ್ಪಾವೈ ಪಾರಾಯಣ ಮಾಡುತ್ತಿದ್ದರು. ಪ್ರತಿನಿತ್ಯ ಶ್ರೀ ವೈಷ್ಣವ ಸಂಪ್ರದಾಯದ ವಿಷ್ಣು ದೇಗುಲಗಳಲ್ಲಿ ತಿರುಪ್ಪಾವೈ ಮಂಗಳ ಪಾಠದ. ಅನುಸಂಧಾನ ವಾಗಬೇಕೆಂದು ಆದೇಶಿಸಿದ್ದಾರೆ. "ಸು-ಪ್ರಭಾತ" ಎಂದರೆ ಶುಭೋದಯ.

"ಕೌಸಲ್ಯಾ ಸುಪ್ರಜಾ ರಾಮ ಪೂರ್ವಾಸಂಧ್ಯಾ ಪ್ರವರ್ತತೇ।
ಉತ್ತಿಷ್ಠ ನರಶಾರ್ದೂಲ ಕರ್ತವ್ಯಂ ದೈವಮಾಹ್ನಿಕಮ್"

ಎನ್ನುತ್ತಾ ಶ್ರೀನಿವಾಸ ದೇವರಿಗೆ ಸುಪ್ರಭಾತ ಸೇವೆ ಆರಂಭವಾಗುವುದು. "ಕೌಸಲ್ಯಾದೇವಿ ತನಯ ಬೆಳಗಾಯಿತು! ದೇವಾ,ಪೂಜಾದಿ ನಿತ್ಯಕೃತ್ಯಗಳು ನೆರವೇರಿಸಬೇಕು!ಹೇ ಪುರುಷೋತ್ತಮಾ,ನಿದ್ದೆಯಿಂದ ಎದ್ದೇಳಿ! ಎನ್ನುವ ಶ್ಲೋಕದಿಂದ ಆರಂಭವಾಗುವುದು.

ಧನುರ್ಮಾಸ ದಿನಗಳಲ್ಲಿ ಅನು ದಿನ ಸುಪ್ರಭಾತ ಸೇವೆ ಬದಲು ತಿರುಪ್ಪಾವೈ ಸೇವೆ ಮಾಡಲಾಗುತ್ತದೆ.

### ಗೀತಾಜಯಂತಿ

ಕುರುಕ್ಷೇತ್ರ ಮಹಾ ಸಂಗ್ರಾಮದಲ್ಲಿ ಬಂಧು ಬಾಂಧವರು, ಹಿರಿಯರು, ಗುರುಗಳು, ಪಿತಾಮಹ ಭೀಷ್ಮರನ್ನು ಕಂಡು ಅರ್ಜುನ ಯುದ್ಧ ಮಾಡಲು ಹಿಂದೆಜ್ಜೆ ಹಾಕಿ ರಥದಿಂದ ಕೆಳಗೆ ಬಂದು ತನ್ನಿಂದ ಯುದ್ಧ ಮಾಡಲು ಆಗುತ್ತಿಲ್ಲ ಎಂದು ಶ್ರೀ ಕೃಷ್ಣನ ಶರಣು ಬೇಡಿದರು.

"ಕರ್ಮಣ್ಯೇ ವಾಧಿಕಾರಸ್ತೇ।ಮಾ ಫಲೇಷು ಕದಾ ಚನ॥
ಮಾಕರ್ಮಫಲ ಹೇತುರ್ಭೂ॥ ಮಾ ತೇ ಸಂಗೋಸ್ತ್ವ ಕರ್ಮಣಿ"

ಶ್ರೀಕೃಷ್ಣ ಅರ್ಜುನನಿಗೆ ಉಪದೇಶವ ಮಾಡಿ ಕರ್ಮ ಮಾಡಲು ಕರ್ಮಫಲವನ್ನು ಯಾಚಿಸದಿರಲು ನುಡಿದರು. ಮಾರ್ಗಶಿರ ಶುಕ್ಲ ಏಕಾದಶಿಯ ದಿನ ಗೀತಾ ಜಯಂತಿಯನ್ನು ಆಚರಿಸಲಾಗುವುದು. ಇಂದಿನ ದಿನ ಶ್ರೀ ಕೃಷ್ಣಪರಮಾತ್ಮ ಕುರುಕ್ಷೇತ್ರ ಸಂಗ್ರಾಮದಲ್ಲಿ ಅರ್ಜುನನಿಗೆ ಉಪದೇಶ ಮಾಡಿರುವ ದಿನ. ಗೀತಾಜಯಂತಿ ಎಂದರೆ ಮಹಾಭಾರತದಲ್ಲಿ ಕೃಷ್ಣ ಅರ್ಜುನನಿಗೆ ಆಧ್ಯಾತ್ಮಿಕ ಜ್ಞಾನವನ್ನು ಬೋಧಿಸಿದ ದಿನ. ಸಾಕ್ಷಾತ್ ಭಗವಂತನಿಂದ ಬೋಧಿಸಿದರಿಂದ ಈ ಗ್ರಂಥ ಪರಮ ಪವಿತ್ರ."ಇದಂ ಶಾಸ್ತ್ರಂ ಮಯಾ ಪ್ರೋಕ್ತಂ ಗುಹ್ಯ ವೇದಾರ್ಥ ದರ್ಪಣಮ್। ಯಃ ಪಠೇತ್ಪ್ರಯತೋ ಭೂತ್ವಾಸ ಗಚ್ಛೇದ್ವಿಷ್ಣು ಶಾಶ್ವತಮ್", ಶ್ರೀ ಕೃಷ್ಣ ಪರಮಾತ್ಮ ಬೋಧಿಸಲ್ಪಟ್ಟ ಈ ಶಾಸ್ತ್ರ. ವೇದಗಳ ಅರ್ಥ ಮತ್ತು ವೇದಸಾರಕೆ ಕನ್ನಡಿ ಹಿಡಿದಂತೆ. ಇದನ್ನು ಪಾಠ ಮಾಡುವವರಿಗೆ, ಆಚರಿಸುವವರಿಗೆ ಶಾಶ್ವತವಾಗಿ ವಿಷ್ಣು ಸಾನ್ನಿಧ್ಯ ಲಭ್ಯವಾಗುವುದು ಎಂದು ನುಡಿದರು.

"ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಮ್।
ಧರ್ಮಸಂಸ್ಥಾಪ ನಾರ್ಥಾಯ ಸಂಭವಾಮಿ ಯುಗೇ ಯುಗೇ",

ಸಾಧು ಸಜ್ಜನರನ್ನು ರಕ್ಷಿಸಲು, ದುರ್ಮಾರ್ಗವನ್ನು ಅಳಿಸಲು ಧರ್ಮ ಸಂಸ್ಥಾಪನೆ ಮಾಡಲು ಯುಗಯುಗದಲ್ಲಿ ಅವತರಿಸುವೆನು ಎಂದು ನುಡಿದರು.

ಗೀತೆಯಲ್ಲಿ ಸನ್ಮಾರ್ಗದಲ್ಲಿ ನಡೆಯುವ ಸಂದೇಶವಿದೆ. ಗೀತೆಯನ್ನು ಪಠನೆ ಮಾಡಿ ಅರ್ಥ ಮಾಡಿಕೊಂಡರೆ ಭಗವತ್ ತತ್ತ್ವ ಅರಿಯಲು ತುಂಬಾ ಸರಳವಾಗುವುದು. ಶಂಕರಾಚಾರ್ಯರು ಭಜಗೋವಿಂದಂ ಸ್ತೋತ್ರದಲ್ಲಿ

ಭಗವದ್ಗೀತಾ ಕಿಂಚಿದಧೀತಾಗಂಗಾ ಜಲಲವ ಕಣಿಕಾ ಪೀತಾ।
ಸಕೃದಪಿಯೇನ ಮುರಾರೀ ಸಮರ್ಚಾಕ್ರಿಯತೇ ತಸ್ಯ ಯಮೇನ ನ ಚರ್ಚಾ"

ಭಗವದ್ಗೀತಾ ಒಂದು ಶ್ಲೋಕ ಪೂರ್ಣವಾಗಿ ಅರ್ಥ ಮಾಡಿಕೊಂಡು ಅನುಸರಿಸಿದರೆ, ಸ್ವಲ್ಪ ಗಂಗಾ ಜಲ ಸೇವನೆ ಮಾಡಿದರೆ, ಶ್ರೀ ಕೃಷ್ಣ ಪರಮಾತ್ಮನ ಪೂಜೆ ಮತ್ತು ಆರಾಧನೆ ಮಾಡಿದವರಿಗೆ ಮರಣ ಕಾಲದಲ್ಲಿ ಯಮ ಭಟರ ಜೊತೆ ಚರ್ಚೆ ಇರಲಾರದು ಮತ್ತು ಮೋಕ್ಷ ಲಭ್ಯವಾಗುವುದು.

## ಪೂರ್ವಜರಿಗೆ ಮೋಕ್ಷ

ಚಂಪಕ ನಗರವನ್ನು ವೈಖಾನಸ ರಾಜ ಪರಿಪಾಲಿಸುತ್ತಿದ್ದರು. ಒಂದು ದಿನ ರಾತ್ರಿ ಸ್ವಪ್ನದಲ್ಲಿ ಪೂರ್ವಜರು ನರಕ ಯಾತನೆ ಅನುಭವಿಸುವುದನ್ನು ಕಂಡರು. ಯಾತನೆ ಅನುಭವಿಸುತ್ತ ಕಣ್ಣೀರಿನಿಂದ ರಾಜನನ್ನು ಉದ್ದೇಶಿಸಿ ಪೂರ್ರ್ವಜರನ್ನು ನರಕದಿಂದ ಬಿಡುಗಡೆ ಮಾಡಲು ಯಾಚಿಸಿದರು. ನಗರದ ವಿದ್ವಾಂಸರು ಮತ್ತು ಪಂಡಿತರೊಡನೆ ಸಮಾವೇಶವಾಗಿ ಪರಿಹಾರ ಕೇಳಲು, ಪರ್ವತ ಮುನಿಯನ್ನು ಸಂದರ್ಶಿಸಿ ಮಾರ್ಗದರ್ಶನ ಕೇಳಲು ಸಲಹೆ ನೀಡಿದರು. ರಾಜ ಪರ್ವತ ಮುನಿ ಹೇಳಿದಂತೆ ಮಾರ್ಗಶಿರ ಶುಕ್ಲ ಏಕಾದಶಿ ವ್ರತ ಮಾಡಿ ಪೂರ್ವಜರಿಗೆ ಪುಣ್ಯ ಫಲವನ್ನು ದಾನ ಮಾಡಿದನು. ವೈಖಾನಸ ರಾಜನ ತಂದೆ ಮತ್ತು ಪಿತೃ ದೇವತೆಗಳು ಆಕಾಶದಲ್ಲಿ ಕಂಡು ಬಂದು "ಪುತ್ರನೇ ನಿನಗೆ ಮಂಗಳವಾಗಲಿ" ಎಂದು ನುಡಿದು ಮೋಕ್ಷವ ಗಳಿಸಿದರು. ಹೀಗಾಗಿ ಈ ಏಕಾದಶಿ "ಮೋಕ್ಷ ಏಕಾದಶಿ" ಎಂದು ಕರೆಯಲಾಗುವುದು.

**ಕೊನೆಯ ಪಾಶುರದ ಅಂತ್ಯದಲ್ಲಿ ಮೂವತ್ತು ಪಾಶುರಗಳನ್ನು ವರುಸ ಕ್ರಮದಲ್ಲಿ ಭಾವ ಸಹಿತವಾಗಿ ಭೂ ಮಂಡಲದಲ್ಲಿ ಪಾರಾಯಣ ಮಾಡುವವರಿಗೆ ಬೆಟ್ಟದಂತೆ ನಾಲ್ಕು ಭುಜಗಳು,ಕೆಂಪುದಿವ್ಯವಾದ ಕಣ್ಣುಗಳುಳ್ಳ ದಿವ್ಯ ಮುಖಾರವಿಂದ ವುಳ್ಳ ಲಕ್ಷ್ಮೀಪತಿ ಕೃಪಾಕಟಾಕ್ಷ ಪಡೆದು ಸುಖ ಜೀವನ ಪಡೆಯುವರು ಎಂದು ಗೋದಾದೇವಿ ಆಶ್ವಾಸನೆ ಮತ್ತು ಆಶೀರ್ವಚನ ಕೊಡುವ ಭಾವನೆ ಮೂಡಿ ಬರುವುದು.**

## ಸ್ವರ್ಗಾಧಿಪತ್ಯ

ದೇವೇಂದ್ರರು ರಾಕ್ಷಸರ ಉಪದ್ರವದಿಂದ ಸ್ವರ್ಗಾಧಿಪತ್ಯವನ್ನು ಕಳೆದುಕೊಂಡಾಗ ಇಂದ್ರ ದೇವರ ಧರ್ಮಪತ್ನಿ ಶುಚೀದೇವಿ ಧನುರ್ಮಾಸದಲ್ಲಿ ಅರುಣೋದಯ ಕಾಲದಲ್ಲಿ ಶ್ರೀ ಹರಿಗೆ ಮುದ್ಗಾನ್ನವನ್ನು ಸಮರ್ಪಿಸಿ ವ್ರತ ಆಚರಿಸಿದರು. ಶ್ರೀಹರಿ ಅನುಗ್ರಹದಿಂದ ದೇವೇಂದ್ರರು ಸ್ವರ್ಗಾಧಿಪತ್ಯವನ್ನು ಹಿಂಪಡೆದರು.

## ಪಾಂಡವರ ವಿಜಯ

ಕುರುಕ್ಷೇತ್ರ ಯುದ್ಧ ಮುನ್ನ ಧರ್ಮರಾಜ ಈ ಸಂಕಟ ಪರಿಸ್ಥಿತಿಯಲ್ಲಿ ವ್ರತವೇನಾದರೂ ಸೂಚಿಸಲು ಬೇಡಿಕೊಂಡರು. ನಾರದ ಮಹಾಮುನಿ ಧನುರ್ಮಾಸದಲ್ಲಿ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀ ಕೃಷ್ಣನ ಸೇವೆ ಮತ್ತು ಮುದ್ಗಾನ್ನ ನೈವೇದ್ಯ ಮಾಡಿ ಮಾಸವೆಲ್ಲ ಶ್ರೀ ಹರಿಯ ಸ್ಮರಣೆ ಮಾಡಲು ಮಾರ್ಗದರ್ಶನ ಮಾಡಿದರು. ಪಾಂಡವರು ಧನುರ್ಮಾಸವೆಲ್ಲ ಶ್ರೀ ಹರಿಯ ಪಾರಾಯಣ ಮತ್ತು ಮುದ್ಗಾನ್ನ ನೈವೇದ್ಯ ಸಲ್ಲಿಸಿ ಕುರುಕ್ಷೇತ್ರ ಯುದ್ಧದಲ್ಲಿ ವಿಜಯವನ್ನು ಕೈ ಗೊಂಡು ಶ್ರೀ ಹರಿಯ ಕೃಪೆಗೆ ಪಾತ್ರರಾದರು,

ಮಾನವ ಸಹಾಯ, ಬಂಧುಬಳಗರ ಸಹಾಯ ಎಲ್ಲಿಯವರೆಗೆ? ಮೋಕ್ಷಕ್ಕೆ ದಾರಿ ಸಂಸಾರದಲ್ಲಿ ಸತೀ ಸುತರಲ್ಲ. ಪದಾರ್ಥವಲ್ಲ,ಭೋಗಗಳಲ್ಲ! ಇವೆಲ್ಲ ಅಶಾಶ್ವತ! ಶಂಕರಾಚಾರ್ಯರು ಭಜಗೋವಿಂದಂ ಸ್ತೋತ್ರದಲ್ಲಿ ಹೇಳಿದಂತೆ

"ಸಂಪ್ರಾಪ್ತೇ ಸನ್ನಿಹಿತೇ ಕಾಲೇ ನಹಿ ನಹಿ ರಕ್ಷತಿ ಡುಕ್ಕನ್ಕರಣೇ!
ಭಜ ಗೋವಿಂದಂ ಭಜ ಗೋವಿಂದಂ ಗೋವಿಂದಂ ಭಜ ಮೂಢಮತೆ":

ಅಪತ್ಕಾಲದಲ್ಲಿ. ಅಂತ್ಯ ಕಾಲದಲ್ಲಿ ಎಂದಿಗೂ ಕರುಣೆಯಿಂದ ಕಾಪಾಡಿ ಮೋಕ್ಷ ಕೊಡುವವರು ಶ್ರೀಹರಿ! ಪವಿತ್ರವಾದ ಮತ್ತು ಅಕ್ಷಯ ಫಲ ಕೊಡುವ ಧನುರ್ಮಾಸದಲ್ಲಿ ಮಧುಸೂದನ, ಶ್ರೀಕೃಷ್ಣನ ಸೇವೆ, ವ್ರತ ಆಚರಿಸಿ ಶ್ರೀಹರಿಯ ಕೃಪೆಗೆ ಪಾತ್ರರಾಗೋಣ.

"ಶ್ರಿಯಃ ಕಾಂತಾಯ ಕಲ್ಯಾಣ ನಿಧಯೇ ನಿಧಯೇ ರ್ಥಿನಾಮ್। ಶ್ರೀ ವೇಂಕಟ ನಿವಾಸಾಯ ಶ್ರೀನಿವಾಸಾಯ ಮಂಗಳಮ್।

**ಶ್ರೀ ಕೃಷ್ಣಾರ್ಪಣಮಸ್ತು**



# ಗೀತಾಜಯಂತಿ

# ಭಗವದ್ಗೀತೆ ಬದುಕಿನ ಭಾಷ್ಯ / ಕೈಪಿಡಿ

- ಡಾ|| ಗುರುರಾಜ ಪೋಶೆಟ್ಟಿಹಳ್ಳಿ
-9739369621

ಸಾವಿರಾರು ವರ್ಷಗಳಿಂದಲೂ ಗೀತಾಧಾರೆ ಭಾರತದ ಜನಮಾನಸದಲ್ಲಿ ಪ್ರವಹಿಸುತ್ತಲೆಯಿದೆ. ಪಾಶ್ಚಿಮಾತ್ಯರಿಗೂ ಬೆರಗು ಮೂಡಿಸಿದೆ. ಏನೀ ಗೀತಾ ರಹಸ್ಯ? ವಿದ್ವಾಂಸರು ಗೀತೆಯನ್ನು ವ್ಯಾಖ್ಯಾನಿಸುವ ಬಗೆ ಕುರಿತು ಗೀತಾಜಯಂತಿ ಹಿನ್ನೆಲೆಯಲ್ಲಿ ಅವಲೋಕನ.

ಆಧುನಿಕ ಮಾನವ ಭೌತಿಕವಾಗಿ ಸಾಕಷ್ಟು ಪ್ರಗತಿ ಸಾಧಿಸಿದ್ದಾನೆ. ಸುಖ ಸಾಧನಗಳೆಂದು ನಿರ್ಮಿಸಿಕೊಂಡಿರುವ ವಸ್ತುಗಳು ಹಾಗೂ ಜೀವನ ಪದ್ಧತಿಗಳು ಹುಟ್ಟು ಹಾಕಿದ ಕಲ್ಮಶಗಳು ಆತನಿಗೆ ದೊಡ್ಡ ಸಮಸ್ಯೆಯಾಗಿದೆ. ಮಾನಸಿಕ ಅಭಾವಗಳು ತಲೆದೋರಿ ಬದುಕಿಗಾಗಿ ಹೋರಾಡಬೇಕಾಗಿದೆ ಬದಕು ರಣರಂಗವಾಗಿದೆ. ಆಶ್ಚರ್ಯವೆಂದರೆ ಇದಕ್ಕೆಲ್ಲ ಪರಿಹಾರವನ್ನು ಎಲ್ಲರನ್ನು ಕಾಯುವ ಭಗವಂತನು ಮೊದಲೆ ಸೂಚಿಸಿದ್ದಾನೆ. ಅದೂ ಕುರುಕ್ಷೇತ್ರದ ರಣರಂಗದಲ್ಲೇ ಅದುವೇ ಶ್ರೀ ಮದ್ಭಗವದ್ಗೀತಾ. ಗೀತೆಯು ಒಂದು ಕನ್ನಡಿಯಿದ್ದಂತೆ, ಕನ್ನಡಿಗೆ ಮುಖ ಎಂಬುದೊಂದಿಲ್ಲ. ಯಾರು ಕನ್ನಡಿಯನ್ನು ಮುಂದಿರಿಸಿಕೊಂಡರೂ ಅವರವರದ್ದೆ ಮುಖ ಕನ್ನಡಿಯಲ್ಲಿ ಪ್ರತಿಬಿಂಬಿಸುತ್ತದೆ. ಹಾಗೆ ಗೀತೆಯನ್ನು ಯಾರು ನೋಡಿದರೂ ಅವರವರ ಭಾವನೆಗಳು, ಅನಿಸಿಕೆ ಯುಕ್ತಿಗಳು ಅದರಲ್ಲಿ ಗೋಚರಿಸುತ್ತದೆ.

ಭಗವದ್ಗೀತೆ ಮಾನವ ಜೀವನದ ಸಂವಿಧಾನ, ದೇಶ-ಕಾಲ - ಮತ - ಪಂಗಡ ಸನ್ನಿವೇಶಗಳ ಭೇದವಿಲ್ಲದೆ ಸಾರ್ವಕಾಲಿಕ ಸಾರ್ವದೇಶಿಕವಾದ ಸದುಪದೇಶ ಇದರಲ್ಲಿದೆ. ಪಂಚಮವೇದವೆನಿಸಿದ ಮಹಾಭಾರತದ ಒಂದು ಬಿಂದು ಭಗವದ್ಗೀತೆ ಅದು ಒಂದು ಪ್ರತ್ಯೇಕ ಗ್ರಂಥವೋ ಎಂಬಂತೆ ಸ್ವತಂತ್ರ ಸಿಂಧುವಾಗಿ ನೆಲೆನಿಂತಿದೆ. ಶಬ್ದದಲ್ಲಿ ವಾಮನ ಅರ್ಥದಲ್ಲಿ ತ್ರಿವಿಕ್ರಮ, ಇದು ಅರಿವಿನ ಸಾಗರ - ಸರ್ವಶಾಸ್ತ್ರಮಯೀ ಗೀತೆಗೆ ಆಚಾರ್ಯತ್ರಯರು ಭಾಷ್ಯ ಬರೆದಿರುವರು. ಗೀತೆಯ ಬೆಳಕಿನಲ್ಲಿ ತಮ್ಮ ಸಿದ್ಧಾಂತವನ್ನು ಮಂಡಿಸಿದ್ದಾರೆ. ಪ್ರಪಂಚದ ಎಲ್ಲಾ ಭಾಷೆಗಳಿಗೂ ಅನುವಾದವಾದ ಏಕ ಮಾತ್ರ ಗ್ರಂಥ, ಇದರ ಶ್ರೇಷ್ಠತೆ ಮತ್ತು ಜನಪ್ರಿಯತೆಗೆ ಸಾಕ್ಷಿ. ಒಂದು ಲಕ್ಷಶ್ಲೋಕ ವ್ಯಾಪ್ತಿ ಮಹಾಭಾರತದ ಆದಿಪರ್ವವೇ ಮೊದಲಾದ 6 ನೇ ಪರ್ವವಾದ ಭೀಷ್ಮ ಪರ್ವದ ಭಾಗವಾಗಿ 23 ರಿಂದ 40 ಅಧ್ಯಾಯದವರೆಗಿನ 18 ಅಧ್ಯಾಯ, 700 ಪದ್ಯಗಳಲ್ಲಿ ಕೃಷ್ಣ - ಅರ್ಜುನರ ಸಂವಾದರೂಪವಾಗಿದೆ.

ಈ ಪುಟ್ಟ ಗ್ರಂಥದಿಂದ ಪರಿಹರಿಸಿಕೊಳ್ಳಲಾಗದ ಜೀವನ ಸಮಸ್ಯೆಗಳೇ ಇಲ್ಲವೆನ್ನಬಹುದು. ಯಾರು ಯಾವ ಉದ್ದೇಶವನ್ನು ಇಟ್ಟಕೊಂಡು ಗೀತೆಯ ಕದ ತಟ್ಟುತ್ತಾರೋ, ಅವರಿಗದು ಲಭ್ಯವಾಗುತ್ತದೆ. ಹೀಗೆ ಗೀತೆಯ ಕಡಲಿಂದ ಬೊಗಸೆಯರಿವನ್ನು ತುಂಬಿಕೊಳ್ಳುವ ಪ್ರಕ್ರಿಯೆ ಹಲವು ಶತಮಾನಗಳಿಂದ ನಡೆಯುತ್ತ ಬಂದಿದೆ. ಗೀತೆಯಲ್ಲೇನಿದೆ ಎನ್ನುವುದಕ್ಕಿಂತ ಏನಿಲ್ಲ ಎನ್ನುವುದನ್ನು ಹುಡುಕಲು ಯಾರಿಗೂ ಸಾಧ್ಯವಿಲ್ಲ. ಗೀತೆಯನ್ನಾದರೂ ಪಠಿಸಿ ಮುಗಿಸಬಹುದು ಆದರೆ ಗೀತೆಯ ಮಹಿಮೆಯನ್ನು ಮಾತ್ರ ಹೇಳಿ ಮುಗಿಸಲು ಸಾಧ್ಯವಿಲ್ಲ ಎನ್ನುವುದು ಸಹಜ ಸೊಲ್ಲು, ಕಾರಣ - ಗೀತೆ ಮಹಾಮಹಿಮೆ ಶ್ರೀ ಕೃಷ್ಣನ ಚಿನ್ಮಯರೂಪ.

### ಅರಿವಿನ ಕಡಲು

ಅರ್ಜುನ ಈ ಪ್ರಪಂಚದ ಎಲ್ಲ ಜೀವಕೋಟಿಯ ಪ್ರತಿನಿಧಿ, ಸಂಸಾರದಲ್ಲಿ ನಮಗಾಗುವ ರಾಗ-ದ್ವೇಷ, ಸಂಕಟ, ಉದ್ವೇಗ, ಕಾರ್ಪಣ್ಯ,ಶೋಕ, ಮೋಹ, ಮೊದಲಾದ ಎಲ್ಲವನ್ನು ಅವನು ಶ್ರೀ ಕೃಷ್ಣನಲ್ಲಿ ತೋಡಿಕೊಂಡಿದ್ದಾನೆ. ಕ್ರೌಂಚನ ಆರ್ತನಾದಕ್ಕೆ ಸ್ಪಂದಿಸಿದ ವಾಲ್ಮೀಕಿಯ ನುಡಿ ರಾಮಾಯಣವೆಂಬ ಆದಿಕಾವ್ಯವಾಯಿತು. ಅರ್ಜುನನ ದುಃಖಕ್ಕೆ ಉತ್ತರಿಸಿದ ಭಗವಂತನ ನುಡಿ ಭಗವದ್ಗೀತೆಯಾಯಿತು.

ಅಂತ್ಯ ದ್ವಾಪರದಲ್ಲಿ ಉದಿಸಿದ ಗೀತೆಯ ನಿಜವಾದ ಉದ್ದೇಶ ಮುಂದಿನ ಕಲಿಯುಗ, ಅರ್ಥಾತ್ ಪುರುಸೊತ್ತಿಲ್ಲದ

ಯುಗಕ್ಕಾಗಿ, ಇಂತಹ ಜನರಿಗಾಗಿಯೇ ರಾಶಿ ಗ್ರಂಥ ಅಧ್ಯಯನಕ್ಕೆ ಪರ್ಯಾಯವಾಗಿ ಅರ್ಜುನನನ್ನು ನಿಮಿತ್ತೀಕರಿಸಿ ಅಮೃತಮಯವಾದ ಉಪದೇಶಸಾರವಾದ ಪುಟ್ಟಗೀತೆ ಬಂತು. ಇದು ಭಗವಂತನ ಅಭಯ ಅಮರವಾಣಿ. ಶ್ರೀ ಕೃಷ್ಣನು ತನ್ನ ಹೃದಯವನ್ನೆ ಬಿಚ್ಚಿ ಗೀತೆಯನ್ನು ಅರ್ಜುನನಿಗೆ ನೀಡಿದ್ದಾನೆ.ಇದು ಇಬ್ಬರ ಸಖರ ನಡುವಣ ಹೃದಯ ಸಂವಾದ ಗೀತೆಯನ್ನು ಅರ್ಥ ಮಾಡಿಕೊಳ್ಳಬೇಕಾದರೆ ಭಗವಾನ್ ಕೃಷ್ಣನೊಂದಿಗೆ ಒಂದು ಬಗೆಯ ಸ್ನೇಹ ಅಥವಾ ಸಖ್ಯ ಅತ್ಯವಶ್ಯಕ.ಗೀತೆ ಪರಮಾತ್ಮನ ಶಕ್ತಿ. ಆದುದರಿಂದ ಆಕೆಯನ್ನು ಗೀತಾಮಾತೆ ಎಂದು ಭಕ್ತಿ ಭಾವದಿಂದ ಸಮೀಪಿಸಬೇಕು ವಯಸ್ಸು, ವೃತ್ತಿ ಪ್ರವೃತ್ತಿ ಇವುಗಳ ಎಣಿಕೆಯಿಲ್ಲದೆ ಎಲ್ಲ ವಯೋಮಾನದವರಿಗೂ ನೆರವಾಗಬಲ್ಲದ್ದನ್ನು ಗೀತೆ ತಿಳಿಸುತ್ತದೆ.

ಭಗವದ್ಗೀತೆಯಲ್ಲಿ ಚೆನ್ನಾಗಿ ಬದುಕಲು ಬೇಕಾದುದೆಲ್ಲವೂ ಇದೆ.ಇದೊಂದು ಜೀವನ ಮಾರ್ಗದರ್ಶಿ ಗ್ರಂಥ. ಯಜ್ಞದ ಹೆಗ್ಗಳಿಕೆಯನ್ನು ಹೇಳಿದ್ದರೂ ಅದು ಕರ್ಮಕಾಂಡದ ನೆಲೆಯಲ್ಲಿ ಬದುಕೇ ಒಂದು ಯಜ್ಞ ಎಂಬರ್ಥದಲ್ಲಿ, ಇನ್ನು ನಮ್ಮಲ್ಲಿ ಬಳಕೆಯಲ್ಲಿರುವ ದೇವತಾಮೂರ್ತಿಯಾಗಲಿ;

ಗುಡಿಗೋಪುರಗಳಾಗಲಿ, ವ್ರತನೋಂಪಿ ಮೊದಲಾದವುಗಳಾಗಲಿ ಭಗವದ್ಗೀತೆಯಲ್ಲೆಲ್ಲೂ ಕಾಣಸಿಗುವುದಿಲ್ಲ.

ಸನ್ಯಾಸ ಎಂಬ ಮಾತಿನ ಬಳಕೆ ಇಲ್ಲಿ ವಿಶೇಷವಾಗಿ ಇದೆಯಾದರೂ ನಮ್ಮ ಇಂದಿನ ಆಶ್ರಮ ಸಂನ್ಯಾಸದ ಕಲ್ಪನೆ ರವೆಯಷ್ಟು ಇರದು ಗೀತೆಯನ್ನು ಹೇಳುವ ಕೃಷ್ಣ; ಕೇಳಿದ ಅರ್ಜುನ ಇಬ್ಬರೂ ಗೃಹಸ್ಥರೇ. ಗೃಹಸ್ಥರಾಗಿಯೇ ಉಳಿದವರು, ಎಂದ ಮೇಲೆ ಕೃಷ್ಣನ ಆಧ್ಯಾತ್ಮ ಉಪದೇಶ; ಅರ್ಜುನನ ಜಿಜ್ಞಾಸೆ ಎರಡು ಲೋಕ ವ್ಯವಸ್ಥೆಯಲ್ಲಿ ಸೋಜಿಗವಾದುದೇ.

ಸಂಸಾರ ಸಾಗರದಲ್ಲಿ ಬಿದ್ದು ಒದ್ದಾಡುತ್ತಿರುವವರಿಗೆ ಉದ್ಧಾರಗೈಯುವ ಧೈರ್ಯಪ್ರದವಾದ ಉಪದೇಶ ರತ್ನಗಳಿಂದ ಯುಕ್ತವಾದ ದಿವ್ಯಮಾಲೆ. ಇದೊಂದು ತತ್ತ್ವ ಶಾಸ್ತ್ರದಂತೆ ಮಾನಸಿಕ ಶಾಸ್ತ್ರವೂ ಹೌದು. ಆಧ್ಯಾತ್ಮ ಲೌಕಿಕಗಳೆರಡಕ್ಕೂ ಸಲ್ಲುವ ತಿಳಿವಿನದೊಂದು ಪರಿಪೂರ್ಣ ಪ್ಯಾಕೇಜ್.

ಸುಖ ಸಾಧನೆಗಳೆಂದು ನಿರ್ಮಿಸಿಕೊಂಡ ವಸ್ತುಗಳು ಹಾಗೂ ಜೀವನ ಪದ್ಧತಿಗಳು ಹುಟ್ಟುಹಾಕಿದ ಕಲ್ಮಶಗಳು ಮಾನವನಿಗೆ ದೊಡ್ಡ ಸಮಸ್ಯೆಯನ್ನು ಸೃಷ್ಟಿಸಿ ಮಾನಸಿಕ ಒತ್ತಡಗಳು ಹೆಚ್ಚಾಗಿ ಬದುಕಿಗಾಗಿ ಹೋರಾಟ ನಡೆಸುವಂತೆ ಮಾಡಿದೆ. ಇವೆಲ್ಲಕ್ಕೂ ಪರಿಹಾರವಾಗಿ ಭಗವದ್ಗೀತೆ ಮಾರ್ಗದರ್ಶಕ.

ಸ್ವಾತಂತ್ರ್ಯದ ಕಾಲಘಟ್ಟದಲ್ಲಿ ಮೂವರು ರಾಜಕೀಯ ಆಧ್ಯಾತ್ಮಿಕ ನಾಯಕರು ಗೀತೆಯಿಂದ ತಾವು ಸ್ವತಃ ಪ್ರೇರಿತರಾಗಿ, ಗೀತೆಯ ಮಹಾತ್ಮೆಯನ್ನು ಬಹಳ ಪರಿಣಾಮಕಾರಿಯಾಗಿ ಸಾರಿದರು ಅವರೆಂದರೆ: ಮಹಾತ್ಮಗಾಂಧಿ, ಬಾಲಗಂಗಾಧರ ತಿಲಕ್ ಮತ್ತು ಅರವಿಂದ್ ಘೋಷ್.

ಹಾಗಾದರೆ ಗೀತೆಯ ಅಸಲಿ ರಹಸ್ಯವೇನಾದರು ಏನು? ಗೀತೆಯನ್ನು ತಿಳಿದುಕೊಳ್ಳಲು ಬುದ್ಧಿಯ ಕಸರತ್ತು ಬೇಕಾಗಿಲ್ಲ ಒಮ್ಮೆ ರಾಮಕೃಷ್ಣಪರಮಹಂಸರಿಗೆ ಯಾರೋ ಕೇಳಿದರು ಗೀತೆಯ ಪ್ರಮುಖ ಸಂದೇಶವೇನು? ಅದಕ್ಕೆ ಅವರೆಂದರು ‘ಗೀತಾ, ಗೀತಾ ಎಂಬ ಪದವನ್ನು ಉಚ್ಚರಿಸುತ್ತ ಹೋಗು. ಅದು ತಾಗಿ, ತಾಗಿ ಎಂದಾಗುತ್ತದೆ. ಅಂದರೆ ತ್ಯಾಗ.

### ಗೀತೆ ಮತು ನಿರ್ವಹಣಾ ಶಾಸ್ತ್ರ

ಇಂದಿನ ತಲೆಮಾರು ಟೈಮ್ ಮ್ಯಾನೇಜ್‌ಮೆಂಟ್ , ಟೀಮ್‌ವರ್ಕ್,ಪಾಸಿಟೀವ್ ಥಿಂಕಿಂಗ್, ಡಿಸಿಷನ್ ಮೇಕಿಂಗ್‌ನಂತಹ ಇಂದಿನ ದೈನಂದಿನ ಚಟುವಟಿಕೆಗಳಿಗೆ ಪೂರಕವಾಗುವ ಹಾಗೂ ಪ್ರೇರಕವಾಗುವ ಅಂಶಗಳನ್ನು ಭಗವದ್ಗೀತೆಯಿಂದ ಪಡೆಯಲು ಯಶಸ್ವಿಯಾಗಿದೆ.ಆಧುನಿಕ ಶಿಕ್ಷಣದಲ್ಲಿಯೂ ಗೀತೆಯ ಅಂಶಗಳನ್ನು ಬಳಸಿಕೊಳ್ಳುವ ಕ್ರಮವಿದೆ.ಬಿಜಿನೆಸ್ ಮ್ಯಾನೆಜ್ಮೆಂಟ್‌ನಲ್ಲಿ ಕ್ಯಾಪಿಟಲ್, ಕೆಪಬಲಿಟ, ಕೆನಕ್ಷನ್, ಕಮ್ಯೂನಿಕೇಶನ್,ಕಮಿಟ್ಮೆಂಟ್ ಇವು ಭಗವದ್ಗೀತೆಯಿಂದ ಆಯದು ಬೋಧಿಸಲಾಗುವ ಪಂಚ‘ಸಿ’ ಗಳೆಂದು ಹೆಸರಾಗಿವೆ.



ಗ್ರಂಥ ಮುಗಿಯುವುದು ನಾನು ಹೇಳಿದುನ್ನೆಲ್ಲಾ ಚೆನ್ನಾಗಿ ವಿಚಾರ ಮಾಡಿನೋಡು;ನಿನಗೆ ಸರಿಯಂದು ತೋರಿದ ರೀತಿಯಲ್ಲಿ ನಡೆದುಕೋ ಎಂಬ ಮಾತಿನಿಂದ ಗೀತೆಯ ಸ್ವಾರಸ್ಯವಿರುವುದೇ ಇಲ್ಲಿ ಬದುಕುವುದೆಲ್ಲ ಮೋಕ್ಷಕ್ಕಾಗಿಯೇ ಎಂಬುದು ಗೀತೆ ಕಲ್ಪನೆಯಲ್ಲ ಚೆನ್ನಾಗಿ ಬದುಕುವುದು ಮೋಕ್ಷಕ್ಕೆ ಸಮನಾದುದೇ ಎಂಬುದನ್ನು ಗೀತೆ ತಿಳಿಸುತ್ತದೆ.

ಗೀತೆಯು ಧರ್ಮವನ್ನು ಕಟ್ಟಳೆಯನ್ನಾಗಿ ಮಾಡುವುದಿಲ್ಲ, ಇದು ಧರ್ಮ

ಇದನ್ನೇ ಮಾಡು, ಇದು ಅಧರ್ಮ ಇದನ್ನು ಮಾಡಬೇಡ, ಎಂದು ಆದೇಶಿಸದೆ, ಇದು ಧರ್ಮ-ಇದು ಅಧರ್ಮ ಎಂದು ಹೇಳದೆ ಧರ್ಮಾ ಧರ್ಮದ ವಿವಿಧ ಆಯಾಮಗಳನ್ನು 'ಯೋಗ'ದ ತಕ್ಕಡಿಯಲ್ಲಿ ತೂಗಿ ನೋಡು ಇವುಗಳ ಮೌಲ್ಯ ಸ್ವರೂಪ, ಸಾಧನೆ, ಹೀಗುಂಟು ಇದರಲ್ಲಿ ನಿನಗೆ ಹಿತವಾಗುವುದನ್ನು ನೀನೇ ಆಯ್ಕೆ ಮಾಡಿಕೋ ಎನ್ನುತ್ತದೆ.

ಭಗವದ್ಗೀತೆ ವೇದ ಮತ್ತು ಇತರ ಶೃತಿಸ್ಮೃತಿಗಳ ಪ್ರಭು ಸಂಹಿತಾ ರೂಪವಾಗಿ ಧರ್ಮವನ್ನು ಬೋಧಿಸುವುದಿಲ್ಲ. ಅಥವಾ ಕಾವ್ಯದ ಮೃದುಮಧುರ ಕಾಂತಾ ಸಮ್ಮಿತಾ ಮಾರ್ಗವನ್ನು ಅನುಸರಿಸುವುದಿಲ್ಲ. ಈ ಎರಡಕ್ಕೂ ಮಧ್ಯದ ಮಿತ್ರಾಭಿಭಾಷಣ ಸ್ವರೂಪದ ಮಿತ್ರಾಭಿಸಂಹಿತಾ ಮಾರ್ಗವನ್ನು ಅನುಸರಿಸುತ್ತದೆ.

ಗೀತೆಯ ಮೌಲ್ಯ ಅನಿರ್ವಚನೀಯ, ಅದೇನಿದ್ದರೂ ಅನುಭವಗಮ್ಯ ಅದು ಅನುಭವಿಸಿದವರ ಜೀವನದಲ್ಲಿ ಅಭಿವ್ಯಕ್ತವಾಗುವಂತಹುದು. ಗೀತೆಯ ತತ್ತ್ವಗಳು ವ್ಯಕ್ತಿಯ ಅಂತರಂಗವನ್ನು ಮೊದಲು ಬೆಳಗಿ ತದನಂತರ ಬಹಿರಂಗವನ್ನು ಬೆಳಗಿಸುತ್ತದೆ. ಇಲ್ಲೇನಿದ್ದರೂ ಮೊದಲು ಆತ್ಮ ಸಾಕ್ಷಾತ್ಕಾರ, ಆತ್ಮಾನುಭವ,ನಂತರ ತತ್ವರಿಮಾಣವಾದ ಯಜ್ಞರೂಪಿ ಬದುಕಿನ ಅನಾವರಣ ಮತ್ತು ತನ್ಮೂಲಕ ಲೋಕ ಸಂಗ್ರಹ.

ಧರ್ಮದ ಪಂಚಾಂಗದ ಮೇಲೆ ಭಕ್ತಿ, ಜ್ಞಾನ ಮುಂತಾದ ಹತ್ತು ಗುಣಗಳನ್ನು ಮೈಗೂಡಿಸಿಕೊಂಡು ಶಾಸ್ತ್ರಾರ್ಥದ ಶ್ರವಣ, ಮನನ, ನಿಧಿ ಧ್ಯಾಸನ ಪಡೆಯಬೇಕು. ಶಾಸ್ತ್ರಜ್ಞಾನದ ಜೊತೆಶೀಲ ವಿನಯಗಳು ನಿತ್ಯ ಸಂಗಾತಿಗಳಾಗಿರಬೇಕು. ಈ ಹದಿನೈದು ಮೌಲ್ಯಗಳ ನೆರವಿನಿಂದ ಹದಿನೇಳನೆಯ ವೇದ ವಿದ್ಯೆಯನ್ನು ಒಲಿಸಿಕೊಂಡು ಹದಿನೆಂಟನೆಯ ವೇದವೇದ್ಯವನ್ನು ಪಡೆಯುವುದೇ ಒಟ್ಟು ಆಧ್ಯಾತ್ಮದ ಇತಿಹಾಸದ ಸಾರಾಂಶ ಅದಕ್ಕೆಂದೆ ಭಗವದ್ಗೀತೆಯಲ್ಲಿ ಹದಿನೆಂಟು ಅಧ್ಯಾಯಗಳು.ಇದರ ಒಂದಕ್ಷರವೂ ಸುಳ್ಳಲ್ಲ,ಅಳಬಾರದಕ್ಕಾಗಿ ಅಳುತ್ತೇವೆ ಎಂಬಲ್ಲಿಂದ ಆರಂಭವಾಗಿ ಅಳಬೇಡ ಎಂದು ಮುಕ್ತಾಯವಾಗುವ ಗೀತೆಯ ಆಂತರ್ಯದಲ್ಲಿ ಅಳುವಿನ ಮೂಲ, ಅದಕ್ಕೆ ಪರಿಹಾರಗಳೆವೂ ಅಡಗಿದೆ.ಭಗವದ್ಗೀತೆಯು ಆಧ್ಯಾತ್ಮಿಕ ಜೀವನದಲ್ಲಿ ಆಗಲೇ ಒಂದು ಮಟ್ಟವನ್ನು ಮುಟ್ಟಿರುವವನಿಗೆ ಮಾತ್ರ ನೆರವಾಗುವ ಗ್ರಂಥವಲ್ಲ; ಆಧ್ಯಾತ್ಮಿಕ ಜೀವನದಲ್ಲಿ ಆಗ ತಾನೆ ಕಣ್ತೆರೆದು ಎಳೆಯ ಹಸುಳೆಯಿಂದ ಹಿಡಿದು ಸಿದ್ಧಿಯ ಪರಮ ಪದವನ್ನು ಮುಟ್ಟಿದ ಪರಮಹಂಸನವರೆಗೆ ಅವರವರಿಗೆ ಬೇಕಾದ ಸಲಹೆ ನೀಡುತ್ತದೆ.

## ಸಮರಾಂಗಣದ ಜೀವಗೀತೆ

ಪ್ರಪಂಚದಲ್ಲಿ ಮತ್ಯಾವ ಗ್ರಂಥವು ಇಷ್ಟು ನಾಟಕೀಯವಾಗಿ ಪ್ರಾರಂಭವಾಗುವುದಿಲ್ಲ. ಗೀತಾಸಂದೇಶ ಪ್ರಾರಂಭವಾಗುವುದಕ್ಕಾಗಿಯೇ ಕುರುಕ್ಷೇತ್ರ ಯುದ್ಧದ ಹಿನ್ನೆಲೆ ರೂಪಿತವಾದಂತೆ ಇದೆ. ಇದೊಂದು ಗುರುಶಿಷ್ಯರು ಇರುವ ಋಷ್ಯಾಶ್ರಮವಲ್ಲ, ಗಿರಿಗುಹೆಯಲ್ಲಿ ಒಟ್ಟು 18 ಅಕ್ಷೋಹಿಣಿ ಸೈನ್ಯದ ವೀರರಿಂದ ಮೊಳಗುತ್ತಿರುವ ರಣರಂಗ ಗೀತೆಯಲ್ಲಿ ಸ್ಥಿತಪ್ರಜ್ಞತೆ ಬಗ್ಗೆ ವರ್ಣಿಸಿದೆ. ಸ್ಥಿತ ಪ್ರಜ್ಞ ಎಂದರೆ ಬಣ್ಣಿಸಲಾಗದಂತಹ ಶಾಂತಿಯನ್ನು ಅನುಭವಿಸುವುದು, ಸುಖ-ದುಃಖ ಎರಡೂ ಒಂದೇ ನೆಲೆಯಲ್ಲಿ ನೋಡುವುದು."ನಾನು ಎನ್ನುವುದನ್ನು ಬಿಟ್ಟು ಎಲ್ಲವನ್ನು ದೇವರಿಗೆ ಸಮರ್ಪಿಸುತ್ತೇನೆ" ಎಂದಿರುವ ಈ ಭಾಗ ಗಾಂಧೀಜಿಗೆ ಬಹಳ ಪ್ರಿಯವಾಗಿತ್ತು, ಅದಕ್ಕೆ ಅವರು ಗೀತೆಯನ್ನು ನನ್ನ ತಾಯಿಯೆಂದು ಬಣ್ಣಿಸಿರುವುದು. ಭಗವದ್ಗೀತೆ ವರ್ಣ ವ್ಯವಸ್ಥೆಯನ್ನು ಬಿಗಿಗೊಳಿಸಿತು ನಿಜ; ಅದು ಜಾತಿವಾದವಲ್ಲ, ಮೇಲು ಕೀಳುಗಳ ಶೋಷಣೆಯ ವ್ಯವಸ್ಥೆಯಲ್ಲ; ವಿರಾಟ ಪುರುಷನ ಅಂಗಾಂಗಗಳಲ್ಲಿ ಯಾವುದು ಮೇಲು ಯಾವುದು ಕೀಳು? ವರ್ಣ ಜಾತಿಯಾದದ್ದು ಜಾತಿ ಮತವಾದದ್ದು ಈ ಯುಗದ ದುರಂತ.ವ್ಯಕ್ತಿತ್ವ ವಿಕಸನಕ್ಕೆ ಅತ್ಯುತ್ತಮ ಮಾರ್ಗದರ್ಶನವೆಂದರೆ ಭಗವದ್ಗೀತೆ.ಇದನ್ನು ಬೋಧಿಸಿದ ಶ್ರೀ ಕೃಷ್ಣನೇ ಪ್ರಪಂಚ ಕಂಡ ಮೊಟ್ಟ ಮೊದಲ ವ್ಯಕ್ತಿ ವಿಕಸನ ತರಬೇತುದಾರ.ಮನುಷ್ಯನ 'ಮನಸ್ಸೇ ಆತ್ಮೀಯ ಹಾಗೂ ಕೆಟ್ಟ ಶತ್ರು' ಎಂಬ ಗೀತಾವಾಣಿ ಸ್ವಯಂ ನಿರ್ವಹಣೆಗೆ ಹಿಡಿದ ಕೈಗನ್ನಡಿ.ನಿಷ್ಕ್ರಿಯನಾಗದೆ ಸದಾ ಕ್ರಿಯಾಶೀಲನಾಗಿ ಕರ್ಮವನ್ನು ಮಾಡು ಎಂಬುದೇ ಗೀತೆಯ ಧ್ಯೇಯವಾಕ್ಯ.

ಸ್ವಾತಂತ್ರ್ಯ, ಸಮಾನತೆ, ಭಾವೈಕ್ಯ, ಸಮದರ್ಶಿತ್ವ, ಅಹಿಂಸೆ, ತಾಳ್ಮೆ, ನಿರಂಹಕಾರಕ, ಆತ್ಮೋದ್ಧಾರ ಮುಂತಾದವು ಗೀತೆಯಲ್ಲಿ ಪ್ರತಿಪಾದಿತ ಮೌಲ್ಯಗಳು ಗೀತೆಯೆಂದೂ ಅಪ್ರಸ್ತುತವಾಗುವುದಿಲ್ಲಾ, ಅದು ಸಾರ್ವಕಾಲಿಕ ಮತ್ತು ಸರ್ವಮಾನ್ಯ. ಭಗವದ್ಗೀತೆ ಬೆಂಕಿಪೊಟ್ಟಣದಂತೆ ಕಿರಿದಾದ ಗ್ರಂಥ, ಬೆಂಕಿಪೊಟ್ಟಣದಿಂದ ಯಾವ ಕಡ್ಡಿ ಗೀರಿದರೂ ಕಿಡಿ ಬೆಳಗುವಂತೆ ಗೀತೆಯ ಯಾವ ಶ್ಲೋಕವನ್ನು ನೋಡಿದರು ಅಲ್ಲಿ ಜ್ಞಾನ ಜ್ಯೋತಿ ಹೊರಹೊಮ್ಮುತ್ತದೆ. ಗೀತಾಜ್ಯೋತಿಯ ಪಥದಲ್ಲಿ ನಡೆದು ಯೋಗೀಶ್ವರನ ಉಪದೇಶವನ್ನು ತಿಳಿದುಕೊಳ್ಳುವ ಅವಕಾಶವೇ ಮಾರ್ಗಶಿರ ಶುದ್ಧ ಏಕಾದಶಿಯ ಗೀತಾ ಜಯಂತಿ.





# ಶ್ರೀ ವಿಲ್ಲಿಪುತ್ತೂರು

ತೆಲುಗು ಮೂಲ - ಕೆ.ಕೆ. ಮಂಗಪತಿ
ಅನುವಾದ : ಶ್ರೀಮತಿ ಗೀತಾ
- 8277334079

ತಮಿಳುನಾಡಿನ ಮಧುರೈ ನಗರದಿಂದ ನೈರುತ್ಯದಿಕ್ಕಿಗೆ ಸುಮಾರು 80 ಕಿ.ಮೀ. ದೂರದಲ್ಲಿ 'ಶ್ರೀವಿಲ್ಲಿಪುತ್ತೂರು' ಎಂಬ ಪಟ್ಟಣವಿದೆ.ಇದು ವಿರುಧ್‌ನಗರ ಜಿಲ್ಲೆಯ ಪರಿಧಿಯಲ್ಲಿ ಬರುತ್ತದೆ. ಈ ಕ್ಷೇತ್ರದಲ್ಲಿರುವ ಪೆರುಮಾಳ್‌ರವರ ಆಲಯವು ಬಹು ಪ್ರಾಚೀನವಾದುದು. ಅಲ್ಲಿಯ ಭಗವಂತನನ್ನು ವಟಪತ್ರ ಶಾಯಿ ಎಂದು ಕರೆಯುತ್ತಾರೆ. ಮಂಡೂಕ ಮಹರ್ಷಿಗೆ ಶ್ರೀರಂಗನಾಥನು ಪ್ರತ್ಯಕ್ಷನಾಗಿ ಕಂಡಿದ್ದಾನೆ. ಪೆರುಮಾಳ್ ಆಲಯವನ್ನು ಆಳ್ವಾರರು "ದಿವ್ಯದೇಶ" ವೆಂದು ಕರೆದಿದ್ದಾರೆ. ಪೆರಿಯಳ್ವಾರರು ಹಾಗೂ ಆಂಡಾಳ್ ಆಳ್ವಾರರು ತಮ್ಮ ಎರಡು ಪಾಶುರಗಳಲ್ಲಿ ಈ ಮಂಗಳಕಾವ್ಯಗಳನ್ನು ಬರೆಸಿದ್ದಾರೆ. ಪೆರುಮಾಳ್ ಬ್ರಹ್ಮೋತ್ಸವಗಳು ತಮಿಳು ಪಂಚಾಂಗದ ಪುರಟಾಸಿ ಮಾಸದ (ಸೆಪ್ಟೆಂಬರ್- ಅಕ್ಟೋಬರ್) 10 ದಿನಗಳ ವರೆಗೆ ನಡೆಯುತ್ತದೆ.ಆಲಯದ ದರ್ಶನ ವೇಳೆ, ಬೆಳಗ್ಗೆ 7 ರಿಂದ 12 ರ ವರೆಗೆ ಮತ್ತೆ ಸಂಜೆ 4 ರಿಂದ 8 ರ ವರೆಗೆ ಲಭ್ಯವಿರುತ್ತದೆ. ವಟಪತ್ರಶಾಯಿ ಪೆರುಮಾಳ್ ದೇವಾಲಯದ ರಾಜ ಗೋಪುರವನ್ನು ತಮಿಳು ಸರ್ಕಾರ ರಾಷ್ಟ್ರಚಿನ್ಹೆಯಾಗಿ ಗುರುತಿಸಿದೆ.

ಪೆರಮಾಳ್ ದೇವಾಲಯಕ್ಕೆ ಬಲಭಾಗದಲ್ಲಿರುವ ಹೂದೋಟವನ್ನು ಆಂಡಾಳ್ ಅಮ್ಮನವರ ಅವತಾರ ಸ್ಥಳವೆಂದೇ ಶ್ರೀ ವೈಷ್ಣವರು ಗೌರವಿಸುತ್ತಾರೆ. ಆ ಹೂದೋಟವನ್ನು 'ಆಂಡಾಳ್' ನಂದನವನವೆಂದು ಸಹಾ ಕರೆಯುತ್ತಾರೆ. ಇಲ್ಲಿಯೇ ಭೂದೇವಿ ಅಂಶಜಳಾದ ಆಂಡಾಳ್ ಅಮ್ಮನವರು ವಿಷ್ಣುಭಕ್ತನಾದ ಆಲಯದ ಅರ್ಚಕರಿಗೆ ದೊರೆತದ್ದು. ಆತನು ಗೋದಾಯೆಂಬ ಹೆಸರಿನಿಂದ ಕರೆದಿದ್ದಾನೆ. ತೆಲುಗು ಭಾಷೆಯ ಜನ ಆಕೆಯನ್ನು 'ಗೋದಾದೇವಿ' ಯೆಂದು ಕರೆದಿದ್ದಾರೆ.

ವಟಪತ್ರಶಾಯಿ ದೇವಾಲಯದ ಹಿಂಭಾಗದಲ್ಲಿ ಶ್ರೀ ಆಂಡಾಳ್ ತಾಯಿಗೊಂದು ಚೊಕ್ಕವಾದ ದೇವಾಲಯವಿದೆ. ದೇವಾಲಯದ ಅದ್ಭುತವಾದ ಶಿಲ್ಪಕಲೆಯನ್ನು ನೋಡತಕ್ಕದ್ದು. ಕಲ್ಯಾಣಮಂಟಪ,ಕನ್ನಡಿಮಂಟಪ, ಮಹಾಮಂಟಪ, ಮುಖಮಂಟಪ, ವಿವಿಧ ಸನ್ನಿಧಿಗಳು ಮೊದಲಾದವೇ ಇವೆ. ಆಲಯ ಗರ್ಭಗೃಹದಲ್ಲಿ ಪೀಠದ ಮೇಲೆ ಶ್ರೀರಂಗನಾಥ್ ಪೆರಮಾಳ್‌ನೊಂದಿಗೆ ಶ್ರೀ ಆಂಡಾಳ್ ಅಮ್ಮನವರನ್ನು, ಶ್ರೀ ಗರುಡಾಳ್ವಾರ್‌ರನ್ನು ಸಂದರ್ಶಿಸಬಹುದು. ಶ್ರೀ ಆಂಡಾಳ್ ಅಮ್ಮನವರ ಕಲ್ಯಾಣೋತ್ಸವ ತಮಿಳು ಪಂಚಾಂಗದ ಪ್ರಕಾರ ಪಂಗಣಿ ಮಾಸದಲ್ಲಿ ಜರಗುತ್ತವೆ. (ಮಾರ್ಚ್-ಎಪ್ರಿಲ್) ಅಡಿಮಾಸ (ಜುಲೈ-ಆಗಸ್ಟ್)ದಲ್ಲಿ ಅಮ್ಮನವರ ಜನ್ಮಮಹೋತ್ಸವಗಳನ್ನು ನೆರವೇರಿಸಲಾಗುತ್ತದೆ. ಮಾರ್ಗಳಿ ಮಾಸದಲ್ಲಿ



(ಡಿಸೆಂಬರ್ - ಜನವರಿ) ತಿರುಉತ್ಸವಗಳಿರುತ್ತವೆ. ಆಲಯದ ಹೊರ ಪ್ರದೇಶದಲ್ಲಿ ಪೂಜಾ ಸಾಮಾಗ್ರಿಗಳನ್ನು ವಿಕ್ರಯಿಸುವ ಅಂಗಡಿಗಳಿವೆ. ಶ್ರೀ ಆಂಡಾಳ್ ಅಮ್ಮನವರ ಹಾಲು ಖೋವಾ ಪ್ರಸಾದ ವಿಕ್ರಯಿಸಲಾಗುತ್ತದೆ, ಇದು ಬಹಳ ಪ್ರಸಿದ್ಧಿ.ಪೆರಿಯಾಳ್ವಾರರ ತಿರು ನಕ್ಷತ್ರದ ಸಂದರ್ಭವಾಗಿ ತಿರು ಉತ್ಸವಗಳು ಜರಗುತ್ತವೆ.

ಆಂಡಾಳ್ ಅಮ್ಮನವರ ರಚನೆಯಾದ "ತಿರುಪ್ಪಾವೈ" ಲೋಕಪ್ರಸಿದ್ಧಿ. ಇದು 30 ಪಾಶುರಗಳಿಂದ ಕೂಡಿದ ಕಾವ್ಯ ಧನುರ್ಮಾಸ ದಲ್ಲಿ ಸ್ತ್ರೀಯರು 30 ದಿನಗಳು ಭಕ್ತಿ ಶ್ರದ್ಧೆ ಗಳಿಂದ 'ತಿರುಪ್ಪಾವೈ'ಪಾರಾಯಣ ವನ್ನು ಮಾಡುತ್ತಾರೆ. ಆಂಡಾಳ್ ಆಳ್ವಾರ್‌ರ ಇನ್ನೊಂದು ಕಾವ್ಯ ''ನಾಚ್ಚಿ ಯಾರ್ ತಿರುಮುಳಿ". ಆಂಡಾಳ್ ಅಮ್ಮನವರ ಜನ್ಮ ನಕ್ಷತ್ರ ಸಂದರ್ಭದಲ್ಲಿ ಉತ್ಸವಗಳನ್ನು ಜರುಗಿಸ ಲಾಗುತ್ತದೆ. ತೆಲುಗಿನವರು ಶ್ರಾವಣ ಮಾಸದಲ್ಲಿ, ಶುದ್ಧ ಚೌತಿ,ಹುಬ್ಬ ನಕ್ಷತ್ರದಿಂದ ಕೂಡಿದ ತಿಥಿಯಂದು ತಿರುನಕ್ಷತ್ರ ಉತ್ಸವಗಳನ್ನು ಆಚರಿ ಸುತ್ತಾರೆ.

**ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.**

**ತಿರುಮಲೆ ತಿರುಪತಿ ದೇವಸ್ಥಾನಗಳು**

## ಟೋಲ್ ಫ್ರಿ ನಂಬರ್

## 18004254141

**ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.**

**ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!**

**ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.**



ಭಾಗವತ ಕಥಾಸಾಗರ

# ರಿಷಭದೇವನ ಅವತರಣಿಕೆ

ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
- 9821914642
ಅನುವಾದ : ಡಿ.ಎಸ್.ಬದ್ರಿನಾಥ್

ಋಷಭದೇವನ ಅವತಾರದ ವರ್ಣನೆ ಭಾಗವತದ ಪಂಚಮ ಸ್ಕಂದದಲ್ಲಿ ಬರುತ್ತದೆ. ಅದು ಆದಿದೇವ ಭಗವಂತನ ಅವತಾರಗಳಲ್ಲಿ ಎಂಟನೇಯದೆಂದು ಹೇಳಲಾಗಿದೆ.'ಅಷ್ಟಮೇ ಮೇರುದೇವ್ಯಾಂತು ನಾಭೀರ್ಜಾತ ಉರುಕ್ರಮಃ'' ಎಂದು ಭಾಗವತದ ಪ್ರಥಮ ಸ್ಕಂದದಲ್ಲಿ ವರ್ಣಿತಗೊಂಡಿದೆ. ಮಹಾರಾಜ ನಾಭಿ ಮತ್ತವನ ಪತ್ನಿ ಮೇರುದೇವಿಗೆ ಭಗವಂತನಾದ ಉರುಕ್ರಮ ಋಷಭದೇವನ ರೂಪದಲ್ಲಿ ಅವರ ಸುತನಾಗಿ ಜನಿಸಿ, ಸಂಪೂರ್ಣವಾದ ಇಂದ್ರಿಯ ನಿಗ್ರಹ ಹೊಂದಿದವನಾಗಿ ಸರ್ವ ಆಶ್ರಮದವರಿಂದಲೂ ಗೌರವಿಸಲ್ಪಡುವ ಧೀರರು ಅನುಸರಿಸುವಂತಹ ಪರಿಪೂರ್ಣತೆಯ ಮಾರ್ಗವನ್ನು ತೋರಿಸಿ ಕೊಟ್ಟಿದ್ದಾನೆ. ಅತ್ಯದ್ಭುತವಾದ ಈ ಋಷಭದೇವನ ಅವತಾರದಲ್ಲಿ ಭಗವಂತನು ಅಮೋಘವಾದ ಉಪದೇಶಗಳನ್ನು ಮಾಡುತ್ತಾನೆ. ಪ್ರಿಯವ್ರತನ ವಂಶದಲ್ಲಿ ಜನಿಸಿದ ಋಷಭದೇವನ ಮುಂಚೆ ಹುಟ್ಟಿದ ಇತರ ವಂಶಜರ ವಿವರಗಳು ಹೀಗಿವೆ.

ಸಾಕ್ಷಾತ್ ನಾರದಮುನಿಯಿಂದಲೇ ಕೀರ್ತಿಸಲ್ಪಟ್ಟ ಪ್ರಿಯವ್ರತನು ತನ್ನ ಆಧ್ಯಾತ್ಮಿಕ ಜೀವನದ ಮಾರ್ಗವನ್ನು ಮುಂದುವರೆಸಲು ತಪೋವನಕ್ಕೆ ಹೊರಟು ಹೋದನಂತರ ಆತನ ಪುತ್ರನಾದ ಅಗ್ನಿಧ್ರುಡನು ಜಂಬೂದ್ವೀಪಕ್ಕೆ ರಾಜನಾಗಿದ್ದಾನೆ.ಧರ್ಮಪಾರಾಯಣನಾಗಿ ಆತನು ರಾಜ್ಯಪಾಲನೆ ಮಾಡುತ್ತಾ ಪ್ರಜೆಗಳನ್ನು ತನ್ನ ಸ್ವಂತ ಮಕ್ಕಳಂತೆ ಕಾಣುತ್ತಿದ್ದನು.ಆತನ ಒಂಭತ್ತು ಮಂದಿ ರಾಜಕುಮಾರರು ಸಹಜವಾಗಿ ದೃಢ ಕಾಯರಾಗಿದ್ದಾರೆ.ಅಗ್ನಿಧ್ರುಡನು ಅವರಿಗೆಲ್ಲಾ ಜಂಬೂದ್ವೀಪದ ವಿವಿಧ ಭಾಗಗಳನ್ನು ರಾಜ್ಯಗಳಾಗಿ ಹಂಚಿಕೊಟ್ಟಿದ್ದಾನೆ. ಹೀಗೆ ಅವರೆಲ್ಲರೂ ಪಿತೃ ದತ್ತವಾದ ರಾಜ್ಯಗಳನ್ನು ಉತ್ತಮ ರೀತಿಯಲ್ಲಿ ಪರಿಪಾಲಿಸಿದ್ದಾರೆ.

ಅಗ್ನಿಧ್ರುಡನು ಮರಣಿಸಿದ ನಂತರ ಆ ಒಂಭತ್ತು ರಾಜಕುಮಾರರು ಮೇರು ತನುಜೆಯರಾದ ಮೇರುದೇವಿ, ಪ್ರತಿರೂಪ, ಉಗ್ರದಂಷ್ಟ್ರಿ, ಲತ, ರಮ್ಯ, ಶ್ಯಾಮ, ನಾರಿ, ಭದ್ರ, ದೇವವೀಧಿ ಎಂಬುವ ವರನ್ನು ವಿವಾಹ ಮಾಡಿಕೊಂಡಿದ್ದಾರೆ. ಅಗ್ನಿಧ್ರುಡನ ಪುತ್ರರಲ್ಲೊಬ್ಬನಾದ ನಾಭಿಯು ಸಹಾ ಪುತ್ರಾಭಿಲಾಷಿಯಾಗಿ ಸಮಸ್ತ ಯಜ್ಞಗಳಿಗೆ ಅಧಿಪತಿಯಾದ,ಯಜ್ಞ ಭೋಕ್ತನಾದ ವಿಷ್ಣು ಭಗವಂತನನ್ನು ಭಕ್ತಿಶ್ರದ್ಧೆಗಳಿಂದ ಸ್ತುತಿಸಿ ಪೂಜಿಸಿದ್ದಾನೆ. ಆತನ ಮಡದಿಯಾದ ಮೇರು ದೇವಿಯು ಕೂಡಾ ಪತಿಯೊಂದಿಗೆ ಭಗವಂತನನ್ನು ಆರಾಧಿಸಿದ್ದಾಳೆ. ಪರಮ ಭಕ್ತನಾದ ನಾಭಿ ನಿಷ್ಕಲ್ಮಷ ಹೃದಯದಿಂದ ಮಾಡಿದ ಪ್ರವರ್ಗ್ಯವೆಂಬ ಯಜ್ಞದಿಂದ ಸಂತುಷ್ಟನಾದ ಭಗವಂತನು ಚತುರ್ಭುಜನಾಗಿ ಆತನಿಗೆ ದರ್ಶನವಿತ್ತಿದ್ದಾನೆ. ಚತುರ್ಭುಜ ನಾರಾಯಣನು ಪೀತವಸನವನ್ನುಟ್ಟಿದವನಾಗಿದ್ದಾನೆ. ಪುರುಷೋತ್ತಮನಾಗಿ ಕಾಣಿಸಿದ್ದಾನೆ. ಆತನ ವಕ್ಷಃಸ್ಥಳದ ಮೇಲೆ ವನಮಾಲೆಯು ವಿರಾಜಮಾನವಾಗಿದೆ. ಕೀರಿಟ ಕುಂಡಲಗಳಿಂದ ಆತನು ದೇದೀಪ್ಯಮಾನವಾಗಿ ಶೋಭಿಸಿದ್ದಾನೆ.ಆ ದೇವದೇವನ ಸಮಸ್ತ ಅಂಗಾಂಗಗಳು ಆಭರಣ ಭೂಷಿತವಾಗಿವೆ. ಈ ರೀತಿಯಲ್ಲಿ ಭಗವದ್ದರ್ಶನವಾಗುತ್ತಲೇ ಅಲ್ಲಿರುವವರೆಲ್ಲರಿಗೂ ಬಡವನಿಗೆ ಭಾಗ್ಯದೊರೆತಂಥ ಅನುಭವವಾಗಿದೆ.ಋತ್ವಿಕರು ಆ ದೇವದೇವನನ್ನು ವಿನಮ್ರತೆಯಿಂದ ಸ್ತುತಿಸಿದ್ದಾರೆ.

“ಪರಮ ಪೂಜ್ಯನೇ ನಾವೆಲ್ಲಾ ನಿನ್ನ ಸೇವಕರು ನೀನು ಪರಿಪೂರ್ಣನಾಗಿದ್ದರೂ ನಿತ್ಯದಾಸರಾದ ನಮ್ಮ ಅಲ್ಪ ಸೇವೆಯನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇವೆ. ದೇವದೇವ ನೀನು ವರದಾಯಕರಲ್ಲೇ ಶ್ರೇಷ್ಠನು ನಾಭಿರಾಜನ ಇಚ್ಛೆಯಂತೆ ಈ ಯಜ್ಞದಲ್ಲಿ ವರವನ್ನು ನೀಡಲೆಂದೇ ನೀವು ದರ್ಶನ ಕೊಟ್ಟಿದ್ದೀಯೆಂದು ನಾವು ತಿಳಿದಿದ್ದೇವೆ. ಆದರೆ ನಿನ್ನ ದರ್ಶನ ಭಾಗ್ಯವೇ ದೊಡ್ಡ ವರವು,ನಿನ್ನಂತಹ ಪುತ್ರನನ್ನು ಹೊಂದುವುದೇ ಈ ನಾಭಿರಾಜನ ಹೆಬ್ಬಯಕೆ” ಎಂದು ಋತ್ವಿಕರು ದೇವ ದೇವರೊಂದಿಗೆ ಹೇಳಿದ್ದಾರೆ.

ಆಗ ನಾಭಿರಾಜ ದಂಪತಿಗಳೂ, ಯಜ್ಞ ಸ್ಥಳದಲ್ಲಿದ್ದವರೆಲ್ಲರೂ ವಿಷ್ಣುವಿಗೆ ಸಾಷ್ಟಾಂಗವೆರೆಗಿದ್ದಾರೆ. ಅವರಿಂದ

ಪ್ರಸನ್ನನಾದ ಭಗವಂತನು ಮೇಘಗಂಭೀರ ಸ್ವರದಲ್ಲಿ ಹೀಗೆ ನುಡಿದಿದ್ದಾನೆ. "ಋಷಿಗಳಿರಾ! ನಿಮ್ಮ ಸ್ತುತಿಗಳಿಂದ ನಾನು ಸಂತೃಪ್ತನಾಗಿದ್ದೇನೆ: ನೀವು ಸತ್ಯ ವಾಕ್ಯಗಳನ್ನೇ ನುಡಿಯುವವರು. ನಾಭಿರಾಜನಿಗೆ ನನ್ನಂತಹ ಪುತ್ರನೇ ಬೇಕೆಂದು ಕೇಳಿದ್ದೀರಿ.ಆದರೆ ಅದು ಅಸಾಧ್ಯವಾದುದು. ಏಕೆಂದರೆ ನಾನು ಅಸಮಾನನು- ಅದ್ವಿತೀಯನು. ಆದ್ದರಿಂದ ನಾನು ನನ್ನ ಕಳೆಗಳಿಂದ ಹೊರಹೊಮ್ಮಿ ಮೇರುದೇವಿಯ ಗರ್ಭದಲ್ಲಿ ಅವತರಿಸುತ್ತೇನೆ."

ಭಗವಂತ ನುಡಿದ ಮಾತುಗಳನ್ನಾಲಿಸಿ ಮೇರುದೇವಿ ಪ್ರಸನ್ನ ಚಿತ್ತಳಾಗಿದ್ದಾಳೆ. ನಂತರ ಭಗವಂತನು ಅಂತರ್ಧಾನನಾಗಿದ್ದಾನೆ. ಈ ವಿಧವಾಗಿ ಆ ದೇವದೇವನು ಋಷಿಗಳ ಸೇವೆಯಿಂದ ಸಂತುಷ್ಟನಾಗಿ ಸ್ವತಃ ಧರ್ಮ ವಿಧಾನವನ್ನು ಪ್ರದರ್ಶಿಸಲು ಮೇರುದೇವಿಯ ಪುತ್ರನಾಗಿ ಆವಿರ್ಭವಿಸಿದ್ದಾನೆ. ಭಗವಂತನು ನಾಭಿತನಯನಾಗಿ ಅವತರಿಸಿದಾಗ ತನ್ನ ಪದತಲಗಳ ಮೇಲೆ ದಿವ್ಯ ಚಿನ್ಹೆಗಳನ್ನು ಪ್ರದರ್ಶಿಸಿದ್ದಾನೆ.ಧ್ವಜ-ವಜ್ರಗಳಂತಹ ಚಿನ್ಹೆಗಳು ಭಗವದ್‌ಲಕ್ಷಣಗಳು ಆ ಬಾಲಕನು ಪರಮ ಶಾಂತನಾಗಿರುವನು, ಭೋಗವಿರಾಗನಾಗಿರುವನು,

ದಿವ್ಯ ಲಕ್ಷಣಗಳಿಂದ ಸಮಾಹಿತನಾಗಿ ಆತನು ದಿನದಿನಕ್ಕೂ ಶಕ್ತಿಶಾಲಿಯಾಗಿ ಬೆಳೆದಿದ್ದಾನೆ. ಆತನನ್ನು ಕಂಡ ಬ್ರಾಹ್ಮಣರು. ದೇವತೆಗಳು, ಅಮಾತ್ಯರು ಆತನೇ ತಮಗೆ, ಸಮಸ್ತ ಭೂಮಂಡಲಕ್ಕೆ ರಾಜನಾಗಬೇಕೆಂದು ಬಯಸಿದ್ದಾರೆ. ನಾಭಿಗೆ ಸುತನಾಗಿ ಜನಿಸಿದ ಭಗವಂತನು ಕವಿಗಳು ವರ್ಣಿಸುವ ಸಮಸ್ತ ಲಕ್ಷಣಗಳನ್ನು ತೋರಿಸಿದ್ದಾನೆ. ಶರೀರ, ಶೌರ್ಯ, ಬಲ, ಸೌಂದರ್ಯ, ಯಶಸ್ಸು, ಪ್ರಭಾವ, ಉತ್ಸಾಹ ಮುಂತಾದ ಸಕಲ ಸದ್ಗುಣಗಳು ಆತನಲ್ಲಿ ಅನಂತ ಪರಿಮಾಣದಲ್ಲಿ ಗೋಚರಿಸಿವೆ.ಆದ್ದರಿಂದಲೇ ಆತನು ನರರಲ್ಲಿ ಶ್ರೇಷ್ಠನೆಂದೂ ಭಾವಿಸಿ ನಾಭಿಯು ಆತನಿಗೆ ಋಷಭದೇವನೆಂದು ಹೆಸರಿಟ್ಟಿದ್ದಾನೆ.ಋಷಭದೇವನೆಂದರೆ ಶ್ರೇಷ್ಠನೆಂದೂ,ಮಹಾಪುರುಷನೆಂದು ಅರ್ಥ.ತಮ್ಮ ಕೋರಿಕೆಯಂತೆ ಸರ್ವಶ್ರೇಷ್ಠನಾದ ಪುತ್ರನು ಜನಿಸಿದುದರಿಂದ ನಾಭಿರಾಜ-ಮೇರುದೇವಿಯರು ಅದೆಷ್ಟೋ ಸಂತೋಷಪಟ್ಟಿದ್ದಾರೆ.

ತನ್ನ ಪುತ್ರನಾದ ಋಷಭದೇವನು ಸರ್ವಲೋಕ ಸಮ್ಮತನಾಗಬಲ್ಲನೆಂಬ ಸತ್ಯವರಿತ ನಾಭಿರಾಜನು ವೈದಿಕ ಧರ್ಮಾನುಸಾರ ಪ್ರಜಾಪಾಲನೆ ಮಾಡಲು ಆತನನ್ನು ಇಡೀ ಪ್ರಪಂಚಕ್ಕೇ ಚಕ್ರವರ್ತಿಯನ್ನಾಗಿ ನಿಯಮಿಸಿದ್ದಾನೆ. ರಾಜ್ಯ ಪಾಲನೆಯಲ್ಲಿ ಮಾರ್ಗದರ್ಶನ ಮಾಡಬಲ್ಲ ಬ್ರಾಹ್ಮಣರಿಗೆ ತನ್ನ ಮಗನನ್ನು ಒಪ್ಪಿಸಿ, ನಾಭಿರಾಜ ತನ್ನ ಪತ್ನಿ ಸಮೇತ ಹಿಮಾಲಯದಲ್ಲಿರುವ ಬದರಿಕಾಶ್ರಮಕ್ಕೆ ಹೊರಟು ಹೋಗಿದ್ದಾನೆ. ಅಲ್ಲಿ ಆ ಮಹನೀಯನು ಶ್ರೀಕೃಷ್ಣನ ಪ್ರಧಾನಾಂಶಿಕರಾದ ನರ-ನಾರಾಯಣರನ್ನು ಸೇವಿಸುತ್ತಾ ಸಮಾಧಿ ಮಗ್ನನಾಗಿದ್ದಾನೆ. ಈ ರೀತಿಯಾಗಿ ಕಾಲಕ್ರಮೇಣ ಆತನು ವೈಕುಂಠವನ್ನು ಸೇರಿಕೊಂಡಿದ್ದಾನೆ.


## ಡಯಲ್ ಯುವರ್ ಇ.ಓ.

## ಯಾತ್ರಿಕ ಭಕ್ತರಲ್ಲಿ..... ವಿನಂತಿ

ತಿರುಪತಿ ತಿರುಮಲೆಯಲ್ಲಿ ತಮ್ಮ ಅನುಭವಕ್ಕೆ ಬಂದ ಕುಂದು ಕೊರತೆಗಳ ಬಗ್ಗೆ ಹೆಚ್ಚು - ಕಡಿಮೆಗಳ ಬಗ್ಗೆ-ಸಲಹೆ ಸೂಚನೆಗಳನ್ನು ಕಾರ್ಯನಿರ್ವಹಣಾಧಿಕಾರಿಯವರಿಗೆ ನೇರವಾಗಿ ನೀಡಬಹುದು. ಅದಕ್ಕಾಗಿ **ಪ್ರತಿ ತಿಂಗಳ ಮೊದಲ ಶುಕ್ರವಾರ ಬೆಳಗ್ಗೆ 8-30 ರಿಂದ 9-30 ಗಂಟೆಯವರೆಗೆ** ತಾವು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿಗಳೊಡನೆ ದೂರವಾಣಿಯಲ್ಲಿ ಮಾತನಾಡಬಹುದು.

ದೂರವಾಣಿ ಸಂಖ್ಯೆ -0877-2263261

ಯಾತ್ರಿಕರ ಸೌಕರ್ಯಗಳನ್ನು ಹೆಚ್ಚಿಸಲು

ತಮ್ಮ ಯಾತ್ರೆ ಸುಲಭತರವಾಗಿ ಕೈಗೂಡಲು - ಮಾತನಾಡಿ.

# ಪದಬಂಧ -2

**ಎಡದಿಂದ ಬಲಕ್ಕೆ**

01.ಯಮುನಾ ನದಿ ತೀರದಲ್ಲಿ ವಾಸಿಸಿರುವ ಶ್ರೀ ಕೃಷ್ಣನ ಲೀಲೆಗಳನ್ನು ಹಾಡಲು ಬರುವಂತೆ ಸಖಿಯರಿಗೆ ಆಹ್ವಾನ ತಿರುಪ್ಪಾವೈ 5 ನೇ ಪಾಶುರ 'ಯಮುನೈ' ಯಿಂದಾರಂಭ ...(7)

02.ಶ್ರೀ ಮನ್ನಾರಾಯಣನೇ ಪರತತ್ವವು, ಅವನ ಕೈಂಕರ್ಯ ಪರಮ ಪುರುಷಾರ್ಥ, ಭಗವನ್ನಾಮ ಸಂಕೀರ್ತನೆಯಿಂದ ಅವನ ಕೃಪೆಗೆ ಪಾತ್ರರಾಗೋಣ ಬನ್ನಿ ಎಂದು ಸಖಿಯರಿಗೆ ಆಂಡಾಳ್ ಆಹ್ವಾನ ತಿರುಪ್ಪಾವೈ 1 ನೇ ಪಾಶುರದ 8 ನೇ ಸಾಲು ...(3)

03.ವಾಮನಾವತಾರದಲ್ಲಿ ಲೋಕವನ್ನಳೆದು ಶಕಟಾಸುರ ಮುಂತಾದ ರಾಕ್ಷಸರನ್ನು ಸಂಹರಿಸಿ ಗೋವರ್ಧನ ಗಿರಿಯನ್ನೆತ್ತಿ ಹಿಡಿದ ನಿನಗೆ ಮಂಗಳವಾಗಲಿ ಎಂದು ಗೋಪಿಕಾ ಸ್ತ್ರೀಯರು ಹಾಡುತ್ತಾರೆ. 24 ನೇ ಪಾಶುರ. ...(6)

04.ಈ ವ್ರತಾಚರಣೆಯಿಂದ ಶ್ರೀ ಕೃಷ್ಣನ ಪಾದ ಸ್ಮರಿಸುತ್ತೇವೆ. ತುಪ್ಪ ಪುಷ್ಪ ವರ್ಜ್ಯ ದೀನರಿಗೆ ದಾನ, ಅತಿಥಿ ಸತ್ಕಾರ, ನಮ್ಮ ಧೈಯ,ಉಷಃ ಕಾಲದಲ್ಲಿ ಸ್ನಾನ, ಕೆಟ್ಟ ಮಾತಿಲ್ಲ,ಮಾಡಬಾರದ ಕೆಲಸ ಮಾಡಲ್ಲ, ಇವೆಲ್ಲಾ ಗೋಪಿಯರ ನಿರ್ಧಾರಗಳು 2 ನೇ ಪಾಶುರ 6ನೇ ಸಾಲು 'ಶ' ಯಿಂದ ಆರಂಭ ...(4)

**ಬಲದಿಂದ ಎಡಕ್ಕೆ**

05.ಗೋಪಿಯರು ಭಕ್ತಿಯಿಂದ ಕೃಷ್ಣನನ್ನು ಹಾಡಿ, ಸಂಧಿಸಿ ವಾದ್ಯ ಪಡೆದು ವ್ರತವನ್ನು ಮುಗಿಸಿ ತೃಪ್ತರಾಗುತ್ತಾರೆ. 30 ನೇ ಪಾಶುರ - ತಿರುಪ್ಪಾವೈ ...(5)

06 ವ್ರತವನ್ನಾಚರಿಸಿ ಕೃಷ್ಣನಲ್ಲಿ ಭಕ್ತಿಯಿಟ್ಟರೆ ಅತಿವೃಷ್ಟಿ ಅನಾವೃಷ್ಟಿಯಿಲ್ಲದೆ ಮಳೆಯಾಗಿ ಹಸುಗಳು ಸಮೃದ್ಧ ಹಾಲು ಕೊಡುತ್ತವೆ,ಎಲ್ಲೆಲ್ಲೂ ಸುಖಶಾಂತಿ ನೆಲೆಸುತ್ತದೆ. ...(4) 3 ನೇ ಸಾಲು 'ವ' ನಿಂದಾರಂಭ

07.ನಮ್ಮ ಪ್ರಾರ್ಥನೆಯಿಂದ, ಸನ್ನಡತೆಯಿಂದ ಎಲ್ಲಾ ಕಡೆ ಸಮೃದ್ಧಿ ಕಂಡು ಪಶುಗಳು ತೃಪ್ತಿಗೊಂಡು ಹಾಲನ್ನು ಕೊಡುತ್ತವೆ. 3 ನೇ ಪಾಶುರ ...(3) 7 ನೇ ಸಾಲು 'ವ' ನಿಂದಾರಂಭ

08. ಏನೂ ಅರಿಯದ ಹುಡುಗಿಯೇ ಶಕಟಾಸುರ, ಪೂತನಿ ಮುಂತಾದ ರಾಕ್ಷಸರನ್ನು ಸಂಹರಿಸಿದ ಕೃಷ್ಣನನ್ನು ಕುರಿತು ಹಾಡ ಹೊರಟಿದ್ದೇವೆ. ಎದ್ದು ಬಾ ಎಂದು ಸಖಿಯರ ಒಬ್ಬ ಸಖಿಗೆ ಆಹ್ವಾನ ತಿರುಪ್ಪಾವೈ 6 ನೇ ಪಾಶುರ -'ಪು' ಯಿಂದಾರಂಭ ...(3)

09.ಶ್ರೀ ಕೃಷ್ಣ ಭಗವದ್ಗೀತೆಯಲ್ಲಿ ತಿಳಿಸಿರುವಂತೆ 'ಯಾರು ಅವನಲ್ಲಿ ಶರಣಾಗತಿ ಮಾಡುತ್ತಾರೋ ಅವರು ಸುಲಭವಾಗಿ ಪ್ರಕೃತಿಯ ಮಾಯೆಯನ್ನು ದಾಟಿ ಉಜ್ಜೀವನ ಪಡೆಯಬಲ್ಲರು' ಎಂದು ಅಂಡಾಳ್ ಜನರಲ್ಲಿ ಕೋರಿದ್ದಾಳೆ. ತಿರುಪ್ಪಾವೈ 2 ನೇ ಪಾಶುರದ ಆರಂಭ 'ವೈ' ಯಿಂದಾರಂಭ ...(3)

**ಮೇಲಿಂದ ಕೆಳಕ್ಕೆ**

10.ಎತ್ತರವಾಗಿ ಬೆಳೆದು ಲೋಕಗಳನ್ನಳೆದ ಪರಮಾತ್ಮನನ್ನು ನೆನೆದರೆ ಸಂಪತ್ಸಮೃದ್ಧಿಯುಂಟಾಗುತ್ತದೆ ಎಂಬ ಅಭಿಪ್ರಾಯ ಹೇಳಿ ತನ್ನ ವ್ರತಕ್ಕೆ ಸಖಿಯರನ್ನು ಕರೆಯುತ್ತಾಳೆ. 'ಆಂಡಾಳ್' 'ಉಲಹ' ದಿಂದ ಆರಂಭ 3 ನೇ ಪಾಶುರ ...(5)

11.ಆಂಡಾಳ್ ತಾಯಾರ್ ತಮ್ಮ ನಾಚ್ಚಿಯಾರ್ ತಿರುಮೊಷಿಯಲ್ಲಿ 'ವಾರಣಮಾಯಿರಂ' ನಲ್ಲಿ ಶ್ರೀ ಕೃಷ್ಣನ ಬಗ್ಗೆ ಕನಸು ...(6) ಕಂಡುದಾಗಿ (ಮಧುರ) ತನ್ನ ಸ್ನೇಹಿತೆ ಬಳಿ ಹೇಳಿಕೊಳ್ಳುತ್ತಾಳೆ. ವಾರಣಯಾಯಿರಂ 6 ರಲ್ಲಿ ಮೊದಲ ಪಾಶುರದ 4 ನೇ ಪಂಕ್ತಿ

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | | | | | | | |
| 2 | | | | | 5 | | | |
| 3 | | | | | 6 | 11 | 14 | |
| 4 | | | | 7 | 10 | | | 15 |
| 5 | | 2 | | | | | | |
| 6 | 3 13 | | | | | | | 8 |
| 7 | 4 | | | | | | | 12 |
| 8 | | | | 9 | | | 16 | |

**- ಪಿ.ಜಿ. ಶ್ರೀನಿವಾಸನ್**

**- 49 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.**

12.ವ್ರತಾಚರಣೆಯಲ್ಲಿ ಭಕ್ತಿ ಮಾಡಲು ವಾದ್ಯವನ್ನು ದಯಪಾಲಿಸಲು ಕೃಷ್ಣನಲ್ಲಿ ಪ್ರಾರ್ಥಿಸಿದ್ದಾಳೆ 'ಆಂಡಾಳ್' ತನ್ನ ಸ್ನೇಹಿತರಿಗೂ ...(2) ಭಕ್ತಿಯಿಂದ ಹಾಡಲು ಅನುವಾಗಲು ತಿರುಪ್ಪಾವೈಯ ಮೊದಲ ಪಾಶುರದ 7 ನೇ ಸಾಲು 'ಪ' ದಿಂದಾರಂಭ

**ಕೆಳಗಿನಿಂದ ಮೇಲಕ್ಕೆ**

13.ಉಯ್ಯಕ್ಕೊಂಡಾರ್ ಆಂಡಾಳ್ ತಾಯಾರ್‌ಗೆ (ತಿರುಪ್ಪಾವೈಗೆ) ಶ್ರದ್ಧಾಪೂರ್ವಕ ಅರ್ಪಿಸಿದ ತನಿಯನ್‌ನಲ್ಲಿ ಅವರನ್ನು ಅವರ ...(5) ಕೃತಿಯನ್ನೂ ಕೊಂಡಾಡಿದ್ದಾರೆ 'ಅನ್ನ'ದಿಂದ ಆರಂಭ

14. ಶ್ರೀ ಕೃಷ್ಣನ ನಾನಾ ಚೇಷ್ಟಿತೆಗಳನ್ನು ಹಾಡೋಣವೆಂದು ...(3) ಸಖಿಯರ ಸಂಭಾಷಣೆ -ತಿರುಪ್ಪಾವೈ 15ನೇ ಪಾಶುರ 'ವ' ದಿಂದಾರಂಭ

15) ದೇವಕಿಗೆ ಹುಟ್ಟಿ, ಯಶೋದೆಯಿಂದ ಲಾಲಿಸಲ್ಪಟ್ಟ ಶ್ರೀಕೃಷ್ಣನೇ ಕಂಸನಲ್ಲಿ ದ್ವೇಷದಕಿಚ್ಚೆಬ್ಬಿಸಿದ ಕೃಷ್ಣನೇ, ನಿನ್ನನ್ನು ಹಾಡಿ ...(4) ಕೊಂಡಾಡಲು ಬಂದಿದ್ದೇವೆ. 'ಪರೆ' ಎಂದರೆ ವಾದ್ಯ ಕೊಡು ಎಂದು ಗೋಪಿಕಾಸ್ತ್ರೀಯರು ಕೃಷ್ಣನಲ್ಲಿ ಮೊರೆಯಿಟ್ಟದ್ದಾರೆ, ತಿರುಪ್ಪಾವೈ 25 ನೇ ಪಾಶುರದಲ್ಲಿ 'ತಿರು' ಯಿಂದಾರಂಭ

16) ಬಕಾಸುರನ ಬಾಯಿ ಸೀಳಿದ ಶ್ರೀ ಕೃಷ್ಣನನ್ನು, ರಾವಣನನ್ನು ವದಿಸಿದ ಶ್ರೀ ರಾಮನನ್ನು ನಾವು ಹೊಗಳಿ ಹಾಡುತ್ತಿದ್ದರೆ ನಿದ್ದೆ ಮಾಡುವುದನ್ನು ಸಾಕು ಮಾಡಿ ನಮ್ಮನ್ನು ಸೇರಿ ಧ್ಯಾನಿಸು ಎಂದು ಸಖಿಯರು ಒಬ್ಬ ಸಖಿಯನ್ನು ಕುರಿತು ಆಹ್ವಾನಿಸುತ್ತಿದ್ದಾರೆ. ತಮ್ಮನ್ನು ಸೇರಲು ತಿರುಪ್ಪಾವೈ 13 ನೇ ಪಾಶುರ 'ಶಿ' ಯಿಂದಾರಂಭ ...(2)



# ಶ್ರೀ ರಾಮ ಸಮರ್ಥ

**(ಸದ್ಗುರು ಶ್ರೀ ಬ್ರಹ್ಮಚೈತನ್ಯ ಮಹಾರಾಜರ ಆರಾಧನ ಮಹೋತ್ಸವ ತನ್ನಿಮಿತ್ತ ಸಕಾಲಿಕ ನುಡಿನಮನ ಭಕ್ತಿ ಪಂಥದ ಮಹಾಯೋಗಿಗಳು ಬ್ರಹ್ಮಚೈತನ್ಯ ಮಹಾರಾಜರು)**

**- ಶ್ರೀಮತಿ. ಕೆ.ವಿ. ಪದ್ಮಾವತಿ**

**- 9035618076**

'ಆತ್ಮ ಮತ್ತು ಈಶ್ವರನ ಸಮ್ಮಿಲನದ ಭಗವಂತನು ಭವಕ್ಕೆ ರಾಮನಾಮ ಸಂಕೀರ್ತನೆಯೇ ಸೇತುವೆ. ಪ್ರಾಪಂಚಿಕ ವ್ಯವಹಾರವನ್ನು ತೊರೆದು ರಾಮನಾಮವನ್ನು ತೆಗೆದುಕೊಳ್ಳದ ಹೊರತು ಜೀವನ ಬದುಕಿಗೆ ಆರಾಮವಿಲ್ಲ' ಎನ್ನುವ ಸ್ಪಷ್ಟ ಸಂದೇಶ ನೀಡಿದ ಮಹಾಸಂತರು.

ಬದುಕಿಗೆ ಬೆಳಕು - ಸದ್ಗುರು ಬೋಧೆ
ನಾಮ ಸಾಧನೆಗಾಗಿ ನೀ ಹುಟ್ಟಿ ಬಂದಿರುವೆ।
ರಾಮನಾಮದಲಿ ನೀ ವಾಸ ಮಾಡುತ್ತಿರುವೆ।
ರಾಮನಾಮದ ಕೀರ್ತಿ ಹಾಡುತ್ತಲಿರುವೆ ।
ನಮಸ್ಕಾರ ಶ್ರೀ ಬ್ರಹ್ಮಚೈತನ್ಯ ಗುರುವೇ॥

ಪುಣ್ಯ ಭೂಮಿ ಭಾರತದಲ್ಲಿ ಅನೇಕ ಸಾಧು - ಸಂತರು ಆಗಿ ಹೋಗಿದ್ದಾರೆ. ಭಗವಂತ ಸಂಭೂತರಾದ ಅವರ ಕರ್ತವ್ಯ ನಶಿಸುತ್ತಿರುವ ಧರ್ಮದ ಪುನರುತ್ಥಾನ; ಜನಸಮುದಾಯದ ಮೇಲೆ ಜ್ಞಾನವೃಷ್ಟಿಗರೆದು ಅವರನ್ನು ಪುನೀತರನ್ನಾಗಿಸುವುದು. ಸಂತಮಹಾಂತರೆಲ್ಲ ಬೆಳಕಿನ ಸಂಕೇತ ಬೆಳಕಿದ್ದೆಡೆ ಕತ್ತಲಿಗೆ ಅಸ್ಪದ ಉಂಟೆ? ಹಾಗೆಯೇ ಜ್ಞಾನವಿದ್ದವರ ಬಳಿ ಅಜ್ಞಾನ ಸುಳಿಯುವುದುಂಟೆ? ನಿತ್ಯ ಬದುಕಿನ ಜಂಜಾಟದಲ್ಲಿ ಸೊರಗಿದ ಮನಗಳಿಗೆ ಸಾಂತ್ವನ ನೀಡಿ ಅವರ ಹೃದಯಗಳನ್ನರಳಿಸುವ ಕೆಲಸವನ್ನು ಸಂತರು,ಪರಿವ್ರಾಜಕರು ಮಾಡುತ್ತಾರೆ. ಅವರ ಉದ್ದೇಶ ಮನುಕುಲದ ಉದ್ಧಾರ.

ಹದಿನೇಳನೇ ಶತಮಾನದಲ್ಲಿ ಸನಾತನ ಧರ್ಮೋದ್ಧಾರ ಮಾಡಿದ ಶ್ರೀ ಮಾರುತಿ ಅವತಾರಿ ಶ್ರೀ ಸಮರ್ಥ ರಾಮದಾಸರು ಸಗುಣೋಪಾಸನೆಯನ್ನು ತಮ್ಮ ದಾಸ ಭೋಧದಲ್ಲಿ ಅತ್ಯಂತ ಕಳಕಳಿಯಿಂದ ಸಾರಿಹೇಳಿದ್ದಾರೆ. 19 ನೇ ಶತಮಾನದಲ್ಲಿ ಮತ್ತೆ ಶ್ರೀ ಮಾರುತಿ ಅವತಾರಿಗಳಾದ ಶ್ರೀ ಸದ್ಗುರು ಬ್ರಹ್ಮಚೈತನ್ಯ ಮಹಾರಾಜರು ಸಗುಣೋಪಾಸನೆ, ಅನ್ನದಾನ ಮತ್ತು ಶ್ರೀ ರಾಮ ನಾಮದ ಮಹಿಮೆಯನ್ನು ದೇಶದಾದ್ಯಂತ ಹರಡಿದರು.

### ವಿರಾಟ್ ಚೇತನ - ಸಾರ್ಥಕ ಜೀವನ

ಮಾರುತಿ ಅವತಾರಿಗಳಾದ ಸಮರ್ಥ ರಾಮದಾಸರು ತಮ್ಮ ತಾಯಿಯ ಅವಸಾನ ಕಾಲ ಸಮೀಪಿಸಿದ್ದನ್ನು ಕಂಡು, ನಿನ್ನ ಯಾವತ್ತೂ ಇಚ್ಛೆ ಪೂರ್ಣವಾಯಿತೋ ಎಂದು ಪ್ರಶ್ನಿಸಿದರು, ಆಗ ಆಕೆ'ನೀನು ಗೃಹಸ್ಥನಾಗಿ ಸಂಸಾರ ಮಾಡುವುದನ್ನು ಕಂಡು ಕಣ್ತುಂಬುವ ಆಸೆಯಾಗಿದೆ, ಎಂದರು 'ಮಾಯಿ, ಮುಂದೆ ಮಾನಗಂಗಾ ತೀರದಲ್ಲಿ ಗೋಂದಾವಳಿ ಕ್ಷೇತ್ರದಲ್ಲಿ ಜನ್ಮ ತಾಳುವೆ, ಆಗ ನಾನು ನಿನ್ನ ಆಸೆಯನ್ನು ಈಡೇರಿಸುವೆ' ಎಂದು ವಚನವನ್ನಿತ್ತರು, ಅಂತೇಯೆ ಜನ್ಮ ತಳೆದರು.

ಶ್ರೀ ಬ್ರಹ್ಮಚೈತನ್ಯರ ಪೂರ್ವನಾಮ ಗಣಪತಿ, ಭಕ್ತಿ ಜ್ಞಾನಗಳೆಡೆಗೆ ಎಳೆ ವಯಸ್ಸಿನಿಂದಲೂ ಆಕರ್ಷಣೆ, ಗುರುವಿನ

ಅನುಗ್ರಹದ ನಂತರ ಬ್ರಹ್ಮಚೈತನ್ಯರಾದ ಗಣಪತಿ, ಪರಿವ್ರಾಜಕರಾಗಿ ಶ್ರೀರಾಮನಾಮ ಪ್ರಸಾರ ಕಾರ್ಯದಲ್ಲಿ ಕ್ರಿಯಾಶೀಲರಾದರು. ಮಗನಾಗಿ, ಗಂಡನಾಗಿ, ಬಂಧುವಾಗಿ, ಗುರುವಾಗಿ ಕೊನೆಗೆ ಸದ್ಗುರು ಪಟ್ಟವೇರಿ ಜನಮನದಲ್ಲಿ ನಿಬಿಡವಾದರು.

ಅಪಾರ ಮಹಿಮೆ ತೋರಿ ಬ್ರಹ್ಮಲೀನರಾಗಿ ಒಂದು ಶತಮಾನ ಕಳೆದರೂ ಅವರ ಖ್ಯಾತಿ ವಿಶ್ವವ್ಯಾಪಿಯಾಗಿ ಹರಡಿದೆ. ಅವರ ಜೀವನ ಪವಾಡ ಸದೃಶ್ಯವಾದುದು, ನುಡಿದಂತೆ ನಡೆದ ಮಹಿಮಾನ್ವಿತರು. ಅವರ ಆದರ್ಶಮಯ ಜೀವನ ಸದಾ ಅನುಕರಣೀಯ. ಅವರ ಸಂದೇಶ ಸಕಲ ವೇದಗಳ ಸಾರಸಂಗ್ರಹ, ಅವರ ಭೋಧನೆಗಳು ಕಬ್ಬಿಣದ ಕಡಲೆಗಳಲ್ಲ, ಎಲ್ಲರೂ ಸುಲಭವಾಗಿ ಅರಗಿಸಿಕೊಳ್ಳುವ ಸವಿನುಡಿ ಮುತ್ತುಗಳು. ಅವು ಮಾನವರ ಬಾಳಿಗೆ ಅಮೃತ ನಿಧಿ.

ಶ್ರೀ ರಾಮನಾಮ ಸ್ಮರಣೆ, ಜಪಾನುಷ್ಠಾನ, ಉಪಾಸನಾ ಮಾರ್ಗದಿಂದ ಬದುಕು ಹಸನಾಗುವುದೆಂದು ನಿರೂಪಿಸಿದ ಗುರುವರೇಣ್ಯರು, ಯಾವುದೇ ಕಾರಣಕ್ಕೂ ನಾಮಜಪದಿಂದ ವಂಚಿತರಾಗಬಾರದೆಂದು ಎಚ್ಚರಿಸುತ್ತಾರೆ. ಕಾಷಾಯ ವಸ್ತ್ರಧಾರಿಗಳಾಗಿ ಸನ್ಯಾಸಿಯಂತೆ ಇದ್ದವರಲ್ಲ. ಅವರ ದೃಷ್ಠಿಯಲ್ಲಿ ಸರ್ವರೂ ಸಮಾನರು, ಜಾತಿ ಮತಭೇದವೆಣಿಸದೇ ಸಕಲ ಜೀವಾತ್ಮರಿಗೂ ಒಳಿತನ್ನೇ ಬಯಸಿದ ದಿವ್ಯ ಪುರುಷರು.

ಶ್ರೀ ಮಹಾರಾಜರ ಜೀವನವೇ ಒಂದು ದಿವ್ಯಾನುಭವ ಬೀರುವಂಥ ಬೆಳಕು. ಅವರು ಮಹಾರಾಷ್ಟ್ರದಲ್ಲಿ ಜನಿಸಿದರೂ ಕೂಡ ಅವರ ಕಾರ್ಯಕ್ಷೇತ್ರ ಅಲ್ಲಿಗೆ ಸೀಮಿತವಾಗಲಿಲ್ಲ, ಅದು ದೇಶಾದ್ಯಂತ ವಿಸ್ತರಣೆಗೊಂಡು ಶ್ರೀ ಬ್ರಹ್ಮಚೈತನ್ಯ ಪಂಥ ಅಸ್ತಿತ್ವಕ್ಕೆ ಬಂತು, ಅವರ ಶಿಷ್ಯರಲ್ಲಿ ಬೆಳದಡಿಯ ಬ್ರಹ್ಮಾನಂದ ಸುಪ್ರಸಿದ್ಧರು.

## ಗೋಂದಾವಲೆಯ ನಾಮ ವ್ಯಾಪಾರಿ

ನಾಮದ ಮಹಿಮೆ ಅದ್ಭುತ, ಪುರಂದರದಾಸರು 'ನಿನ್ನ ನಾಮದ ಬಲವೊಂದಿದ್ದರೆ ಸಾಕು,' ಎಂದು ನುಡಿ ದಿದ್ದಾರೆ. ಭಗವಂತನ ನಾಮ, ಶಾಂತಿಯ ಧಾಮ, ಸೌಖ್ಯದಾ ರಾಮ! ಈ ನಾಮದ ಸಿದ್ಧಿಗೆ ಕಠಿಣವ್ರತಾಚರಣೆಗಳ ಅಗತ್ಯ ವಿಲ್ಲ; ನೇಮನಿಷ್ಠೆಗಳ ಆಚರಣೆಯಿಲ್ಲ; ದೃಢನಂಬಿಕೆ, ಅಚಲ ವಿಶ್ವಾಸ, ನಾಮೋಚ್ಚಾರಣೆಯಲ್ಲಿ ತನ್ಮಯತೆ ಅನುಭವ, ಪವಿತ್ರ ಭಾವನೆ ಇರಬೇಕು ಆಗ ರಾಮ ಚೈತನ್ಯದರಿವಾಗುವುದು ಸಾಧ್ಯ. ಶ್ರೀ ರಾಮನಾಮದ ಬಲವನ್ನು ಚೆನ್ನಾಗಿ ಮನ ಗಂಡನು ಭಕ್ತ ಹನುಮ. ದಾನಗಳಲ್ಲಿ ಅನ್ನದಾನ, ಉಪಾಸನೆಗಳಲ್ಲಿ ಸಗುಣೋಪಾಸನೆ, ಸಾಧನೆಗಳಲ್ಲಿ ಭಗವಂತ ನಾಮಸ್ಮರಣೆ ಶ್ರೇಷ್ಟ. ಶುದ್ಧ ಕರ್ಮಾಚರಣೆ, ಶುದ್ಧ ಅಂತಃಕರಣ ನಾಮಸ್ಮರಣೆ- ಇವುಗಳಿಂದ ಭಗವಂತನ ಪ್ರಾಪ್ತಿ ನಿಶ್ಚಿತವೆಂದಿದೆ ಸದ್ಗುರು ವಾಣಿ.

ಅವರು ಬಹಳಷ್ಟು ಮಹತ್ವ ಕೊಡುತ್ತಿದ್ದ ಇನ್ನೊಂದು ಸಂಗತಿಯೆಂದರೆ 'ಅನ್ನದಾನ' ಹಸಿದವರಿಗೆ ಅನ್ನಹಾಕುವುದು ದೊಡ್ಡ ಪುಣ್ಯವಾಗಿರುತ್ತದೆ. ಕೇವಲ ನಾವು ತಿನ್ನುವುದರ ಫಲ ದೇಹ-ಬುದ್ಧಿಯ ಆನಂದವಾಗಿದ್ದರೆ, ಎರಡನೆಯವರಿಗೆ ತಿನ್ನಲು ಕೊಡುವುದು ಆತ್ಮ-ಬುದ್ಧಿಯ ಅಥವಾ ಸಂತರ ಆನಂದವಾಗಿರುತ್ತದೆಂಬುದು ಅವರ ಸಿದ್ಧಾಂತವಾಗಿತ್ತು.

## ಗೋಂದಾವಲೆಯ ನಾಮದ ವ್ಯಾಪಾರಿ

ಮೋಕ್ಷವನ್ನು ಸಾಧಿಸಲು ಪ್ರವೃತ್ತಿ ಹಾಗೂ ನಿವೃತ್ತಿ ಎಂಬ ಎರಡು ಹೆದ್ದಾರಿಗಳು ಅನಾದಿಕಾಲದಿಂದ ಇವೆ. ಶ್ರೀ ಬ್ರಹ್ಮಚೈತನ್ಯ ಮಹಾರಾಜರದು ಪ್ರವೃತ್ತಿಯುಕ್ತ ಸಂಸಾರದ ಜೊತೆಗೆ, ನಿವೃತ್ತಿಪಥದ ಮುಕ್ತಿಮಾರ್ಗ। ಮನುಷ್ಯ ಸಂಸಾರಿಯಾಗಿದ್ದರೂ ಕೆಸರಿನಲ್ಲಿಯ ಕಮಲದಂತೆ, ಸಂಸಾರವನ್ನು ತಾಗಿಸಿ ಕೊಳ್ಳದೆಯೇ, ಉಪನಿಷತ್ ಪ್ರತಿಪಾದ್ಯವಾದ ಮುಕ್ತಿಯನ್ನು ಪಡೆದು ಕೊಳ್ಳಬಹುದು, ಎಂದು ಲೋಕಶಿಕ್ಷಣಕ್ಕಾಗಿ ಸಾಧಿಸಿ ತೋರಿಸಿದವರು ನಮ್ಮ ಶ್ರೀ ಬ್ರಹ್ಮಚೈತನ್ಯ ಮಹಾರಾಜರು!

ಶ್ರೀ ಬ್ರಹ್ಮಚೈತನ್ಯ ಮಹಾರಾಜರನ್ನು ಮನದಲ್ಲಿ ನೆನೆದರೆ, ಮನಸ್ಸಿಗೆ ಶ್ರೀರಾಮನಾಮದ ಉಪದೇಶ; ದೃಷ್ಟಿಯಲ್ಲಿ ನೆನೆದರೆ, ಸರ್ವಕಾಲದಲ್ಲಿಯೂ ಜಪಮಾಲೆಯೊಂದಿಗೆ ಜಪ ಮಾಡುವ ಸಂದೇಶ; ಅವರ ಪ್ರವಚನಗಳನ್ನು ಅವಲೋಕಿಸಿದರೆ, ಎಂಥ ಸಂಸಾರಿಯೂ ಕೂಡ ರಾಮನಾಮದ ಬಲದಿಂದ ಒಬ್ಬ ಶ್ರೇಷ್ಠ ಸಾಧಕನಾಗಬಹುದೆಂಬ ಖಚಿತ ಆದೇಶ. ಶ್ರೀ ಬ್ರಹ್ಮಚೈತನ್ಯ ಮಹಾರಾಜರು, ಕೇವಲ ಶುದ್ಧ ಅಂತಃಕರಣ ಹಾಗೂ ದೃಢಭಕ್ತಿಯುಳ್ಳ ರಾಮನಾಮದ ಉಪಾಸನೆಯಿಂದ, ಪ್ರತಿಯೊಬ್ಬ ಮನುಷ್ಯನು ಆತ್ಮಜ್ಞಾನಿಯಾಗಲು ಸಾಧ್ಯ ಎಂದು ಲೋಕಕ್ಕೆ ಪ್ರಸರಿಸಿದ ಧೀಮಂತ ಶ್ರೀರಾಮನಾಮದ ವ್ಯಾಪಾರಿ. ಜೀವನದ ಯಾವುದೇ ಪರಿಸ್ಥಿತಿಯಲ್ಲಿ, ಭಗವಂತನ ಸ್ಮರಣೆ, ಭಗವದ್ ವಾಕ್ಯ ಪರಿಪಾಲನೆ, ಸದ್ಗುರುವಿನ ಸೇವೆ, ತಾಯಿಯ ಸೇವೆ ಹೇಗೆ ಮಾಡಬಹುದೆಂದು, ತಮ್ಮ ಜೀವನದ ಮೂಲಕ ಮಾಡಿತೋರಿದ ಶ್ರೇಷ್ಠ ಜ್ಞಾನಿಸಂತ.



ಮಹಾರಾಜರ ಮುಖದಿಂದ ಹೊರಟ ಮಾತುಗಳೇ ಸಾಹಿತ್ಯ. ಅವರ ಮಾತುಗಳಲ್ಲಿ ಒಂದು ವಿಧವಾದ ಮಾಂತ್ರಿಕ ಶಕ್ತಿ ಇತ್ತು, ಅಮೃತರಸ ಇರುತ್ತಿತ್ತು, ಜೀವನದ ನಿಜವಾದ ಅನುಭವ ತುಂಬಿರುತಿತ್ತು. ಶಬ್ದಗಳು ಸಾಮಾನ್ಯವಾಗಿದ್ದರೂ ಯಾರನ್ನು ಕುರಿತು ಆಡಿದ್ದರೋ ಅವರ ಅಂತಃಕರಣದಲ್ಲಿ ಅವು ಅಚಲವಾಗಿ ನಾಟುತ್ತಿದ್ದವು. ಆದ್ದರಿಂದಲೇ ಮಹಾರಾಜರು ಮರೆಯಾಗಿ 100ಕ್ಕೂ ಅಧಿಕ ವರ್ಷಗಳು ಕಳೆದಿದ್ದರೂ ಅವರ ನಡೆ - ನುಡಿ ಇಂದಿಗೂ ಅನುಕರಣೀಯ.

ಭಕ್ತಿ ಯೋಗಗಳಲ್ಲೊಂದು ಭಗವದ್ಗೀತೆ ಮೂರು ಬಗೆಯ ಯೋಗಗಳನ್ನು ವಿಶೇಷವಾಗಿ ಉಲ್ಲೇಖಿಸುತ್ತದೆ. ಅವೆಂದರೆ ಕರ್ಮಯೋಗ,ಜ್ಞಾನಯೋಗ ಮತ್ತು ಭಕ್ತಿ ಯೋಗ.ಪುರಂದರದಾಸರು ಹೇಳುವಂತೆ ಕಲಿಯುಗದಲ್ಲಿ ಭಕ್ತಿ ಮಾರ್ಗಕ್ಕೆ ಮಿಗಿಲಾದುದು ಮತ್ತೊಂದಿಲ್ಲ. ಭಕ್ತಿ ಎನ್ನುವುದು ಅಂತರಂಗದ ಸಾಧನೆಯೇ ಹೊರತು ಆಡಂಬರದ ಅಂಬರವಲ್ಲ ಎನ್ನುತ್ತಾರೆ ಗೋಂದಾವಲಿಯ ಬ್ರಹ್ಮಚೈತನ್ಯ ಮಹಾರಾಜರು. ಬ್ರಹ್ಮ ಚೈತನ್ಯ ಮಹಾರಾಜರು ರಾಮನಾಮದ ಮಹತ್ತನ್ನು ಸಾರಿದರು. ರಾಮ ನಾಮವನ್ನೇ ಹಿಡಿದು ಸಾಧಿಸಿದರು.ರಾಮನಾಮಾಮೃತವನ್ನೆ ಜನರಿಗೆ ಬೋಧಿಸಿದರು, ಉಣ ಬಡಿಸಿದರು.

### ರಾಮನಲ್ಲಿರಲಿ ಭಕ್ತಿ

ರಾಮನನ್ನು ಭಜಿಸಲು, ಆರಾಧಿಸಲು ಸನ್ಯಾಸವನ್ನೇ ಸ್ವೀಕರಿಸಬೇಕೆಂದಿಲ್ಲ. ಗೃಹಸ್ಥನಾಗಿದ್ದಕೊಂಡೂ ಸಾಧನೆಯನ್ನು ಮಾಡಬಹುದು. ನಿಂತಾಗ ರಾಮ, ಕುಳಿತಾಗ ರಾಮ ಎನ್ನುವಂತೆ ಸದಾಕಾಲ ಮನಸ್ಸನ್ನು ರಾಮನಲ್ಲಿ ನಿಲ್ಲಿಸುವುದರಿಂದ ಭವ ಬಂಧನಗಳಿಂದ ಪಾರಾಗಬಹುದು ಎಂದವರು ಬೋಧಿಸಿದರು. ರಾಮನಲ್ಲಿ ಪರಿಪೂರ್ಣ ಭಕ್ತಿಯನ್ನು ಮಾಡಿ. ಆತನಲ್ಲಿ ಸಂಪೂರ್ಣ ವಿಶ್ವಾಸವನ್ನಿಡಿ. ಹಾಗೆ ಮಾಡುವ ಮೂಲಕ ಮನಸ್ಸು ಪ್ರಶಾಂತವಾಗುತ್ತದೆ. ವ್ಯಸನಗಳಿಂದ ಮುಕ್ತವಾಗುತ್ತದೆ ಎಂದರು.

### ರಾಮನೇ ಕಾರಣ

ಬ್ರಹ್ಮಚೈತನ್ಯ ಮಹಾರಾಜರು ಸಾಮಾನ್ಯರಿಗೂ ರಾಮ ತಾರಕ ಮಂತ್ರವನ್ನು ಉಪದೇಶ ಮಾಡಿದರು. ರಾಮ ತಾರಕ ಮಂತ್ರದಲ್ಲಿ ಹದಿಮೂರು ಬೀಜಾಕ್ಷರಗಳಿವೆ. ಪ್ರತಿಯೊಂದು ಬೀಜಾಕ್ಷರದಿಂದ ಶುರುವಾಗುವಂತೆ 13 ಪ್ರತ್ಯೇಕ ಅಭಂಗಗಳನ್ನು (ಶ್ರೀರಾಮಮ್ಹಣಾ ಮುಖೀ ರಾಮಮ್ಹಣಾ ಮುಖೀ ತೇಣೇ ಸರ್ವ ಸುಖೀ ಹೋಶೀಲತೂ) ಅವರು ರಚಿಸಿದರು. ರಾಮ ತಾರಕ ಮಂತ್ರದ ಮಹಿಮೆಯನ್ನು ಅವರು ಈ ಅಭಂಗಗಳಲ್ಲಿ ಉಲ್ಲೇಖಿಸುತ್ತಾರೆ.ಸ್ವತಃರಾಮನಿಂದ ಸೀತೆಗೆ ಕೊಡಲ್ಪಟ್ಟ ದಿವ್ಯ ಮಂತ್ರವಿದು ಎನ್ನುತ್ತಾರೆ. ಮಹಾ ರಾಜರು ತನ್ನ ಅನುಯಾಯಿಗಳಿಗೆ ರಾಮನು ಎಲ್ಲೆಲ್ಲೂ ಇದ್ದಾನೆ. ಜಗದ ಆಗುಹೋಗುಗಳೆಲ್ಲವೂ ರಾಮನ ಕಾರಣವೇ ಸಂಭವಿಸುತ್ತಿವೆ ಎಂದು ವಿವರಿಸುತ್ತಾರೆ. ನಾಮಸ್ಮರಣೆಯ ಮಹತ್ವವನ್ನು ಮಹಾರಾಜರು ಸುಲಭ ನುಡಿಗಳಲ್ಲಿ ಹೇಳು ತ್ತಾರೆ. ವದನದಿ ಇರಬೇಕು ನೇಮ! ಮನದಲ್ಲಿ ನೆಲೆಸಲಿ ಸದಾ ರಾಮನಾಮ।। ಹೀಗೆ ನಾಮ ಸ್ಮರಣೆಯ ಮಹತ್ವವನ್ನು ಸಾರಿ ಹೇಳುವ ಅವರು ನಮ್ಮ ಉಸಿರು ಇರುವ ತನಕ ಅಥವಾ ನಮ್ಮ ಸ್ವಂತದ ಎಚ್ಚರ ಇರುವವರೆಗೆ ನಾಮಸ್ಮರಣೆ ಸತತ ನಡೆಯಬೇಕು. ನಾಮವಿಲ್ಲದೇ ಬದುಕುವುದು ಸಾಧ್ಯವಿಲ್ಲ ಎನ್ನುವಷ್ಟರ ಮಟ್ಟಿಗೆ ತನ್ಮಯ ರಾಗಬೇಕು ಎಂದು ಕಿವಿನುಡಿ ಹೇಳುತ್ತಾರೆ.

### ಭಕ್ತಿ ಸಿದ್ಧಾಂತದ ಪ್ರತಿಪಾದಕ

‘ಭಗವಂತನ ನಾಮಕ್ಕೆ ನಿಜವಾದ ಮಹತ್ವವಿದೆ. ಅದನ್ನು ಯಾರು ಬೇಕಾದರೂ ಹೇಳಲಿ. ಅದರಿಂದಾಗುವ ಕಾರ್ಯ ಮಾತ್ರ ಬಹಳ ವಿಶಾಲವಾಗಿರುತ್ತದೆ. ಯಾವ ಜನ್ಮದ ಸುಕೃತವೋ ಏನೋ ನಾವಿಲ್ಲಿ ಜನ್ಮ ತಳೆದಿದ್ದೇವೆ. ಆದರೆ ನಮ್ಮ ಜೀವನ ಸಮಯವು ಬಹಳ ಕಡಿಮೆಯಿದೆ. ಈ ಅವಧಿಯನ್ನು ಎಷ್ಟರಮಟ್ಟಿಗೆ ಸದುಪಯೋಗ ಪಡಿಸಿಕೊಳ್ಳುತ್ತೇವೆ ಎಂಬುದಷ್ಟೇ ಮುಖ್ಯ.ಹಾಗಾಗಿ ನಾಮವನ್ನು ತೆಗೆದುಕೊಳ್ಳಬೇಕು.ಇರುವ ಅವಧಿಯಲ್ಲೇ ಕೃತಕೃತ್ಯತೆಯನ್ನು ಕಾಣಬೇಕು.ವಸ್ತುಸ್ಥಿತಿ ಹೀಗಿರುವಾಗ ನಾವು ನಮ್ಮ ಪ್ರಸಿದ್ಧಿಯ ಅಪೇಕ್ಷೆ ಮಾಡುವುದಾಗಲೀ ಮೂರ್ಖತನವೇ ಆಗುತ್ತದೆ’ ಎನ್ನುವುದು ಬ್ರಹ್ಮ ಚೈತನ್ಯರ ಸಂದೇಶ.

ಬ್ರಹ್ಮಚೈತನ್ಯರು ಶ್ರೀರಾಮ ಭಕ್ತಿಯನ್ನು ಪಸರಿಸಿದರು. ಮೊದಲು ಎನ್ನುತ್ತಿದ್ದರು. ಹೀಗೆ ಹೇಳುವ ಮೂಲಕ ಅವರು ‘ಪರಮಾರ್ಥವು ಪ್ರಪಂಚದೊಂದಿಗೆ ಒಂದಾಗಬೇಕು. ಯಾವ ಪ್ರಪಂಚದಲ್ಲಿ ರಾಮನಿಲ್ಲವೋ, ಆ ಪ್ರಪಂಚದಲ್ಲಿ ಆರಾಮವಿಲ್ಲ” ಎಂದು ಅಭಿಪ್ರಾಯಿಸುತ್ತಿದ್ದರು.

### ಬ್ರಹ್ಮಚೈತನ್ಯರ ಸಂದೇಶಗಳು

ಭಗವನ್ನಾಮದಲ್ಲಿ ಆನಂದದ ಹೊರತಾಗಿ ಮತ್ತೇನು ಇಲ್ಲ. ಸಾಮಾನ್ಯ ಶಬ್ದಗಳು ಕೂಡಾ ಮನುಷ್ಯನಿಗೆ ದೊಡ್ಡ ಆಧಾರವೆನಿಸಿಸುವುದಾದರೆ ಭಗವಂತನ ನಾಮದ ಆಧಾರ ಎಷ್ಟಿರಬಹುದು?

ನೀರು ಶರೀರದ ಜೀವನವಿದ್ದಂತೆ , ನಾಮವು ಮನಸ್ಸಿನ ಜೀವನವಾಗಿರುತ್ತದೆ.ನಾಮಸ್ಮರಣೆ ಮಾಡುವ ಬುದ್ಧಿ ಆಯಿತೆಂದರೆ ನಮ್ಮ ಕೆಲಸವಾದಂತೆ.

ನಾಮ ತೆಗೆದುಕೊಳ್ಳುವುದಕ್ಕೆ ನಮ್ಮದೇ ಅಡೆತಡೆ ಇರುತ್ತದೆ.ಅದನ್ನು ದೂರ ಮಾಡುವುದರಿಂದ ನಾಮದ ಅನುಭವ ಬರದೇ ಇರಲಾರದು.

ಕೇವಲ ದೇಹದಿಂದ ತೀರ್ಥಸ್ನಾನ, ಪೂಜಾಪಾಠ ಮಾಡಿದರೆ ಪರಮಾರ್ಥ ಆಗುವುದಿಲ್ಲ.ನಮ್ಮ ವೃತ್ತಿಗಳು ಭಗವಂತನಲ್ಲಿ ಅಂಟಿಕೊಳ್ಳಬೇಕು.

ಪ್ರಪಂಚದ ಪ್ರೇಮವನ್ನು ಭಗವಂತನ ಕಡೆಗೆ ತಿರುಗಿಸಿದರೆ ಭಕ್ತಿ ಮಾಡಲು ಬರುತ್ತದೆ.

ಸಮರ್ಥ ಸದ್ಗುರು ಶ್ರೀ ಬ್ರಹ್ಮಚೈತನ್ಯ ಮಹಾರಾಜ ಗೋಂದಾವಲೇರ್ ರವರ 106 ನೇ ವರ್ಷದ ಆರಾಧನಾ ಮಹೋತ್ಸವದ ಅಂಗವಾಗಿ ಬೆಂಗಳೂರು ನಗರದ ಬನಶಂಕರಿ 1 ನೇ ಹಂತದ ಶ್ರೀ ಬ್ರಹ್ಮ ಚೈತನ್ಯ ಮಂದಿರದಲ್ಲಿ ಕಾಕಡಾ ರತಿ,ಅಖಂಡ ಸಾಮೂಹಿಕ ಜಪಾನುಷ್ಠಾನ ಮಂಗಳ, ಮಹಾ ರಾಜರ ಪಾದುಕೆಗಳಿಗೆ ಪಂಚಾಮೃತ ಪರಸ್ಪರ ರುದ್ರಾಭಿಷೇಕ, ಪೂಜೆ, ರಾಜಬೀದಿ ಉತ್ಸವ, ಮಾತೃಮಿಲನ ಮಂಡಲಿಯ ವರಿಂದ ಭಜನೆ, ಮಹಾಪ್ರಸಾದ ವಿನಿಯೋಗ ಏರ್ಪಡಿಸಿ ಲಾಗಿದೆ.

# ಕೃಷ್ಣಂ ವಂದೇ ಜಗದ್ಗುರುಂ



- ಶ್ರೀಮತಿ. ಎ. ಗೀತವೀರರಾಘವನ್

080 - 26722817

ಶ್ರೀ ಕೃಷ್ಣನು ಶುಭ ರೋಹಿಣೀ ನಕ್ಷತ್ರದಲ್ಲಿ ಅಷ್ಟಮಿಯ ಶುಭ ದಿವಸ ಈ ಲೋಕದಲ್ಲಿ ಅವತರಿಸಿದನು. ಸ್ವಾಮಿ ಜನಿಸಿದ್ದು ಒಂದು ಕಾರಾಗೃಹದಲ್ಲಿ. ದುಃಖದಲ್ಲಿದ್ದ ತಂದೆ ತಾಯಿಯರಿಗೆ ತನ್ನ ದಿವ್ಯಾದ್ಭುತ ರೂಪವನ್ನು ತೋರಿದನು. ವಸುದೇವನು ಶ್ರೀ ಕೃಷ್ಣನನ್ನು ಪರಿಪರಿಯಾಗಿ ಸ್ತೋತ್ರ ಮಾಡಿದನು. ತಕ್ಷಣ ಸ್ವಾಮಿ ತನ್ನ ಮಾಯಾಜಾಲದಲ್ಲಿ ಅವರನ್ನು ಸಿಲುಕಿಸಿ ಅವರು ಕಂಸನ ಭಯದಿಂದ ಸ್ವಾಮಿಯನ್ನು ಆ ರೂಪವನ್ನು ಮರೆಸಿಕೊಳ್ಳುವಂತೆ ಪ್ರಾರ್ಥಿಸಿದರು. ಅವನು ಸಾಧಾರಣ ಶಿಶುವಾಗಿ ತಂದೆಗೆ ತನ್ನನ್ನು ಗೋಕುಲದಲ್ಲಿ ನಂದಗೋಪ ಯಶೋದೆಯರ ಬಳಿ ಬಿಡುವಂತೆ ತಿಳಿಸಿದನು.

ಗೋಕುಲದಲ್ಲಿ ಶ್ರೀಕೃಷ್ಣನ ಜನನವನ್ನು ಅತ್ಯಂತ ಸಂಭ್ರಮ ವೈಭವಗಳಿಂದ ಕೊಂಡಾಡಿದರು. ಅವನು ಅಂದಿನಿಂದ ಯಶೋದ ಮತ್ತು ನಂದ ಗೋಪರ ಮುದ್ದಿನ ಕಂದನಾಗಿ ಬೆಳೆದನು. ಯಶೋದೆಗೆ ತನ್ನ ಕಂದನ ರೂಪವನ್ನು ಎಷ್ಟು ವರ್ಣಿಸಿದರೂ ಸಾಲದು. ಆನಂದಸಾಗರದಲ್ಲಿ ಮುಳುಗಿದಳು.

ಇತ್ತ ಕಂಸನಿಗೆ ತನ್ನ ಹಂತಕನಾದ ದೇವಕೀ ಕಂದ ಗೋಕುಲದಲ್ಲಿ ಬೆಳೆಯುತ್ತಿರುವುದು ಅಶರೀರ ವಾಣಿಯಿಂದ ತಿಳಿದು ಹೋಯಿತು. ಕೃಷ್ಣನನ್ನು ಸಂಹರಿಸಿ ಬಿಡಬೇಕೆಂದು ಕಂಸನು ಪ್ರಯತ್ನ ನಡೆಸಲು ಪ್ರಾರಂಭಿಸಿದನು. ರಾಕ್ಷಸಿ ಪೂತನಾ ಯಶೋದೆಯ ರೂಪದಲ್ಲಿಯೇ ಬಂದಳು. ಸ್ವಾಮಿಗೆ ತನ್ನ ವಿಷ ಮಿಶ್ರಿತ ಹಾಲು ಕುಡಿಸಲು ಬಂದಳು. ಸ್ವಾಮಿ ನಸು ನಗು ವಿನೊಡನೆ ಅವಳ ಹಾಲಿನೊಡನೆ ಅವಳ ಪ್ರಾಣವನ್ನು ಹೀರಿದನು. ಶಕಟಾಸುರನಾದರೋ ಒಂದು ಗಾಡಿಯಂತೆ ಬಂದನು. ಸ್ವಾಮಿ ತನ್ನ ಪುಟ್ಟ ಮೃದು ಪಾದದಿಂದ ಒದ್ದಾಗ ಅವನು ಪುಡಿಪುಡಿಯಾಗಿ ಗಾಳಿಯಲ್ಲಿ ತೂರಿ ಹೋದನು. ಅನೇಕ ಅಸುರರ ಮರ್ದನ ಮಾಡಿ ಸಾಧುಗಳನ್ನು ಸಂರಕ್ಷಿಸಿದನು. ಹಸು ಕರುಗಳನ್ನು ಬಹಳ ಪ್ರೀತಿಯಿಂದ ಕಾಡಿನಲ್ಲಿ ಮೇಯಿಸಿದನು. ಗೋಪಾಲಕರು ಗೋಪಿಯರೊಡನೆ ಸಂತಸದಿಂದ ಮೆರೆದನು. ತನ್ನ ಅದ್ಭುತವಾದ ಕೊಳಲು ಗಾನದಿಂದ ಪಶು, ಪಕ್ಷಿ ಮಾನವರನ್ನೆಲ್ಲಾ ಸ್ತಂಭೀಭೂತರನ್ನಾಗಿಸಿದನು.

ಯಮುನಾ ನದಿಯನ್ನು ಸೇರಿದ್ದ ಕಾಳೀಯನೆಂಬ ಸರ್ಪ ತನ್ನ ವಿಷದಿಂದ ಆ ನದಿಯ ನೀರು ಕುಡಿದ ಗೋಪಾಲಕರು, ಗೋವುಗಳು, ಪಕ್ಷಿಗಳನ್ನೆಲ್ಲಾ ಸಾಯುವಂತೆ ಮಾಡುತ್ತಿತ್ತು. ಅವರನ್ನೆಲ್ಲಾ ರಕ್ಷಿಸಲು ಸ್ವಾಮಿ ನೀರಿಗೆ ನೆಗೆದು ಆ ಕಾಳೀಯನ ಅನೇಕ ಫಣಿಗಳ ಮೇಲೆ ಕುಣಿದು ನಾಟ್ಯವಾಡಿ ಅದು ರಕ್ತಸಿಕ್ತವಾಗುವಂತೆ ಮಾಡಿದನು. ಅದರ ಪತ್ನಿ ಕೃಷ್ಣನಲ್ಲಿ ಶರಣಾಗತಿ ಮಾಡಲು ಕರುಣಾಸಾಗರನಾದ ಸ್ವಾಮಿ ಕಾಳಿಯನನ್ನು ಕ್ಷಮಿಸಿ ಅಲ್ಲಿಂದ







ಎಲ್ಲಾದರೂ ದೂರ ಹೋಗಿ ಬದುಕಲು
ಕಳಿಸಿದನು. ಅವನು ಕಾಳೀಯನ ಮೇಲೆ
ಮಾಡಿದ ನರ್ತನವನ್ನು ಅನುಕರಿಸಲು ಅಪ್ಸರೆ
ಯರೆಲ್ಲಾ ಪ್ರಯತ್ನಿಸುತ್ತಿದ್ದರು. ಅಷ್ಟಲ್ಲದೆ ಕುವ
ಲಯಾ ಪೀಡ, ಕಂಸ ಚಾಣೂರ ಮುಂತಾ
ದವರನ್ನು ಮರ್ದಿಸಿ ಶಾಂತಿ ಸ್ಥಾಪಿಸಿದನು.

ಆದರೆ ಕೃಷ್ಣಾವತಾರದಲ್ಲಿ ಎಲ್ಲರ
ಮನದಲ್ಲೂ ಶಾಶ್ವತವಾಗಿ ನಿಂತು ಅವರು
ಆನಂದ ಸಾಗರದಲ್ಲಿ ಮುಳುಗುವಂತೆ ಮಾಡು
ವುದು ಸಾರ್ವಭೌಮ ಪರಬ್ರಹ್ಮನಾದ ಗೋಪಾ
ಲನು ಗೋಪಿಯರ ಮನೆಯಲ್ಲಿ ಶಿಶುವಾಗಿ ತನ್ನ
ಪುಟ್ಟ ಕೈಗಳಿಂದ ಬೆಣ್ಣೆ ಕದ್ದು ನಗುತ್ತಾ ಅದನ್ನು
ಮೆಲ್ಲುತ್ತಿದ್ದುದು, ಗೋಪಿಯರನ್ನು ಗೋಳಾಡಿ
ಸುತ್ತಿದ್ದುದು "ಬೆಣ್ಣೆ ಕದ್ದ ಮುದ್ದು ಕೃಷ್ಣ"
ನಾಗಿದ್ದುದು,ಇದಕ್ಕೆ ತದ್ವಿರುದ್ದವಾಗಿ ಇನ್ನೊಂದು
ಕಾರ್ಯ ಸಾಧಿಸಿದುದು ಜಗತ್ತಿಗೆಲ್ಲಾ ಗುರು
ವಾಗಿ "ಗೀತೋಪದೇಶ" ಮಾಡಿ ಲೋಕದ
ಅಂಧಕಾರವನ್ನೆಲ್ಲಾ ಹೊಡೆ ದೋಡಿಸಿ "ಗೀತಾ
ಚಾರ್ಯ" ನಾದುದು.

"ಗೀತಾವತಾರ" ವಾದುದು ಯುದ್ಧ
ರಂಗದಲ್ಲಿ. ಧರ್ಮ, ಅರ್ಥ, ಕಾಮ, ಮೋಕ್ಷ
ಗಳನ್ನೆಲ್ಲಾ ಅನುಗ್ರಹಿಸುವ ಪರಬ್ರಹ್ಮ ಭೂತ
ನಾದ ಶ್ರೀಮನ್ನಾರಾಯಣ ಈ ಲೋಕದಲ್ಲಿ
ವಸುದೇವ ಸುತನಾಗಿ ಅವತರಿಸಿದನು.
ಪಾಂಡವರಿಗೂ ಕೌರವರಿಗೂ ಯುದ್ಧ
ಆರಂಭವಾದಾಗ ಪುರುಷೋತ್ತಮನೂ,
ಸರ್ವೇಶ್ವರನೂ ಆದ ಶ್ರೀ ಕೃಷ್ಣನು ತಾನೇ
ಪಾರ್ಥನಿಗೆ ಸಾರಥಿಯಾಗಿ ಲೋಕದ
ಸಮಸ್ತರ ಕಣ್ಣಿಗೂ ಕಾಣಿಸಿಕೊಂಡನು.
ಯುದ್ಧ ರಂಗದಲ್ಲಿ ಅರ್ಜುನನು ಸ್ವಾಮಿಯನ್ನು
ರಥವನ್ನು ಎರಡು ಸೇನೆಗಳ ಮಧ್ಯದಲ್ಲಿ
ನಿಲ್ಲಿಸಲು ಹೇಳಿದನು. ಶ್ರೀ ಕೃಷ್ಣನು ನಸು
ನಗುವಿನೊಡನೆ ಅವನು ಹೇಳಿದಂತೆಯೇ
ಮಾಡಿದನು, ಮತ್ತು ತನ್ನ ಮಾಯಾಜಾಲವನ್ನು
ಬೀಸಿದನು. ಅರ್ಜುನನಿಗೆ ಎಲ್ಲೆಲ್ಲಿಯೂ ತನ್ನ
ಬಂಧು ಬಾಂಧವರು ಕಂಡು ಬಂದರು. ಆಗ
ಅವನು ಕಣ್ಣೀರಿನೊಡನೆ ಇವರ ನ್ನೆಲ್ಲಾ
ಹತಮಾಡಿ ಆ ರಕ್ತಸಿಕ್ತವಾದ ಸಿಂಹಾಸನದಲ್ಲಿ
ಕುಳಿತು ರಾಜ್ಯಶ್ರೀಯನ್ನು ಅನುಭವಿಸುವ ಆಸೆ
ತಮಗಿಲ್ಲವೆಂದು ತಾನು ಯುದ್ಧ ಮಾಡುವುದಿಲ್ಲ
ವೆಂದು ಬಿಲ್ಲು ಬಾಣಗಳನ್ನು ಬಿಸುಟು ಕುಳಿ
ತನು. ಅವನನ್ನು ಯುದ್ಧಕ್ಕೆ ಪ್ರೋತ್ಸಾಹಿಸುವ
ನೆಪದಲ್ಲಿ ತನಗೆ ಶ್ರೇಯಸ್ಸಾದುದನ್ನು ಶ್ರೀ
ಕೃಷ್ಣನು ತಿಳಿಸಿಕೊಡಬೇಕೆಂದು ಶಿಷ್ಯನಾಗಿ
ಅರ್ಜುನನು ಪ್ರಾರ್ಥಿಸಿದಾಗ ಕರ್ಮಯೋಗ,
ಜ್ಞಾನಯೋಗ, ಗೃಹೀತವಾದ ಭಕ್ತಿಯೋಗ
ವನ್ನು ಸ್ವಾಮಿ ಅವತರಿಸಿದನು.

‘ಭಗವದ್ಗೀತೆ’ ಪಂಚಮ ವೇದವೆಂದು ಪ್ರಖ್ಯಾತವಾಗಿರುವ ಮಹಾಭಾರತದಲ್ಲಿ ಅಡಕವಾಗಿದೆ. ಇದು ಮಹಾಭಾರತದ ಯುದ್ಧ ಸಂದರ್ಭದಲ್ಲಿ ಮೂಡಿ ಬಂದಿದ್ದರೂ ಇದು ಒಂದು ಸ್ವತಂತ್ರವಾದ ಪ್ರಸ್ಥಾನವೆನಿಸಿದೆ. ಅತ್ಯಂತ ಶ್ರೇಷ್ಠವಾದ ಜ್ಞಾನದೀವಿಗೆಯಾಗಿದೆ ಪ್ರಪಂಚದ ಧರ್ಮ ಶಾಸ್ತ್ರಗಳಲ್ಲೆಲ್ಲಾ ‘ಭಗವದ್ಗೀತೆ’ ಅತ್ಯಂತ ಚಿಕ್ಕದಾದ ಧರ್ಮ ಶಾಸ್ತ್ರವಾಗಿದೆ.ಮಾನವರಿಗೆ ತತ್ತ್ವ, ಹಿತ, ಪುರುಷಾರ್ಥಗಳ ನಿರೂಪಣೆ ಮಾಡಿದೆ. ಸಾಕ್ಷಾತ್ ಯೋಗೀಶ್ವರನೇ ಉಪದೇಶಿಸಿದ ಇದು ಯೋಗ ಶಾಸ್ತ್ರವೆನಿಸಿದೆ. ಇದು ಎಲ್ಲಾ ಉಪನಿಷತ್ತುಗಳ ಸಾರ ಸರ್ವಸ್ವವಾಗಿದೆ. ಬ್ರಹ್ಮ ವಿದ್ಯೆ ಎನಿಸಿದೆ.



ಭಗವದ್ಗೀತೆಯಲ್ಲಿ ೧೮ ಅಧ್ಯಾಯಗಳಿವೆ. ಪ್ರತಿ ಅಧ್ಯಾಯವನ್ನು ಯೋಗವೆಂದು ಕರೆದಿದೆ. ಯೋಗ ಎಂದರೆ ಉಪಾಯ ಎಂದರ್ಥ. ಈ ಒಂದೊಂದು ಅಧ್ಯಾಯದಲ್ಲೂ ಸ್ವಾಮಿ ತನ್ನನ್ನು ಪಡೆಯಲು ಉಪಾಯವಾದ ಅಂಶಗಳನ್ನು ಉಪದೇಶಿಸಿದ್ದಾರೆ.

ಪರಬ್ರಹ್ಮ ಸ್ವರೂಪನಾದ ಶ್ರೀ ಮನ್ನಾರಾಯಣನನ್ನು ಭಕ್ತಿ ಯೋಗದ ಮೂಲಕ ಪಡೆಯಬಹುದೆಂಬುದೆ ಗೀತೆಯ ಪ್ರಧಾನ ಉಪದೇಶ. ವರ್ಣಾಶ್ರಮ ಧರ್ಮಗಳನ್ನು ಮಾಡುತ್ತಾ ಆತ್ಮ ಸ್ವರೂಪವನ್ನು ಅರಿತು ಭಗವಂತನನ್ನು ಪ್ರೀತಿ ಮಾಡುವುದರಿಂದ ಭಕ್ತಿ ಯೋಗ ದೃಢವಾಗುತ್ತದೆ.ಶರೀರಕ್ಕಿಂತಾ ಬೇರೆಯಾದ ಆತ್ಮನು ನಿತ್ಯನೆಂದೂ ಭಗವಂತನಿಗೆ ಅಧೀನನಾದವನೆಂದೂ ತಿಳಿದು ಮಾಡುವ ಭಕ್ತಿ ಯೋಗಕ್ಕೆ ಭಗವಂತನು ಗೋಚರಿಸುವನೆಂಬುದು ಗೀತಾ ಶಾಸ್ತ್ರದ ಪ್ರಧಾನ ಉಪದೇಶ.

ಮೊದಲ ಆರು ಅಧ್ಯಾಯಗಳಲ್ಲಿ ಆತ್ಮ ಸ್ವರೂಪ, ಆತ್ಮ ಸಾಕ್ಷಾತ್ಕಾರಕ್ಕೆ ಮಾರ್ಗ,ಆತ್ಮ ಜ್ಞಾನದೊಡನೆ ಮಾಡುವ ಕರ್ಮಯೋಗ ಸ್ವರೂಪ, ಅದರಿಂದ ಲಭಿಸುವ ಸ್ಥಿತಪ್ರಜ್ಞತೆ, ಮತ್ತು ಅದರಿಂದ ಲಭಿಸುವ ಜೀವಾತ್ಮ ಸಾಕ್ಷಾತ್ಕಾರ.

ಮುಂದಿನ ಆರು ಅಧ್ಯಾಯಗಳಲ್ಲಿ ಭಗವಂತನನ್ನು ಪಡೆಯುವ ಉಪಾಯವಾದ ಭಕ್ತಿ ಯೋಗವನ್ನು ಪ್ರತಿಪಾದಿಸಿದೆ.ಕರ್ಮಯೋಗ ಮತ್ತು ಜ್ಞಾನಯೋಗಗಳಿಂದ ಭಕ್ತಿಯೋಗ ಸಿದ್ಧವಾಗುವುದೆಂದು ಮತ್ತು ಭಕ್ತಿ ಯೋಗದ ಸ್ವರೂಪವನ್ನು ಉಪದೇಶಿಸಿದೆ.

ಕೊನೆಯ ಆರು ಅಧ್ಯಾಯಗಳಲ್ಲಿ ಪ್ರಕೃತಿ,ಪುರುಷ ಸರ್ವೇಶ್ವರ ಇವರ ವಿಷಯಗಳನ್ನು, ಮತ್ತು ಕರ್ಮ, ಜ್ಞಾನ ಭಕ್ತಿಗಳ ಸ್ವರೂಪವನ್ನು ಮೊದಲು ಹೇಳಿ ಉಳಿದಿರುವ ಇತರ ವಿಷಯಗಳನ್ನು ನಿರೂಪಿಸಲಾಗಿದೆ. ಈ ರೀತಿ ಸಾಕ್ಷಾತ್ ಶ್ರೀಮನ್ನಾರಾಯಣನು ಕೃಷ್ಣನಾಗಿ ಅರ್ಜುನನ್ನು ನೆಪವಾಗಿಟ್ಟು ಮಾನವರಿಗೆಲ್ಲಾ ಅತ್ಯಂತ ಅವಶ್ಯಕವಾದ ತತ್ತ್ವ, ಹಿತ ಪುರುಷಾರ್ಥಗಳನ್ನು ಉಪದೇಶಿಸಿದ್ದಾನೆ.

ಯುದ್ಧದ ಪ್ರಾರಂಭದಲ್ಲಿ ಧೃತರಾಷ್ಟ್ರನು ಸಂಜಯನನ್ನು ತನ್ನ ಮಕ್ಕಳಾದ ಕೌರವರಿಗೆ ಜಯವಾಗುವುದೋ ಎಂದು ಪ್ರಶ್ನಿಸುತ್ತಾನೆ. ವ್ಯಾಸರ ಪ್ರಸಾದದಿಂದ ಸಂಜಯ ಯುದ್ಧರಂಗದಲ್ಲಿ ನಡೆಯುವ ಸಮಸ್ತವನ್ನೂ ಕಾಣಲು ಶಕ್ತನಾಗಿದ್ದಾನೆ. ಅವನು ಶ್ರೀಕೃಷ್ಣ ಅರ್ಜುನರ ಸಂವಾದವನ್ನು ಪೂರ್ತಿಯಾಗಿ ಕೇಳಿದ ಮೇಲೆ ಈ ಎಲ್ಲಾ ಅಧ್ಯಾಯಗಳ ಕೊನೆಯಲ್ಲಿ ಧೃತರಾಷ್ಟ್ರನ ಪ್ರಶ್ನೆಗೆ ತನ್ನ ತೀರ್ಮಾನವನ್ನು ತಿಳಿಸುತ್ತಾನೆ. ಎಲ್ಲಿ ಯೋಗೀಶ್ವರನಾದ ಶ್ರೀಹರಿ ಇರುವನೋ ಎಲ್ಲಿ ಪಾರ್ಥನು ಧನುರ್ಧರನಾಗಿರುವನೋ ಅಲ್ಲಿ ವಿಜಯ ಶ್ರೀ ಇರುವುದೆಂಬುದರಲ್ಲಿ ಸಂಶಯವೇ ಇಲ್ಲವೆಂದು.

ಭಕ್ತನು ತಾನು ಭಗವಂತನಿಗೆ ಸೇರಿದವರೆಂದು ಅರಿತು ಭಗವಂತನಲ್ಲಿ ನಿರತಿಶಯ ಪ್ರೀತಿಯನ್ನು ತೋರಿಸುತ್ತಾನೆ.ತನ್ನ ಮನಸ್ಸನ್ನು ಸಕಲ ಕಲ್ಯಾಣ ಗುಣಾಕರನಾದ ಭಗವಂತನಲ್ಲಿ ನೆಲೆ ನಿಲ್ಲಿಸುತ್ತಾನೆ. ಅತ್ಯಂತ ಪ್ರೀತಿಯಿಂದ ತಾನು ಮಾಡಿದ ಸರ್ವಕಾರ್ಯಗಳನ್ನೂ ಭಗವಂತನಿಗೆ ಅರ್ಪಿಸುತ್ತಾನೆ. ಸದಾ ಸರ್ವದಾ ತನ್ನ ಮನಸ್ಸನ್ನೂ ಅವನ ಕಲ್ಯಾಣ ಗುಣಗಳನ್ನೂ ದಿವ್ಯ ಸ್ವರೂಪವನ್ನೂ ನೆನೆಯುತ್ತಾನೆ. ಆ ಭಗವಂತನನ್ನು ತಿಳಿಯಲೂ ಕಾಣಲು ಶಕ್ತನಾಗುತ್ತಾನೆ. ಭಕ್ತಿಯ ಸ್ವರೂಪ ಆಶ್ಚರ್ಯಕರವಾದುದು. ಈ ರೀತಿಯ ಭಕ್ತಿ ದೊರೆಯ ಬೇಕಾದರೆ ಭಗವಂತನಲ್ಲಿ ಶರಣಾಗತಿ ಮಾಡಬೇಕು.

ಈ ರೀತಿ ಭಕ್ತಯೋಗ ಮಾಡಲು ಅಸಮರ್ಥರಾದವರಿಗೆ ಶ್ರೀ ಕೃಷ್ಣನು ಪ್ರಪತ್ತಿ ಅಥವಾ ಶರಣಾಗತಿ ಎನ್ನುವ ಉಪಾಯವನ್ನು ಉಪದೇಶಿಸಿದ್ದಾನೆ. ನಾವು ಅವನಲ್ಲಿ ನಮಗೆ ಕರ್ಮಯೋಗ, ಜ್ಞಾನಯೋಗ, ಭಕ್ತಿ ಯೋಗಗಳನ್ನು ಮಾಡಲು ಸಾಧ್ಯವಿಲ್ಲ. ಶಾಸ್ತ್ರಾರ್ಥ ಜ್ಞಾನವಿಲ್ಲ. ಬಹಳ ದುಃಖಿತನಾಗಿದ್ದೇನೆ. ನಿನ್ನನ್ನು ಪಡೆಯಲು ಹಂಬಲಿಸುತ್ತಿದ್ದೇನೆ ಎಂದು ಪರಮ ವಿಶ್ವಾಸದಿಂದ ಪ್ರಾರ್ಥಿಸಿದರೆ ಸ್ವಾಮಿ ನಮ್ಮನ್ನು ಖಂಡಿತವಾಗಿ ರಕ್ಷಿಸುತ್ತಾನೆ.

తిరుమలె తిరుపతి దేవస్థానగళు, తిరుపతి

# ಸ್ವಾಮಿಯ ಆರ್ಜಿತ ಸೇವೆಗಳು – ತಿರುಮಲೆ

## ಆರ್ಜಿತ ಸೇವೆಗಳು/ ಉತ್ಸವಗಳು

| ಸಂ. | ಸೇವೆ / ಉತ್ಸವದ ಹೆಸರು | ದಿನ | ಸೇವಾ / ಪ್ರವೇಶ ಸಮಯ | ಪ್ರವೇಶ | ಟಿಕೆಟ್ಟು ಬೆಲೆ |
|---|---|---|---|---|---|
| | **ಸೇವೆಗಳು** | | | | |
| 1. | ಸುಪ್ರಭಾತ | ಪ್ರತಿದಿನ | ಬೆ. 2.00-3.00 ಗಂ|| | 1 | ರೂ. 120.00 |
| 2. | ತೋಮಾಲ ಸೇವೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 3.00-3,30 ಗಂ|| | 1 | ರೂ. 220.00 |
| 3. | ಅರ್ಚನೆ (ಮಂಗಳ, ಬುಧ, ಗುರು) | ಪ್ರತಿದಿನ | ಬೆ. 4.00-4.30 ಗಂ|| | 1 | ರೂ. 220.00 |
| | **ನಿತ್ಯ ಉತ್ಸವಗಳು** | | | | |
| 4. | ಕಲ್ಯಾಣೋತ್ಸವ | ಪ್ರತಿದಿನ | ಮ. 10.00-12.00 ಗಂ|| | 2 | ರೂ. 1,000.00 |
| 5. | ಡೋಲೋತ್ಸವ (ಊಂಜಲ್ ಸೇವೆ) | ಪ್ರತಿದಿನ | ಮ. 11.00-1.00 ಗಂ|| | 1 | ರೂ. 200.00 |
| 6. | ಆರ್ಜಿತ ಬ್ರಹ್ಮೋತ್ಸವ | ಪ್ರತಿದಿನ | ಮ. 12.30-2.00 ಗಂ|| | 1 | ರೂ. 200.00 |
| 7. | ವಸಂತೋತ್ಸವ | ಪ್ರತಿದಿನ | ಮ. 2.30-3.00 ಗಂ|| | 1 | ರೂ. 300.00 |
| 8. | ಸಹಸ್ರದೀಪಾಲಂಕರಣ ಸೇವೆ | ಪ್ರತಿದಿನ | ಸಾ. 5.00-5.30 ಗಂ|| | 1 | ರೂ. 200.00 |
| | **ವಾರದ ಸೇವೆಗಳು** | | | | |
| 9. | ವಿಶೇಷಪೂಜೆ | ಸೋಮವಾರ | ಬೆ. 6.00-6,30 ಗಂ|| | 1 | ರೂ. 600.00 |
| 10. | ಅಷ್ಟದಳ ಪಾದಪದ್ಮಾರಾಧನೆ | ಮಂಗಳವಾರ | ಬೆ. 5.00-5.30 ಗಂ|| | 1 | ರೂ. 1,250.00 |
| 11. | ಸಹಸ್ರ ಕಲಶಾಭಿಷೇಕ | ಬುಧವಾರ | ಬೆ. 5.00-5.30 ಗಂ|| | 1 | ರೂ. 850.00 |
| 12. | ತಿರುಪ್ಪಾವಡ ಸೇವೆ | ಗುರುವಾರ | ಬೆ. 5.00-5.30 ಗಂ|| | 1 | ರೂ. 850.00 |
| 13. | ವಸ್ತ್ರಾಲಂಕಾರ ಸೇವೆ | ಶುಕ್ರವಾರ | ಬೆ. 3.00-4.00 ಗಂ|| | 2 (ಗಂಡ ಹೆಂಡತಿ) | ರೂ. 12,250.00 |
| ಅ. | ಪೂರಾಭಿಷೇಕ (12 ವರ್ಷದ ಮಕ್ಕಳನ್ನು ಅನುಮತಿಸುವುದಿಲ್ಲ) | ಶುಕ್ರವಾರ | ಬೆ. 3.00-4.00 ಗಂ|| | 1 | ರೂ. 750.00 |
| 14. | ನಿಜಪಾದ ದರ್ಶನ | ಶುಕ್ರವಾರ | ಬೆ. 4.30-5.30 ಗಂ|| | 1 | ರೂ. 200.00 |
| | **ವಾರ್ಷಿಕ ಸೇವೆಗಳು / ಪ್ರತ್ಯೇಕ ಸಂದರ್ಭ ಸೇವೆಗಳು** | | | | |
| 15. | ತೆಪ್ಪೋತ್ಸವ | ಫೆಬ್ರವರಿ/ ಮಾರ್ಚ್ | ಸಾ.6.00-7-00 ಗಂ|| | 1 | ರೂ. 500.00 |
| 16. | ವಸಂತೋತ್ಸವ | ಮಾರ್ಚ್/ ಏಪ್ರಿಲ್ | ಮ. 1.00-2.00 ಗಂ|| | 1 | ರೂ. 300.00 |
| 17. | ಪದ್ಮಾವತಿ ಪರಿಣಯ | ಮೇ | ಸಾ. 4-00-4.30 ಗಂ|| | 1 | ರೂ. 1,000.00 |
| 18. | ಅಭಿಧೇಯಕ ಅಭಿಷೇಕ | ಜೂನ್ | ಬೆ. 8-00 ಗಂ|| | 1 | ರೂ. 400.00 |
| 19. | ಪುಷ್ಪಪಲ್ಲಕಿ | ಜುಲೈ | ಸಾ. 6-30-7-30 ಗಂ|| | 1 | ರೂ. 200.00 |
| 20. | ಪವಿತ್ರೋತ್ಸವ | ಆಗಸ್ಟ್ | ಬೆ. 8-00-9-00 ಗಂ|| | 1 | ರೂ. 2,500.00 |
| 21. | ಪುಷ್ಪಯಾಗ | ನವೆಂಬರ್ | ಬೆ. 8-00-9-00 ಗಂ|| | 1 | ರೂ. 700.00 |
| 22. | ಕೋಯಿಲ್ ಆಳ್ವಾರ್ ತಿರುಮಂಜನ | ವರ್ಷಕ್ಕೆ 4 ಬಾರಿ | ಬೆ. 10-00-11-00 ಗಂ|| | 1 | ರೂ. 300.00 |

Call Centre : 0877–2233333,
0877–2277777
Toll free : 18004254141,
1800425333333
What's app : 9399399399
e-mail : helpdesk@tirumala.org

ಮೇಲಿನ ಸೇವೆಗಳಿಗೆ ಸಂಬಂಧಿಸಿದ ಆನ್‌ಲೈನ್ ನಲ್ಲಿ ಮಾತ್ರವೇ ಟಿಕೆಟ್ ಬುಕ್ ಮಾಡಿಕೊಳ್ಳಬೇಕು. ಇತರ ವಿವರಗಳಿಗೆ : ತಿ.ತಿ.ದೇ. ವೆಬ್‌ಸೈಟ್ : www.ttdsevaonline.com / www.tirumala.org ನು ಸಂಪ್ರದಿಸಬೇಕು.

ಓಂ ನಮೋ ವೆಂಕಟೇಶಾಯ

ತಿರುಮಲೆ ತಿರುಪತಿ ದೇವಸ್ಥಾನಗಳು

# ಗೋವಿಂದಂ
# ಪರಮಾನಂದಂ





## ತಿರುಮಲೆ
## ಶ್ರೀ ವೆಂಕಟೇಶ್ವರ ಸ್ವಾಮಿಯವರ
## ಆಲಯದಲ್ಲಿ
## ನಿತ್ಯ ಸೇವೆಗಳು



# ಗೋವಿಂದಂ ಪರಮಾನಂದಂ

## ಗೋವಿಂದಂ ಪರಮಾನಂದಂ ತಿರುಮಲೆ ಶ್ರೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ನಿತ್ಯಸೇವೆಗಳು

(ತಿ.ತಿ.ದೇ. ನಮುನಾ ಆಲಯದ ಆಧಾರವಾಗಿ)



ಸುಪ್ರಭಾತ



ಸುಪ್ರಭಾತ



ಉತ್ಸವ ಮೂರ್ತಿಗಳ ನಿತ್ಯಕಲ್ಯಾಣ


ಕೊಲುವು


ತೋಮಾಲೆ ಸೇವೆ


ಸಹಸ್ರ ಕಲಶಾಭಿಷೇಕ


ತಿರುಪ್ಪಾವಡ ಸೇವೆ


ಅಷ್ಟದಳ ಪಾದಪದ್ಮಾರಾಧನೆ


ಸಹಸ್ರನಾಮಾರ್ಚನೆ


ಶುಕ್ರವಾರಾಭಿಷೇಕ


ಏಕಾಂತಸೇವೆ



ತಿರುಮಲೆಯಲ್ಲಿ 09-11-2019 ರ ಮುಂಜಾನೆ ನಡೆದ ಕೈಶಿಕ ದ್ವಾದಶಿಯ ಮಹೋತ್ಸವ



ಚಂದ್ರಗಿರಿ, ಚಿತ್ತೂರು ಜಿಲ್ಲೆ, ಆಂಧ್ರಪ್ರದೇಶ್ ಶ್ರೀ ಕೋದಂಡ ರಾಮ ಸ್ವಾಮಿಯವರ ಆಲಯದಲ್ಲಿ ಅಕ್ಟೋಬರ್ 23 ರಿಂದ 25 ರ ವರೆಗೆ ನಡೆದ ಅಷ್ಟಬಂಧನ, ಬಾಲಾಲಯ ಜೀರ್ಣೋದ್ಧರಣೆ, ಮಹಾಸಂಪ್ರೋಕ್ಷಣ ದೃಶ್ಯಗಳು



ನವೆಂಬರ್ 07 ರಿಂದ 10 ರ ವರೆಗೆ ದೇವುನಿ ಕಡಪ , ವೈ.ಎಸ್. ಆರ್ ಜಿಲ್ಲೆ, ಆಂಧ್ರಪ್ರದೇಶ್‌ನಲ್ಲಿ ಶ್ರೀ ಲಕ್ಷ್ಮೀ ವೆಂಕಟೇಶ್ವರ ಸ್ವಾಮಿಯವರ ಆಲಯದಲ್ಲಿ ನಡೆದ ಅಷ್ಟಬಂಧನ ಮಹಾಸಂಪ್ರೋಕ್ಷಣ ದೃಶ್ಯಗಳು



ತಿ.ತಿ.ದೇ., ಬೋರ್ಡ್ ಎಕ್ಸ್ - ಅಫಿಷಿಯಾ ಸದಸ್ಯರಾಗಿ ದೇವಾದಾಯ ಮತ್ತು ಧರ್ಮಾದಾಯ ಶಾಖೆಯ ಮುಖ್ಯಕಾರ್ಯದರ್ಶಿಯಾಗಿ ಶ್ರೀಮತಿ. ವೇಮೂರಿ ಉಷಾರಾಣಿ ಐ.ಎ.ಎಸ್.,ರವರು (10-11-2019) ರಂದು ತಿರುಮಲೆ ಸ್ವಾಮಿಯವರ ಆಲಯದಲ್ಲಿ ತಿ.ತಿ.ದೇ. ಅಡಿಷನಲ್ ಇ.ಓ. ಶ್ರೀ ಧರ್ಮಾರೆಡ್ಡಿಯವರು ಪ್ರಮಾಣ ಸ್ವೀಕಾರ ಮಾಡಿಸಿ, ಸ್ವಾಮಿ, ಅಮ್ಮನವರ ಚಿತ್ರಪಟವನ್ನು ಬಹುಕರಿಸಿದರು



ತಿ.ತಿ.ದೇ. ಬರ್ಡ್ಸ್ ಆಸ್ಪತ್ರೆಯಲ್ಲಿ ದಿವ್ಯಾಂಗರ ಜೊತೆಯಲ್ಲಿ ದೀಪಾವಳಿ ಹಬ್ಬದ ಸಂಭ್ರಮವನ್ನು ಆಚರಿಸುತ್ತಿರುವ ತಿ.ತಿ.ದೇ. ಜೆ.ಇ.ಓ. ಶ್ರೀ ಪಿ. ಬಸಂತ್‌ಕುಮಾರ್. ಐ.ಎ.ಎಸ್.,

ಹಸಿರುತೋರಣ

# ಗೋದಾದೇವಿ ತಿರುಪ್ಪಾವೈ ತತ್ತ್ವ

- ತೆಲುಗು ಮೂಲ: ಪರವಸ್ತು ಕಮಲ
- ಅನುವಾದ ಕೆ. ನರಸಿಂಹಮೂರ್ತಿ




'ತಿರುಪ್ಪಾವೈ' ಎಂಬುದೊಂದು ದ್ರಾವಿಡ ಪ್ರಬಂಧ. ಇದು ದ್ರಾವಿಡ ವೇದವೆಂದೇ ಕರೆಯಲ್ಪಟ್ಟಿದೆ. 'ತಿರುಪ್ಪಾವೈ' ಎಂದರೆ ಏನು? 'ತಿರು' ಎಂದರೆ 'ಶ್ರೀ', 'ಶ್ರೀ' ಎಂದರೆ ಲಕ್ಷ್ಮಿ ಸಂಪದ - ಮೋಕ್ಷವೆಂದು ಅರ್ಥಗಳಿವೆ. 'ಪಾವೈ' ಎಂದರೆ ವ್ರತ ನೇಮ- ನಿಷ್ಠೆಗಳಿಂದ ಆಚರಿಸುವ ಸಂಕಲ್ಪ ವ್ಯಾಪಾರವೇ ವ್ರತವೆನಿಸಿಕೊಳ್ಳುತ್ತದೆ.

**'ತಿರುಪ್ಪಾವೈ' ಎಂದರೆ ......**

'ಶ್ರೀ' ಯ ಸಲುವಾಗಿ ಆಚರಿಸಲ್ಪಡುವ ಒಂದು ವ್ರತವು. (ಪ್ಪಾವೈ ಎಂದರೆ ಕಾವ್ಯಗಳಿಂದ ಕೂಡಿದ ಮಾಲೆ) ಶ್ರೀಯನ್ನು ಪಡೆಯಲು ಮಾಲೆಯನ್ನು ಹೆಣೆದು ಗೀತೆಗಳನ್ನು ಹಾಡಿದ್ದಾಳೆ ಗೋದಾ. ಮಾಲೆಯಲ್ಲಿ ವಿಧವಿಧವಾದ ಪುಷ್ಪಗಳನ್ನು ಪೋಣಿಸಲಾಗುತ್ತದೆ. ಎಲ್ಲಾ ಸುಮಗಳನ್ನು ಒಂದೇ ಸೂತ್ರಕ್ಕೆ (ದಾರಕ್ಕೆ) ಪೋಣಿಸಲಾಗಿರುತ್ತದೆ. ದಾರವೊಂದೇಯಾದರೂ ಪುಷ್ಪಗಳದೆಷ್ಟೋ. ಈ ಗೀತೆಗಳಲ್ಲಿಯ ಭಾವಗಳು ಎಷ್ಟೆಷ್ಟಿದ್ದರೂ ಒಬ್ಬರಿಗಾಗಿಯೇ. ಒಂದೇ ತರಹದ ಫಲವನ್ನು ಹೊಂದುವುದಕ್ಕಾಗಿಯೇ. ಒಂದೇ ಫಲವನ್ನು ಪಡೆಯಲು ವಿವಿಧ ತತ್ತ್ವಗಳಿಂದ ಕೂಡಿದ ವಿಷಯಗಳನ್ನು ಒಂದೇ ಸ್ಥಳದಲ್ಲಿ ಪೋಣಿಸಿ ಗಾಯನ ವನ್ನಾಗಿಸಲಾಗಿದೆ. ಕೇವಲ ಗಾನವನ್ನೊಂದೇ ಮಾಡಿದರೆ ಅದು ವ್ರತ ಹೇಗಾಗುತ್ತದೆ? ಅಂದರೆ ಇದೊಂದು ಸಂಕಲ್ಪಯಜ್ಞ. ಮನಸು ಸಂಕಲ್ಪಿಸಿ ಭಕ್ತಿ ಭಾವನೆಯ ಜಲದಿಂದ ಜಳಕಮಾಡಿ 'ಆನಂದಾನುಭೂತಿ' ಯೆಂಬ 'ಶ್ರೀ' ಯನ್ನು ಗೋದಾ ಪಡೆದಿದ್ದಾಳೆ. ಇದೇ ಆ ವ್ರತವು ಚಿತ್ತರಿಸಿದ ಮಧುರಾನುಭವವು. ಅದ್ಹೇಗೆ ಸಾಧ್ಯ? ಏಕೆ ಆಗಲಾರದು? ಆದಾವ್ಯಾಗೋದ್ವಾಪರ ಯುಗದಲ್ಲಿ ಗೋಪಿಕೆಯರು ಇದೇ ವಿಧವಾದ ಸಂಕಲ್ಪ ವ್ರತಗಳನ್ನು ಕೈಗೊಂಡಿದ್ದರಂತೆ. ಅದಕ್ಕೆ ಸಾಕ್ಷಿಯಾಗಿ



ಭಾಗವತದಲ್ಲಿ ಗೋಪಿಯರ ಕಥೆಗಳು ಹೇಳುತ್ತವೆ.

## ದ್ರಾವಿಡ ವೇದವೆಂದರೆ?

ಯಾವುದೋ ಭಕ್ತಿಯಿಂದ ಭಗವಂತನನ್ನು ಕುರಿತು ಹಾಡಿದ ಗೀತೆಗಳು 'ದ್ರಾವಿಡವೇದಗಳು' ಹೇಗಾಯ್ತು? ವೇದವೆಂದರೆ ಸಂಸ್ಕೃತದಲ್ಲಿ, ಸ್ವರಗಳಿಂದ ಪೋಣಿಸಿದ ಎಷ್ಟೋ ಮಂತ್ರಗಳು ಅದರಲ್ಲಿಯ ಭಾಗಗಳು. ಕೇವಲ ಶಬ್ದಗಳನ್ನು ಕಲಿಸಿ ಹಾಡಿದರೆ ಅದೆಂಥಹ ವೇದವಾದೀತು? ಅನಂತವಾದ ವೇದಗಳನ್ನು ರಾಶಿಗೆ ಹೋಲಿಸಲು ನಿಂತರೆ ಈ ವಿಶ್ವವೇ ಸಣ್ಣದಾಗುವುದು. ಮೂರು ವೇದಗಳು ಮೂರು ಪರ್ವತಗಳು.ಈ ಪರ್ವತ ಪ್ರಮಾಣವಾದ ಜ್ಞಾನಗಳ ಅಧ್ಯಯನವನ್ನು ಮಾಡಲು ಭಾರದ್ವಾಜ ಮಹರ್ಷಿಯಂಥವರಿಗೇ ಮುನ್ನೂರು ವರ್ಷಗಳು ಕಡಿಮೆಯಾದುವು. ಇನ್ನು ಸಾಮಾನ್ಯ ಜನರಿಗೆ ಈ ಜ್ಞಾನವನ್ನು ಹೊಂದಲು ಈ ಜನ್ಮವು ಸರಿಯಾಯೀತೇ? ಆದಕ್ಕೇ ಈ ರಾಶಿ ತತ್ತ್ವವನ್ನು, ಉಪನಿಷತ್ತುಗಳು ಪ್ರತಿಪಾದಿಸುವ ಪರಮಾತ್ಮ ತತ್ತ್ವವನ್ನು ಜೀವಿಗಳು ಹೊಂದಬೇಕಾದ ಜ್ಞಾನವನ್ನು ಮಥಿಸಿ, ಶೋಧಿಸಿ ಹಿಂಡಿ ಭಗವಂತನಿಗೆ ಅರ್ಪಿಸಿದ ಮಾಲೆಯೇ ಈ 'ತಿರುಪ್ಪಾವೈ', ವೇದೋಪನಿಷತ್ತುಗಳ ಸಾರವಾದ ಭಗವದ್ಗೀತೆಯ ಜ್ಞಾನವನ್ನು ಕೂಡಾ ಇದರಲ್ಲಿ ಸುವಾಸನೆಯನ್ನಾಗಿಸಿಕೊಂಡ ಮಾಲೆಯಿದು. ಆದ್ದರಿಂದಲೇ ಇದು ಬಾಡದ ಬಳಸದ ಮಾಲೆ. ಇದನ್ನು ಮನನ ಮಾಡಿದರೆ ಆತ್ಮವು ವಿಕಸಿಸಿ ಪರಿಮಳಿಸುತ್ತದೆ. ದ್ರಾವಿಡ ಭಾಷೆ ತಮಿಳು. ಆದ್ದರಿಂದಲೇ ಇದು 'ದ್ರಾವಿಡವೇದ'ವಾಗಿ ಸೂಕ್ಷ್ಮವಾಸ್ಥೆಯಲ್ಲಿ ಮೋಕ್ಷವನ್ನೀಯುತ್ತದೆ.

## ತಿರುಪ್ಪಾವೈ ವ್ರತವನ್ನು ಯಾರು ಮಾಡಿದ್ದಾರೆ?

ದ್ರಾವಿಡದೇಶದಲ್ಲಿ ಶ್ರೀ ವಿಲ್ಲಿಪುತ್ತೂರು ಎಂಬ ವಟಪತ್ರಶಾಯಿ ಶ್ರೀಕೃಷ್ಣನ ಆಲಯವಿದೆ. ಆ ಕೃಷ್ಣನಿಗೆ ತನ್ನ ತುಲಸಿವನದಲ್ಲಿ ಬೆಳೆದ ತುಳಸಿಮಾಲೆಗಳಿಂದ ಹೂಮಾಲೆ ಸೇವಾ ಕೈಂಕರ್ಯವನ್ನು ನಿರ್ವಹಿಸುತ್ತಿದ್ದಾನೆ ಒಬ್ಬ ಭಕ್ತನು. ಆತನ ಹೆಸರೇ ವಿಷ್ಣುಚಿತ್ತನೆಂಬ ಆಳ್ವಾರನು.ಆಳ್ವಾರನೆಂದರೆ ಶ್ರೇಷ್ಠ ಭಕ್ತನು. ಭಗವತ್ಪ್ರೇಮ ಸಾಗರದಲ್ಲಿ ಮುಳುಗಿದವನು. ಆತನಿಗೆ ತುಳಸಿವನದಲ್ಲಿ ದೊರೆತ ಮಗುವೇ ಗೋದಾದೇವಿ. ಆ ಶ್ರೇಷ್ಠ ಭಕ್ತನ ಕೈಯಲ್ಲಿ ಬೆಳೆದ ಆಕೆಯೂ ಸಹಾ ಪರಮ ಭಕ್ತಳೇ ಆಗಿದ್ದಾಳೆ. ಗೋಪಿಕೆಯರು ಶ್ರೀ ಕೃಷ್ಣನನ್ನು ಪಡೆಯಲು ಭಕ್ತಿಯಿಂದ ವ್ರತವನ್ನು ಮಾಡಿದ್ದರಂತೆ ಅಂದು. ಇಂದು ಈ ಕಲಿಯುಗದಲ್ಲಿ ತನ್ನ ಜೊತೆಗಾರರರನ್ನೇ ಗೋಪಿಯನ್ನಾಗಿಸಿಕೊಂಡು ತಾನೇ ಸ್ವತಃ 'ತಿರುಪ್ಪಾವೈ' ಗೀತೆಗಳನ್ನು ಹಾಡಿ ಅದೇ ವ್ರತವನ್ನು ಆಚರಿಸಿದ್ದಾಳೆ ಗೋದಾ. ಆಚರಿಸುವುದೊಂದೇ ಅಲ್ಲ ಶ್ರೀರಂಗನಾಥನ ಪಾದಪದ್ಮಗಳಲ್ಲಿ ಲೀನವಾಗಿ ತಾನು ಕೋರಿದ ಫಲವನ್ನೇ ಹೊಂದಿದ್ದಾಳೆ."ಭಕ್ತಿಯಿಂದ ಭಗವಂತನನ್ನು ಕೋರಿದಲ್ಲಿ ತಪ್ಪದೇ ಆತನನ್ನು ಹೊಂದಬಲ್ಲರು; ಅದಕ್ಕೆ ದೇಶ - ಕಾಲಗಳ ಸಂಬಂಧವಿಲ್ಲ"ಎಂದು ನಿರೂಪಿಸಿದ್ದಾಳೆ ಗೋದಾದೇವಿ.ಅದಕ್ಕೇ ವಿಷ್ಣು ಚಿತ್ತರವರು ಆಕೆಯನ್ನು "ತನ್ನನ್ನು ರಕ್ಷಿಸಲೆಂದೇ ಬಂದಿರುವಳೇ ಈ ತಾಯಿ"ಎಂದು 'ಆಂಡಾಳ್' ಎಂಬ ಹೆಸರಿನಿಂದ ಕರೆದಿದ್ದಾರೆ.ಲಕ್ಷ್ಮಿ ಅಂಶದಿಂದ ಜನಿಸಿದ ಗೋದಾದೇವಿ ವಿಷ್ಣುವಿನಲ್ಲಿ ಲೀನವಾಗಿದ್ದಾಳೆ.

## ಈ ವ್ರತವನ್ನು 'ಆಂಡಾಳ್' ಏಕೆ ಆಚರಿಸಿದ್ದಾಳೆ?:

ಲಕ್ಷ್ಮಿಯಂತಿದ್ದ ಈ ತಾಯಿ ಭೂಮಿಯ ಮೇಲೆ ಜನಿಸಿದ್ದೇಕೆ? ಜನಿಸಿ ಈ ವ್ರತಗಳನ್ನು ಹಾಡುಗಳನ್ನು ಹಾಡಿ ಮತ್ತೆ ಜನ್ಮ ಸಮಾಪ್ತಿ ಮಾಡಿಕೊಂಡದ್ದೇಕೆ? ಅಂದರೆ ಅದೇ ಪರಮಾತ್ಮನ ಸಂಕಲ್ಪ.ಪರಮಾತ್ಮನ ಹೃದಯದಲ್ಲಿ ಲಕ್ಷ್ಮಿ ವಿರಾಜಿಸಿದರೆ ತಾನೇ ಜೀವರಾಶಿಗೆ ಪರಮಾತ್ಮನ ಕಾರುಣ್ಯದ ಸಂಕಲ್ಪವುಂಟಾಗುತ್ತದೆ?

ಶ್ರೀ ಕೃಷ್ಣಾವತಾರದಲ್ಲಿ ಧರ್ಮ ಸಂರಕ್ಷಣೆ-ಧರ್ಮ ಸ್ಥಾಪನೆಗಾಗಿ ಎಲ್ಲರ ಕರ್ಮಗಳನ್ನು ನಿರ್ಣಯಿಸಿದ ಪರಮಾತ್ಮ ಅರ್ಜುನನಿಂದ ಕರ್ಮವನ್ನು ಮಾಡಿಸಿ ಮತ್ತೊಮ್ಮೆ ಜೀವರಿಗೆ ಗೀತೋಪದೇಶವನ್ನು ಮಾಡಿದ್ದಾನೆ. ಅವತಾರ ಮುಕ್ತಾಯಗೊಳಿಸಿದರೂ ತೃಪ್ತಿಯುಂಟಾಗಲಿಲ್ಲ. ಚಿಂತಿಸುತ್ತಲೇ ಇದ್ದಾನೆ. ಆಗ ಲಕ್ಷ್ಮೀದೇವಿ ಗೋದಾದೇವಿಯಾಗಿ ಜನಿಸಿ, ಮತ್ತೇ ಜೀವರಿಗೆ ತಿಳಿಸಲೆಂದೇ ಇನ್ನೊಂದು ಬಗೆಯಲ್ಲಿ ಭಗವಂತನನ್ನು ಅರ್ಚಿಸುವ ವಿಧಾನವನ್ನು ಅನುಗ್ರಹಿಸಿದ್ದಾಳೆ. ಇಲ್ಲಿ ಕಾಲವು ಬದಲಾಗಿದೆ. ಬಾಯಿಂದ ಬರೀ ಹೇಳಿದರೆ ಸಾಲದು - ನಿದರ್ಶನಗಳು ಬೇಕು. ಅದಕ್ಕೇ ತಾನೇ ಸ್ವತಃಅರ್ಚಿಸಿ , ಇದೋ ಈ ಫಲಿತವನ್ನು ನೀವೂ ಕೂಡಾ ಹೊಂದಬಹುದು. ಅಲ್ಲದೇ ಯಾರಾದರೂ ಆಚರಿಸಿ ಫಲವನ್ನು ಹೊಂದಬಹುದೆಂದು ನಿರೂಪಿಸಿದ್ದಾಳೆ.

## ಈ ವ್ರತದ ಗುರಿಯೇನು?

ಈ ವ್ರತದ ಗುರಿಯಾದರೂ ಏನು? ತಮ್ಮೊಬ್ಬರ ಸುಖಕ್ಕಾಗಿ, ಆನಂದಕ್ಕಾಗಿ ಮಾತ್ರವೇ ಇದನ್ನು ಆಚರಿಸುತ್ತಾರಾ? ಅಂದರೆ ಈ ಗುರಿಗಳನ್ನು ಸಹಾ ಸ್ಪಷ್ಟವಾಗಿ ತಿಳಿಸಲಾಗಿದೆ. ಲೋಕವೆಲ್ಲಾ ಸಂಪದ್ಭರಿತವಾಗಿ,ಸಸ್ಯ ಶ್ಯಾಮಲಗಳಿಂದ ತುಂಬಿರಬೇಕು. ಎಲ್ಲರೂ ಸೇರಿ ಪರಮಾತ್ಮನನ್ನು ಸ್ತುತಿಸುತ್ತಾ



ಮುಂಜಾನೆ ಸ್ನಾನ ಮಾಡಿ ಆಚರಿಸಬೇಕಾದ ವ್ರತವಿದು. ಈ ವ್ರತ ನಿಯಮಗಳಲ್ಲಿ ಸ್ತ್ರೀತತ್ತ್ವವನ್ನು ಹೊಂದಿ ಮಾಡಬೇಕು. ಅಂದರೆ ಸ್ವಾತಂತ್ರ್ಯದ ಭಾವನೆಯನ್ನು ತೊರೆದು ಭಗವಂತನಿಗೇ ಪರ ತಂತ್ರವೆಂದು ಕೊಳ್ಳುವ ಸ್ವಭಾವವುಂಟಾಗುವುದೇ ಈ ವ್ರತದ ನಿಯಮಗಳಲ್ಲಿ ಮುಖ್ಯವಾದುದು. ಅಷ್ಟೇ ಅಲ್ಲ - ಸೌಂದರ್ಯ ಸ್ವರೂಪರಾದ ಗೋಪಿಯರೂ ಮಾಡಿ ದ್ದಾರೆ ಈ ವ್ರತವನ್ನು, ಸೌಂದರ್ಯವೆಂದರೆ ಆತ್ಮ ಸೌಂದರ್ಯ ಸ್ನಾನವೆಂದರೆ ಭಕ್ತಿ ಜಲದಲ್ಲಿ ಮಿಂದು ಪವಿತ್ರರಾಗುವುದೇ. ಕೃಷ್ಣನನ್ನೇ ಏಕೆ ಆರಾಧಿಸಿದರು? ಭಕ್ತಿ ದಾಸ್ಯವನ್ನು ನೀಡುವವನು ಶ್ರೀ ಕೃಷ್ಣ. ಆದರಿಂದಲೇ ಆತನನ್ನು ಅನುಸರಿಸಿಯೇ ಮೋಕ್ಷವನ್ನು ಹೊಂದಿದ್ದಾರೆ ಗೋಪಿಯರು.

### ಈ ವ್ರತವನ್ನು ಮಾಡಿ ಅವರು ಪಡೆದುದ್ದೇನು?

ಯಾವುದೋ 'ಪರ' ಎಂಬುವ ವಾದ್ಯವೊಂದನ್ನು ಗೋಪಿಕನ್ನಿಕೆಯರು 'ತೆಪ್ಪಟ' (ಪರ) ಎಂಬ ಹೆಸರಿನಿಂದ ಆ ವಾದ್ಯವು ಬೇಕೆಂದು ಕೇಳಿಕೊಂಡಿದ್ದಾರೆ. ಆದರೆ ಹೆಂಗಸರಿಗೇಕೆ ವಾದ್ಯವೇಕೆ? ಅಂದರೆ ಈ 'ಪರ'ವು ವಸ್ತು ರೂಪದಲ್ಲಿ ಹೇಳಲ್ಪಡುತ್ತಿದ್ದರೂ ವಾಸ್ತವದಲ್ಲಿ ಕಣ್ಣಿಗೆ ಕಾಣಿಸುವ ವಸ್ತುವೆ? ಎಂದು ಕೇಳಿದರೆ ಉತ್ತರವು ಅಲ್ಲವೆಂದು ಬರುತ್ತದೆ. ನಿರಂತರವಾಗಿ ಪರಮಾತ್ಮ ನೊಂದಿಗೆ ಇರುವ ವಸ್ತುವನ್ನೇ ಗೋಪಿಯರು ಕೋರಿದ್ದಾರೆ. ಪರಮಾತ್ಮನ ಓ ಸನ್ನಿಧಿಯಲ್ಲಿ ಇರುವುದೇ ಮಾನವರಿಗೆ ಅಸಾಧ್ಯವಾದ ಮಾತು. ಅಂತಹುದರಲ್ಲಿ ನಿರಂತರವಾಗಿ ಜೊತೆಗಿರುವುದು ಯಾವಾಗ ಸಾಧ್ಯವಾಗುವುದೋ! ಅಂತಹ ಸಾಧ್ಯತೆಯನ್ನು ಮಾಡಿಕೊಂಡುತ್ತದಂತೆ ಈ ವ್ರತ. ಅಂದರೆ ಗೋದಾದೇವಿ ಈ ವ್ರತವನ್ನು ಮಾಡಿ ರಂಗನಾಥನಲ್ಲಿ ಲೀನವಾಗಿ ಹೋಗಿದ್ದಾಳೆ. ಮಾನವರೂ ಸಹಾ ಈ ವ್ರತವನ್ನು ಮಾಡಿ ಸಾಧಿಸಬೇಕಾದ್ದು ಇದೇನಾ? ಎನ್ನುವ ಅನುಮಾನ ಬರುವುದುಂಟು. ಅಂದರೆ ಈ ವ್ರತದಿಂದ ಹೊಂದುವ ಬಾಹ್ಯವಸ್ತುಗಳು ಬಾಹ್ಯವಾಗಿ ಆಚರಿಸುವ ನೇಮಗಳು ಎಲ್ಲವೂ ಹೊರಮೈಗೆ ಕಾಣಿಸಲೇ ಹೊರತು ನಿಜವಾಗಿ ಅವುಗಳ ಅಸಲಿನ ಅಂತರ್ಯಗಳು ಅರ್ಥಗಳು ಬೇರೆಯೇ ಎಂದು ಸ್ಪಷ್ಟವಾಗಿ ತಿಳಿಸಿಕೊಡುತ್ತದೆ. ಈ ವಿಧವಾಗಿ ಗುಹ್ಯಸಂದೇಶಗಳನ್ನು ಅಡಗಿಸಿಟ್ಟುಕೊಂಡಿರುವ ಹಲವು ಪ್ರತ್ಯೇಕ ಗುರುತುಗಳ ಮೂಲಕ, ವಸ್ತುಗಳ ಮೂಲಕ ವಿಷಯಗಳನ್ನು ಹೇಳಿಕೊಡುವ ಸಾಹಿತ್ಯ ಪ್ರತೀಕಾತ್ಮಕ ಸಾಹಿತ್ಯವೆಂದೇ ಕರೆಯಲ್ಪಡುತ್ತದೆ. ವೇದೋಪನಿಷತ್ತುಗಳು ಭಾವಗಳನ್ನು, ಪುರಾಣ ಕಥೆಗಳನ್ನು ವಿಷ್ಣುವಿನ ದಶಾವತಾರ ಕಥೆಗಳನ್ನು ಸಂಪೂರ್ಣವಾಗಿ ಅರಗಿಸಿಟ್ಟುಕೊಂಡು ಮೇಲ್ನೋಟಕ್ಕೆ ಕೇವಲ ಹೆಣ್ಣುಮಕ್ಕಳು ಆಚರಿಸುವ ಒಂದು ಸ್ನಾನವ್ರತವಾಗಿ ಕಂಡು ಬರುತ್ತದೆ. ಉನ್ನತ ಸ್ಥಾಯಿಗಳ ಲ್ಲೊಂದಾದ ಭಗವದ್ಗೀತೆಯು ಹೇಳುವ ಕರ್ಮ, ಜ್ಞಾನ ಭಕ್ತಿ ಯೋಗಗಳನ್ನು ಸ್ಪಷ್ಟ ಪಡಿಸುತ್ತಾ ಮಧುರಾನಂದವನ್ನು ಹೊಂದಲನುವು ಮಾಡಿಕೊಡುವ ಒಂದು ಅಪೂರ್ವ ಭಕ್ತಿ ಮಾಲೆಯಿದು. ಗೋದಾದೇವಿ ಧರಿಸುವ ತುಂಬು ಹೂವಿನ ಮಾಲೆ ಭಕ್ತಿಗಾನಯುತವಾದ ತತ್ತ್ವಮಾಲಿಕೆ. ಆಕೆಯ ಕೈಯಲ್ಲಿರುವ ಗಿಳಿಯು ಗುರುಗಳ ಪ್ರತೀಕ. ಪುಷ್ಪಮಾಲೆಯು ಭಕ್ತಿ - ಭಾವಗಳ ಸಂಕೇತ. ಜ್ಞಾನವನ್ನು ಪಡೆಯುವುದಲ್ಲದೇ ಅದನ್ನು ಆಚರಿಸುವುದು ಗುರುಗಳ ಲಕ್ಷಣ. ಜ್ಞಾನ - ಆಚರಣೆ ಗಳೆಂಬ ಎರಡು ರೆಕ್ಕೆಗಳನ್ನು ಹೊಂದಿ ಬ್ರಹ್ಮಾನಂದ ಭಾವ ಗಳನ್ನು ಮಧುರವಾಗಿ ಉಳಿಯುವ ಮಾತಿನ ಗಿಳಿಯು ಗುರುಗಳ ಸ್ವಭಾವದ ಸ್ವರೂಪದ ಸಂಕೇತ.

### ಈ ವ್ರತಾಚಾರಣೆಗೆ ಸಮಯ ಯಾವುದು?

ಗೋದಾದೇವಿ ಆಚರಿಸಿದ ಈ ವ್ರತಕ್ಕೆ 'ಮಾರ್ಗಶೀರ್ಷ ವ್ರತ'ವೆಂದು ಹೆಸರು. ಮಾರ್ಗಶಿರಮಾಸ ಅದನ್ನೇ ಧನುರ್ ಮಾಸವೆನ್ನುತ್ತಾರೆ. ಈ ವ್ರತವನ್ನು ಈ ತಿಂಗಳಲ್ಲೇ ಏಕೆ ಮಾಡ ಬೇಕು. ಮಾರ್ಗವೆಂದರೆ ಉಪಾಯವೆಂದು ಅರ್ಥ ಶೀರ್ಷ ವೆಂದರೆ ಶ್ರೇಷ್ಠವಾದುದು. ಭಗವಂತನನ್ನು ಹೊಂದಲು ಅದು ಒಳ್ಳೆಯ ಸಮಯ. 'ಪ್ರಣವಸ್ವರೂಪ'ನಾದ ಶ್ರೀರಾಮನು ಧನಸ್ಸನ್ನು ಧರಿಸಿರುತ್ತಾನೆ. ವಿಷ್ಣುವಿಗೂ ಧನಸ್ಸು ಇದೆ. ಧನುರ್ ವಿದ್ಯೆ ಹಿಂದಿನ ಕಾಲದಲ್ಲಿ ಗುರಿಸಾಧನೆಗಾಗಿ ಕಲಿಸುತ್ತಿದ್ದ ವಿದ್ಯೆ. 'ಧನಸ್ಸ'ನ್ನು ಪ್ರಣವವಾಗಿ ಆತ್ಮವನ್ನೇ ಬಾಣವಾಗಿ ಶರೀರವನ್ನೇ ಧನುವಾಗಿಸಬೇಕೆಂದು ತಿಳಿಸಿ ಹೇಳುತ್ತವೆ. ಉಪ ನಿಷತ್ತುಗಳು-



ಪುರಾಣಗಳು. 'ಮಾಸಗಳಲ್ಲಿ ಮಾರ್ಗಶಿರ ಮಾಸವು ನಾನೇ ವತ್ಸ''ಎಂದು ಭಗವದ್ಗೀತೆಯಲ್ಲಿ ಸ್ವತಃ ಪರಮಾತ್ಮನೇ ಘೋಷಿಸಿದ್ದಾನೆ.

ಆದ್ದರಿಂದ ವ್ರತದ ನಿಯಮಗಳು ಅರ್ಥಗರ್ಭಿತ ವಾದುವುಗಳು. ವ್ರತದ ಫಲವು ಶ್ರೇಷ್ಠವಾದುದು. ವ್ರತ ಮಾಡುವ ಸಮಯವೂ ಉನ್ನತವಾದುದು.ಇವೆಲ್ಲವೂ ಮಹತ್ವವನ್ನು ಅಡಗಿಸಿಟ್ಟುಕೊಂಡಿರುವಂಥವೇ. ಆದ್ದ ರಿಂದ 'ತಿರುಪ್ಪಾವೈ' ಸಾಹಿತ್ಯದಲ್ಲಿ ಪ್ರತಿಯೊಂದನ್ನು ಬಿಡಿಸಿ ಹೇಳುವ ಪಾರಮಾರ್ಥಿಕ ರಚನೆಯಾಗಿ ಗುರುತಿಸಲಾಗುತ್ತದೆ.

**ಗೋದಾದೇವಿ: ಭಕ್ತಿಮಾಲೆ - ಕಾಂತಿಯುತ ದಿವ್ಯಕಿಂಕಿಣಿ ಧ್ವನಿ**

ಗೋದಾದೇವಿಯು ಭಕ್ತಿಯ ಕುಸುಮವೆಂದೂ ಬಂಗಾರದ ಕಳಸವೆಂದೂ ಹೇಳಲ್ಪಡುತ್ತಾಳೆ.

''ಶೂಡಿಕ್ಕೊಡುತ್ತ ಶುಡರ್ಕ್ಕುಡಿಯೇ: ತಾಲ್ ಪಾವೈ ಪಾಡಿಯರುಳ ವಲ್ಲ ಪಲ್ ವೆಳ್ತೆಯಾಮ್, ನಾಡಿನಿ ವೆಂಗಡ ವರ್ಕ್ಕೆನ್ನೈವಿದಿಯನ್ದು ವಿಮ್ಮೋತ್ತಮಂ, ನಾಂಗಡವಾ ವಜ್ರಮೇ ನಲ್‌ಗು'' ಎಂದು ಪರಾಶರ ಭಟ್ಟರು ಗೋದಾದೇವಿಯನ್ನು ಸುತ್ತಿಸಿದ್ದಾರೆ.

ಬಂಗಾರು ಕಾಂತಿ (ಭಕ್ತಿ ಜ್ಞಾನದ ಆಗರಗಳು) ಹೊಮ್ಮಿಸುವ ಪುಷ್ಪಮಾಲೆಗಳನ್ನು ಕಟ್ಟಿ ಅದನ್ನು ಶ್ರೀ ರಂಗನಾಥನಿಗೆ ಸಮರ್ಪಿಸಿದ ಓ ಬಂಗಾರ ಬಾಲೆ! ಆದಿಯಲ್ಲಾವಾಗೋ ಜರುಗಿದ ದಿವ್ಯವಾದ ವ್ರತವನ್ನು ಮಧುರ ಗೀತೆಗಳಾಗಿ ಹಾಡಿ,ಎಷ್ಟೋ ಬಗೆಯ ಜ್ಞಾನವನ್ನು ಶಬ್ದರೂಪದಲ್ಲಿ ತಂದ ದಿವ್ಯ ಕಂಕಣಧಾರಿಣಿ! ವೇಂಕಟಾಚಲಪತಿ ನಿನ್ನನ್ನು ಪ್ರೀತಿಯನ್ನೇ ಸಮರ್ಪಿಸೆಂದು ಪ್ರಾರ್ಥಿಸಿದ ರೀತಿಯಲ್ಲೇ ನಿನ್ನ ದಾಸರಾದ ನಮಗೆ ಕೂಡಾ ಆ ವ್ರತ ಭಾಗ್ಯವನ್ನು ತಪ್ಪದೇ ಕಲಿಸು ತಾಯೇ'' ಎಂದು ಅದರ ಸಾರಾಂಶ.

ಗೋದಾದೇವಿ ಶ್ರೀರಂಗೇಶ್ವರನಿಗೆ ಸಮರ್ಪಿಸಿದ ಮಾಲೆ ಭಕ್ತಿ - ಜ್ಞಾನ ಪರಿಮಳಗಳನ್ನು ಸೂಸಿವೆ. ಗೋದಾದೇವಿಯ ಭಕ್ತಿಯ ಮಾಲೆಗೆ ಪ್ರತೀಕಗಳು ಶರೀರದಲ್ಲಿರುವ ಆರು ಚಕ್ರಗಳು (ನಾಡಿಗಳು) ಬಂಗಾರದ ನಾರಿನಿಂದ ಬೆಸೆದುಕೊಂಡಿವೆ. ಜ್ಞಾನ ತತ್ತ್ವವನ್ನು ಹೊಂದುವುದೇ ಬಂಗಾರದ ಎಳೆಯ ಸಂಕೇತ. ಗೋದಾದೇವಿ ಬಂಗಾರದ ಎಲೆಯ ಗುರುತು. ಗೋದಾದೇವಿ ಹಾಡಿದ ಹಾಡುಗಳು (ಶ್ರುತಿಯನ್ನು ಬಗೆಬಗೆಯಾಗಿ ಪ್ರತಿಪಾದಿಸಿದ) ವಿವಿಧವಾದ ಪ್ರತಿಧ್ವನಿಸುವ ದಿವ್ಯ ಶಬ್ದಗಳನ್ನು ಹೊಂದಿರುವುವು. ಅಂದರೆ ಭಕ್ತಿಯ ಸುಮಗಳನ್ನು ಪರಮಾತ್ಮನಿಗೆ ಅರ್ಪಿಸುವ ಅನೇಕ ರೀತಿಗಳು ವಿವಿಧ ಕಂಕಣಗಳ ಧ್ವನಿಯನ್ನು ಹೊಂದಿರಬೇಕು. ಕೈ ಕದಲಿದರೆ ಬಳೆಗಳು ಶಬ್ದ ಹೊಮ್ಮುತ್ತವೆ. ಹೃದಯದ ಸ್ಪಂದನೆಯೆಂಬ ಬಳೆಗಳು ಪ್ರತಿಧ್ವನಿಸುವಂತೆ ಮಾಡಬೇಕು. ಗೋದಾದೇವಿ 'ತಿರುಪ್ಪಾವೈ' ದಿವ್ಯಕಂಕಣಕ್ಕೆ ಸಂಕೇತ. 'ವೇಂ' ಅಂದರೆ ಪಾಪಗಳು 'ಕಟ' ಎಂದರೆ ತೊಲಗಿಸುವವನಾದ್ದರಿಂದ ವೇಂಕಟಾಚಲಪತಿ ಪರಮಾತ್ಮನ ಅದಮ್ಯರೂಪ. ವೇಂಕಟಾದ್ರಿ ಕೂಡಾ ಪರಮಾತ್ಮನನ್ನು ಸೇರುವ ಜ್ಞಾನ ತತ್ತ್ವವೇ.

**ವ್ರತ ಸ್ಥಳ - ಗೋವುಗಳು, ಗೋಶಾಲೆ, ಸಸ್ಯ ಸಂಮೃದ್ಧಿ, ಹಂಸಗಳು, ಹೊಲಗೆದ್ದೆಗಳ ನಾಡು :**

ಶ್ರೀ ಕೃಷ್ಣನ ಸಲುವಾಗಿ ಗೋಪಿಯರು ಮಾಡಿದ ವ್ರತವು ಕಾತ್ಯಾಯಿನಿ ವ್ರತವು.ಗೋಪಿಯರಿರುವ ಸ್ಥಳವೆಂದರೆ ಗೋಶಾಲೆ.(ವ್ರೆಪಲ್ಲೆ ಅಥವಾ ರೆಪಲ್ಲೆ) ಇಲ್ಲವೆ ಹೊಲಗೆದ್ದೆ. ಅಲ್ಲಿ ಗೋವುಗಳು ವಿಫುಲವಾಗಿರುತ್ತವೆ. ಮಳೆ ಧಾರಾಳವಾಗಿ ಸುರಿಯುತ್ತದೆ. ಬೆಳೆಗಳು ಚೆನ್ನಾಗಿ ಬೆಳೆದು ಫಲವನ್ನೀಯುತ್ತವೆ ಹಳ್ಳ ಕೊಳ್ಳೆಗಳಲ್ಲಿ ಹಂಸಗಳು ಈಜುತ್ತಿರುತ್ತವೆ.

ಕಾತ್ಯಾಯಿನಿ ಎಂದರೆ ಪಾರ್ವತಿದೇವಿ. ಸ್ತ್ರೀಯರು ಸೌಭಾಗ್ಯಕ್ಕಾಗಿ ಪಾರ್ವತಿಯನ್ನು ಸ್ಮರಿಸುತ್ತಾರೆ. ಪಾರ್ವತಿ ಶಿವನ ಸಂಗವನ್ನು ಪಡೆದಂತೆ ಗೋದಾದೇವಿ ಕೂಡಾ ಶ್ರೀರಂಗನಾಥನಲ್ಲಿ ಲೀನವಾಗಬೇಕೆಂದು ಕೋರುತ್ತಾಳೆ.

**1) ಗೋಪಾಲರು ಗೋಪಿಯರು:** ಗೋವುಗಳ ಸಂರಕ್ಷಕರು. ಗೋವೆಂದರೆ ವೇದಗಳು, ವೇದರಕ್ಷಣೆ ಮಾಡುವವರೇ ಗೋಪಾಲಕರು.





ಗೋಪಿಕ ಎಂದರೂ ಕಾಪಾಡುವವನೆಂದೇ ಅರ್ಥ. ಗೋಪಾಲಕರು ಗೋವುಗಳನ್ನು ಕಾಪಾಡಿದರೆ ಗೋಪಿಕ ಅವುಗಳನ್ನು ಲಾಲಿಸುತ್ತಾಳೆ. ಹಾಲು - ಮೊಸರು ಸಾತ್ತ್ವಿಕ ತತ್ತ್ವಗಳನ್ನು ಮೀರಿ ಇರುವ ಪರಮಾತ್ಮ ತತ್ತ್ವವೆಂದರೆ ಅದೇ ಬೆಣ್ಣೆ. ಆ ಬೆಣ್ಣೆಯನ್ನು ತೆಗೆಯುವುದು, ಯಜ್ಞ ಕಾರ್ಯಗಳಲ್ಲಿ ಬಳಸಲ್ಪಡುವ ತುಪ್ಪವನ್ನು ತಯಾರಿಸುವುದು ಇದು ಗೋಪಿಕೆಯರ ಕೆಲಸ. ಆದ್ದರಿಂದಲೇ ಗೋಪಿಕೆಯರು ಅದರಲ್ಲಿರುವ ತತ್ತ್ವಗಳೆಂದೆನಿಸುತ್ತಾರೆ. ಶ್ರೀ ಕೃಷ್ಣತತ್ತ್ವ, ನಿರ್ಮಲವಾದ ಮನಸ್ಸಿನಿಂದ ಕೃಷ್ಣ ತತ್ತ್ವವನ್ನು, ಪ್ರಣವವನ್ನು, ಆರಾಧಿಸುವಂತಹ ಕಾರ್ಯವನ್ನು ನಿರ್ವಹಿಸಿದ್ದಾರೆ ಗೋಪಿಕೆಯರು. 'ಗೋಪ್ಯ' ಎಂದರೆ ಅಡಗಿಸಿಡುವುದು. ಪ್ರಣವವನ್ನು ಹೃದಯದಲ್ಲಿ ಅಡಗಿಸಿಟ್ಟವರು ಗೋಪಿಯರು ಮಹೋನ್ನತ ಭಕ್ತರು.

**2)ಯಮುನಾ ನದಿ ಶ್ರೀ ಕೃಷ್ಣನು:** ಶ್ರೀ ಕೃಷ್ಣನು ಯಮುನಾ ನದಿ ತೀರದಲ್ಲಿರುವ ಪ್ರದೇಶದಲ್ಲೇ ಹುಟ್ಟಿ ಬೆಳೆದಿದ್ದಾನೆ. ಕೃಷ್ಣ ಅಂದರೆ ಯಮುನೆ ಎಂದು ಸಹಾ ಹೆಸರು. ಕೃಷ್ಣ ಎಂದರೆ ಕೋಗಿಲೆ, ಕಾಗೆ, ಅಗ್ನಿ, ಕತ್ತಲೆ ಎಂದು ಸಹಾ ಅರ್ಥಗಳಿವೆ. ಕಾಗೆಯಂತಿರುವ ಜೀವಾತ್ಮ ಭಕ್ತಿಯಿಂದ ಕೋಗಿಲೆಯಂತೆ ಪ್ರಣವ ಗಾಯನ ಮಾಡುವಂತೆ ಮಾಡಬಲ್ಲ ಕೃಷ್ಣ . ಪಾಪಗಳನ್ನೆಲ್ಲ ಬೆಂಕಿಯಂತೆ ಭಸ್ಮಮಾಡಬಲ್ಲನು. ಹಾಡಿದರೆ ಕರುಣಿಸಿ ಕತ್ತಲೆಯಂತೆ. ಇದೇ ಕೃಷ್ಣತತ್ತ್ವ. ಕಪ್ಪಾದುದು ಹಾಗೆಯೇ ಪ್ರಸ್ತುತ ಯಮುನಾ ನದಿ ಶ್ರೀ ಕೃಷ್ಣ ತತ್ತ್ವದ ಪ್ರತೀಕ. ಅಲ್ಲಿಯ ನಾಡಿನಲ್ಲೇ ಬೆಳೆದಿದ್ದಾನೆ ಕೃಷ್ಣ. 'ವ್ರೇಯಿ' ಎಂದರೆ ಸಾಯಿಸುವುದು ಎಂದರ್ಥ. ಜನ್ಮ ಬಂಧಗಳನ್ನು ಸಾಯಿಸಿ ಮುಕ್ತಿಯನ್ನೀವ ದೇಶವೇ ವ್ರೆಪಲ್ಲೆ. ಪ್ರಣವ ಸ್ವರೂಪವಾದ ಶ್ರೀ ಕೃಷ್ಣನು ಅಡಗಿದ ತತ್ತ್ವವೇ ವ್ರೆಪಲ್ಲೆ. ನಾಳೆ ಎಂದರೆ ಕುರುಹು. ಪ್ರಣವಸಂಕೇತವೇ ಗುರುತು. ಯಮುನೆ ಅಂದರೆ ಪಾರ್ವತಿ,ನದಿಯೆಂದು ಕೂಡಾ ಅರ್ಥಗಳಿವೆ. ನದಿಯಲ್ಲಿ ಸ್ನಾನ ಮಾಡುವ ಪಾರ್ವತಿಯಂತೆ ಪರಮಾತ್ಮನಲ್ಲಿ ಲೀನವಾಗಲೆಂದು ಮಾಡಿದ ವ್ರತವೇ ಗೋಪಿಕೆಯರು ಮಾಡಿದ ವ್ರತ.

**ಶ್ರೀ ಕೃಷ್ಣನ ಭಗವದ್ಗೀತೆ - ಗೋದಾದೇವಿ ತಿರುಪ್ಪಾವೈ:**

ಅರ್ಜುನನನ್ನು ಒಬ್ಬ ನಾಯಕನನ್ನಾಗಿಟ್ಟುಕೊಂಡು ಕುರುಕ್ಷೇತ್ರ ಯುದ್ಧವನ್ನು ನಿಮಿತ್ತವನ್ನಾಗಿಟ್ಟುಕೊಂಡು ಶ್ರೀಕೃಷ್ಣನು ದ್ವಾಪರಯುಗದಲ್ಲಿ ಸಮಸ್ತ ಮಾನವರಿಗೆ ಮಾನವರು ಕರ್ಮಜ್ಞಾನ ಭಕ್ತಿಯೋಗಗಳನ್ನು ಹೊಂದಲು ಭಗವದ್ಗೀತೋಪದೇಶವನ್ನು ಮಾಡಿದ್ದಾನೆ ಹಾಗೆಯೇ ಗೋದಾದೇವಿ ಕಲಿಯುಗದಲ್ಲಿ ಮಾನವರೆಲ್ಲರೂ ಈ ಕರ್ಮದ ಮೂಲಕ ಭಕ್ತಿ ಮಾರ್ಗದಲ್ಲಿ ಪರಮಾತ್ಮನ ವಿವಿಧ ಅವತಾರಗಳನ್ನು ಪೂಜಿಸಿ ಭಕ್ತಿಯಿಂದ ಮುಕ್ತಿ ಹೊಂದಬಹುದೆಂದು ತಿಳಿಸಿಕೊಟ್ಟಿದ್ದಾಳೆ ಅದಕ್ಕಾಗಿಯೇ, ಗೋಪಿಯರನ್ನು ಅವರ ವ್ರತಗಳನ್ನು ಒಂದು ಕಾರಕವಾಗಿ ಆರಿಸಿಕೊಂಡಿದ್ದಾಳೆ ವೇದೋಪನಿಷತ್ತುಗಳನ್ನು ಉಪನಿಷತ್ತುಗಳ ತತ್ತ್ವಗಳನ್ನು ಸುಂದರವಾಗಿ,ಹಾರವಾಗಿ ಪೋಣಿಸಿ ಮಧುರವಾಗಿ ಹಾಡುಗಳನ್ನಾಗಿ ಹಾಡಿ ಶ್ರೀಕೃಷ್ಣನನ್ನು ಹೊಂದಿದ್ದಾಳೆ. ನೀವೂ ಸಹ ಇಹಪರ ಸೌಖ್ಯಗಳನ್ನು ಹೊಂದಿರಿ ಹೇ ಮಾನವಗಳಿರಾ! ಎಂದಿದ್ದಾಳೆ. ಸಂಪೂರ್ಣ ಗೀತೆಯ ತತ್ತ್ವವನ್ನು 'ತಿರುಪ್ಪಾವೈ' ಗ್ರಂಥವಾಗಿ ಉಳಿದಿದೆ. ಗೀತೆಯು ಬೋಧಿಸಿರುವ ನಿಷ್ಕಾಮ ಕರ್ಮ ತತ್ತ್ವವನ್ನು ಭಕ್ತಿ - ಜ್ಞಾನ ಕರ್ಮಯೋಗಗಳನ್ನು ಒಬ್ಬ ಜೀವಿಯು ಪರಮಾತ್ಮನನ್ನು ಹೊಂದಲು ಮಾಡುವ ಕರ್ಮ ತತ್ತ್ವಗಳು. ಪರಮಾತ್ಮನ ವಿಭೂತಿ ತತ್ತ್ವಗಳು, ಭಗವಂತನ ಅವತಾರ ತತ್ತ್ವಗಳು, ಧರ್ಮರಕ್ಷಣೆ, ಇವುಗಳನ್ನೆಲ್ಲಾ ಮೀರಿ ಜೀವಿಗಳ ಮೇಲೆ ಪರಮಾತ್ಮನಿಗಿರುವ ಕರುಣೆ, ಇವುಗಳನ್ನೆಲ್ಲವನ್ನು ಮಧುರವಾಗಿ ಗಾಯನ ಮಾಡಿ ಅವತಾರಗಳ ಪ್ರಾಮುಖ್ಯತೆಯನ್ನು ಚಿತ್ತರಿಸುತ್ತಿದೆ 'ತಿರುಪ್ಪಾವೈ' ಗ್ರಂಥ.






-ಬಿ.ಆರ್. ಶ್ರೀಕಂಠಯ್ಯ
- 9449457684

(ಕಳೆದ ಸಂಚಿಕೆಯಿಂದ ಮುಂದುವರೆಯುವುದು)

ವಿವಾಹದ ಕಾರ್ಯಕ್ರಮದಲ್ಲಿ, ಮೇಲಿನ ಪೂಜೆಯ ನಂತರ, ಮುಖ್ಯವಾದ ಘಟ್ಟಗಳು -

**ಸಮಾವರ್ತನೆ; ಕಾಶಿಯಾತ್ರೆ; ನಿರೀಕ್ಷಣೆ**

ಕಂಕಣಧಾರಣೆ; ಕನ್ಯಾದಾನ; ಅಕ್ಷತಾರೋಹಣ; ಮಾಂಗಲ್ಯ ಧಾರಣೆ; ಪಾಣಿಗ್ರಹಣ ; ಸಪ್ತಪಧಿ; ಲಾಜ ಹೋಮ; ನಾಕಬಲಿ ಅಥವಾ ನಾಗೋಲಿ ಮತ್ತು ಗರ್ಭಾಧಾನ; ವಸಂತೋತ್ಸವ; ಈ ಮೇಲಿನ ಕಾರ್ಯಕ್ರಮವನ್ನು ಹಿರಿಯರ ಅನುಮತಿ ಮತ್ತು ಸಂಪ್ರದಾಯದಂತೆ ಪುರೋಹಿತರು ನೆರವೇರಿಸುತ್ತಾರೆ.

ಕನ್ಯಾನಿರೀಕ್ಷಣೆ - ಅವರವ ಸಂಪ್ರಾಯದಂತೆ, ಹುಡುಗನು ಪುರೋಹಿತರು ಕೊಟ್ಟ "ಜೀರಿಗೆ ಮತ್ತು ಬೆಲ್ಲವನ್ನು" ಕೈಯಲ್ಲಿ ಹಿಡಿದು "ವೇಣುಪಾತ್ರೆ" (ಬಿದಿರಿನ ತಟ್ಟೆ) ಯ ಮೇಲೆ ನಿಂತು "ಗೌರಿ ಪೂಜೆ"ಮಾಡುತ್ತಿರುವ ತನ್ನ ಮುಂದಿನ ಜೀವನ ಸಂಗಾತಿಯ ಮಿಲನಕ್ಕಾಗಿ ಕಾಯುತ್ತಿರುತ್ತಾನೆ. ಮುಹೂರ್ತದ ಸಮಯಕ್ಕೆ ಅನುಗುಣವಾಗಿ ಪುರೋಹಿತರ ಆದೇಶದಂತೆ, ಹುಡುಗಿಯ ಸೋದರಮಾವ ವಧುವನ್ನು ವಿವಾಹಮಂಟಪಕ್ಕೆ ಕರೆತಂದು ವರನ ಮುಂದಿರುವ "ಅಂತರ್ಪಟ" (ವರ ಮತ್ತು ವಧುವಿನ ಮಧ್ಯೆ ಇರುವ ಪರದೆ)ದ ಮುಂಭಾಗದಲ್ಲಿ, ವಧುವಿಗೆ ಜೀರಿಗೆ ಬೆಲ್ಲ ಕೊಟ್ಟು ಸಿದ್ಧಪಡಿಸಿದ ವೇಣುಪಾತ್ರೆಯ ಮೇಲೆ ನಿಲ್ಲಿಸುತ್ತಾನೆ. ಇಲ್ಲಿನ ಸಂಪ್ರದಾಯ ಅವರವರ ದೇಶಾಚಾರ ಮತ್ತು ಪದ್ಧತಿಯನ್ನು ಅವಲಂಭಿಸಿರುತ್ತಾರೆ. ಈ ಮುಹೂರ್ತದ ನಿರೀಕ್ಷಣೆ ಸಂದರ್ಭದಲ್ಲಿ ಪುರೋಹಿತರು ಮತ್ತು ಅವರ ವೃಂದ ಸುಶ್ರಾವ್ಯವಾಗಿ ಚೂರ್ಣಿಕಾ, ಮಂಗಳಾಷ್ಟಕವನ್ನು ಪಠಿಸುತ್ತಾರೆ. ಇದನ್ನು ಕೇಳಲು ಬಹಳ ಚೆನ್ನಾಗಿರುತ್ತದೆ. ಈ ಸಂದರ್ಭದಲ್ಲಿ ಅಂತ ರ್ಪಟದ ಮಧ್ಯೆ ಇರುವ ವಧುವರರು ತಮ್ಮ ಮನಸ್ಸಿನಲ್ಲಿ"ಒಳ್ಳೆಯ ಸ್ನೇಹಿತರಂತೆ, ಜೀವನ ಸಂಗಾತಿಗಳಂತೆ, ಸುಖ/ಸಂತೋಷಗಳಲ್ಲಿ ಬಾಗಿಯಾಗಿ ಪತಿ ಪತ್ನಿಯರಾಗುವ ಚಿತ್ರವನ್ನು" ಮೆಲುಕು ಹಾಕುತ್ತಿರುತ್ತಾರೆ. ಮುಹೂರ್ತ ಸಮೀಪಿಸಿದ ಕಾಲದಲ್ಲಿ ವಧು-ವರರಿಗೆ ಪುರೋಹಿತರು ತಮ್ಮ ಕೈಲ್ಲಿರುವ ಜೀರಿಗೆ ಬೆಲ್ಲವನ್ನು ಒಂದೇ ಕಾಲದಲ್ಲಿ ವಧು ವರನ ತಲೆಯ ಮೇಲೆ ಹಾಗೂ ವರನು ವಧುವಿನ ತಲೆಯ ಮೇಲೆ ಹಾಕುವಂತೆ ಹೇಳುತ್ತಾರೆ. ಇದೇ "ಸುಲಜ್ಞ ಮತ್ತು ಶುಭ ಮುಹೂರ್ತ". ಈ ಕಾಲದಲ್ಲಿ ಅಂತರ್ಪಟ ತೆಗೆಯಲಾಗುತ್ತದೆ. ಇದೇ ಬಹು ಮುಖ್ಯವಾದ ಘಟ್ಟ.ಈ ಶುಭಗಳಿಗೆಯಲ್ಲಿ ಇಬ್ಬರ ದೃಷ್ಟಿ (ಮೊದಲು ಬಹಳ ಸಾರಿ ನೋಡಿದ್ದರೂ, ಆ ದೃಷ್ಟಿಯೇ ಬೇರೆ) ಒಂದಾಗುತ್ತದೆ. ಇದು ಜೀವನದಲ್ಲಿ ಮರೆಯಲಾರದ ಸನ್ನಿವೇಶ ಇದನ್ನು ಸದಾ ಜ್ಞಾಪಿಸಿಕೊಳ್ಳುತ್ತಿರುತ್ತಾರೆ.

ಈ ವಿವಾಹದ ಕಲಾಪದ ಮಧ್ಯದಲ್ಲಿ, ಪುರೋಹಿತರು ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ವೇದಮಂತ್ರದ ಮಹತ್ವ ಮತ್ತು ಪ್ರಾಮುಖ್ಯತೆಯನ್ನು ತಿಳಿಸಬೇಕು. ಇದರಿಂದ ವಧು ವರರಲ್ಲಿ, ಇದರ ಬಗ್ಗೆ ಗೌರವ ಹೆಚ್ಚಾಗುತ್ತದೆ, ಹಾಗೂ ವಿವಾಹದ ಪ್ರಾಮುಖ್ಯತೆಯ ಅರಿವಾಗುತ್ತದೆ. ಸುಮ್ಮನೆ ಮಂತ್ರೋಚಾರಣೆ ಮಾಡಿದರೆ ಅದರ ಪರಿಣಾಮ ಹೆಚ್ಚು ಇರುವುದಿಲ್ಲ. ಸಾಮಾನ್ಯ ಅರ್ಥವನ್ನು ಹೇಳಿದರೆ, ಅವರಿಗೆ "ವೇದವಾಣಿ" ಅಥವಾ "ಋಷಿವಾಕ್"ನ್ನು ಅರ್ಥಮಾಡಿಕೊಂಡು ಅದರ ಉಪಯುಕ್ತತೆಯನ್ನು ಪಡೆದು ಪಾಲಿಸಲು ಸಾಧ್ಯವಾಗುತ್ತದೆ. ನಮ್ಮ ಋಷಿ ಪರಂಪರೆ ನಮ್ಮ ನೆಮ್ಮಧಿ ಮತ್ತು ಸುಖಕ್ಕಾಗಿ ಕೊಟ್ಟ ಕೊಡುಗೆ ಅಪಾರ. ಈಗಿನ ಪರಿಸ್ಥಿತಿಯಲ್ಲಿ ಇದು ಬಹಳ ಮುಖ್ಯವಾದುದು ಸುಮ್ಮನೆ ಇದು ವೇದದಲ್ಲಿ ಹೇಳಿದೆ ಎಂದರೆ ಅದಕ್ಕೆ ಬೆಲೆಯಿರುವುದಿಲ್ಲ.ಅವರಿಗೆ ಸಾಮಾನ್ಯ ಅರ್ಥವನ್ನು ತಿಳಿಸಿದರೆ "ವೇದವಾಕ್ಯ" ಕ್ಕೆ ಹೆಚ್ಚಿನ ನಂಬಿಕೆ ಮತ್ತು ಮಹತ್ವ ಬರುತ್ತದೆ. ಕೆಲವು ಮಂತ್ರಗಳನ್ನು ವರ ಅಥವಾ ವಧು ಹೇಳಬೇಕು.ಆದರೆ ಸಮಯದ ಅಭಾವ ಮತ್ತು ಅವಸರ,ತಾಳ್ಮೆಯಿಲ್ಲದೆ, ತರಾತುರಿಯಿಂದ,ಪುರೋಹಿತರೇ ಮಂತ್ರವನ್ನು ಹೇಳಿ ಬಿಡುತ್ತಾರೆ.ಇದನ್ನು ನಾವು ಯೋಚಿಸಬೇಕು.

ಕನ್ಯಾದಾನ - ಹಿರಿಯರ ಅಪ್ಪಣೆ ಪಡೆದು, ಕನ್ಯೆಯ ಕೈಬೊಗಸೆಯನ್ನು ವರನ ಕೈಲ್ಲಿಟ್ಟು ವಧುವಿನ ತಂದೆ, ತನ್ನ ಧರ್ಮಪತ್ನಿಯಿಂದ ಎರಡು ಉದ್ದರಣೆ ಗಂಗಾಜಲವನ್ನು ಹಾಕಿಸಿಕೊಂಡು ತುಳಸಿದಳ ಮತ್ತು ವಿಗ್ರಹವನ್ನಿಟ್ಟು ಕನ್ಯೆಯನ್ನು ದಾನಮಾಡುತ್ತಾನೆ. ಎಲ್ಲಾ ಕಾಲದಲ್ಲಿ ದಾನಮಾಡುವಾಗ "ನಮಮ" ಎಂದು ಹೇಳುತ್ತಾರೆ. ನಮಮ ಅಂದರೆ ಈ ದಾನ ನನ್ನದಲ್ಲ ನಿನಗೆ ಸೇರಿದ್ದು. ಆದರೆ ಕನ್ಯಾದಾನ ಮಾಡುವಾಗ "ನಮಮ" ಹೇಳುವುದಿಲ್ಲ. ಈ ಕನ್ಯಾದಾನ ಸಮಯ ಒಂದು ರೀತಿಯ ಸಂದಿಗ್ಧ ಪರಿಸ್ಥಿತಿ ಇರುತ್ತದೆ, ಎಲ್ಲರೂ ನೋಡಿರುತ್ತೇವೆ. ಎಲ್ಲರ ಕಣ್ಣಿನಲ್ಲಿ ತಮಗೆ ತಿಳಿಯದೆಯೆ"ಕಣ್ಣು" ತೇವವಾಗುತ್ತದೆ. ಕನ್ಯಾದಾನವನ್ನು ಮಾಡುವಾಗ ಕನ್ಯೆಯ ಪಿತಾ ವರನಿಗೆ ಹೇಳುತ್ತಾನೆ. "ಧರ್ಮೇಚ, ಅರ್ಥೇಚ, ಕಾಮೇಚ ನಾತಿ ಚರಿತವ್ಯಾತ್ವಯೇಯಮ್"ಇದಕ್ಕೆ ವರ "ಪ್ರತಿಜ್ಞೆ"ಯಂತೆ "ನಾತಿಚರಾಮಿ" ಎಂದು ಉತ್ತರಿಸುತ್ತಾನೆ. ಹಾಗೂ ಈ ದಾನದಿಂದ ನಾನು (ಧನ್ಯೋಸ್ಮಿ) ಧನ್ಯನಾದೆ. ಕನ್ಯಾದಾನ ಸಮಯದಲ್ಲಿ, ವಧು ಮತ್ತು ವರರ ಗೋತ್ರ ಪ್ರವರ ಮತ್ತು ಅವರ ಮುತ್ತಜ್ಜ, ಅಜ್ಜ ಮತ್ತು ತಂದೆಯ ಹೆಸರುಗಳನ್ನು ಆಯಾಯ ಕಡೆಯ

ಪುರೋಹಿತರು ತಮ್ಮ ಸಮೂಹದೊಂದಿಗೆ ಇಂತಹವರ ಮರಿಮಗಳು, ಮೊಮ್ಮಗಳು ಮತ್ತು ಮಗಳು (ಪ್ರಪೌತ್ರಿ, ಪೌತ್ರಿ ಮತ್ತು ಪುತ್ರಿ)ಎಂದು ಸರತಿಯಾಗಿ ಪಠಿಸುತ್ತಾರೆ. ಇದು ಬಹಳ ಮುಖ್ಯವಾದುದು. ಇದನ್ನು ಕೇಳುವಾಗ ಅಲ್ಲಿಯಿರುವ ಹಿರಿಯರು ಒಂದು ರೀತಿಯ ಆನಂದವನ್ನು ಅವರ ಕಣ್ಣಿನಲ್ಲಿ ನೋಡಬಹುದು.

ಮದುವೆಯ ಮಂಟಪದಲ್ಲಿ ವಧುವು ಲಕ್ಷ್ಮೀ ಮತ್ತು ವರನು ನಾರಾಯಣ ಸ್ವರೂಪದಲ್ಲಿರುತ್ತಾರೆ. ಈ ಮಂಟಪ ದಲ್ಲಿ, ಸಾಕ್ಷಾತ್ "ಲಕ್ಷ್ಮೀನಾರಾಯಣ ಅಥವಾ, "ಪಾರ್ವತೀ-ಪರಮೇಶ್ವರರ ವಿವಾಹ ನಡೆಯುತ್ತದೆ ಎಂಬ ಭಾವನೆ ಇರ ಬೇಕು. ಮಂಟಪದಲ್ಲಿ, ವಿವಾಹ ಕಾಲದಲ್ಲಿ ವಧು - ವರರು ಸಾಕ್ಷಾತ್ "ಲಕ್ಷ್ಮೀ - ಶ್ರೀಮನ್‌ನಾರಾಯಣ ಸ್ವರೂಪರು. "ಲಕ್ಷ್ಮೀ ಸ್ವರೂಪ ಕನ್ಯಾಯ, ನಾರಾಯಣಸ್ಯ ವರಾಯ" ಎಂದೇ ಪುರೋಹಿತರು ಸಂಬೋಧಿಸುತ್ತಾರೆ. ಈ ಪವಿತ್ರ ವಾದ ಕಲ್ಯಾಣ ವೇದಿಕೆಯನ್ನು ಪ್ರವೇಶಿಸುವಾಗ ಪಾದರಕ್ಷೆ ಹಾಕಿಕೊಂಡು ಪ್ರವೇಶಿಸಬಾರದು. ವಧುವರನ ಕಡೆಯ ಹಿರಿಯ ಐದು ದಂಪತಿಗಳು ಪ್ರದಕ್ಷಿಣೆಯಾಗಿ ಐದು ಸಾರಿ ಸುತ್ತಿದ ಹಸಿದಾರ ಮತ್ತು ಅದರ ಜೊತೆ ಕಂಬಳಿ ದಾರವನ್ನು ಸೇರಿಸಿ ಪುರೋಹಿತರು ಕಂಕಣವನ್ನು ಸಿದ್ಧಪಡಿಸುತ್ತಾರೆ. ನಂತರ ಇದು ವಧುವರರ ಕೈಗೆ ಕಟ್ಟಲಾಗುತ್ತದೆ. ಇದು "ರಕ್ಷಾಕವಚ" ಈ ಪವಿತ್ರವಾದ ಕವಚವು ವಿವಾಹ ಕಲಾಪವಾಗುವವರೆಗೂ ಕೈಯಲ್ಲಿ ಇರಬೇಕು ನಂತರ "ವಿಸರ್ಜನೆ" ಮಾಡಿ ಹಾಲಿನಲ್ಲಿ ನೆನೆಸುತ್ತಾರೆ. ಕಂಕಣ ಧರಿಸಿರುತ್ತಾರೆ. ಅದರಿಂದ ಕಂಕಣ ವಿಸರ್ಜನೆಯಾಗುವ ವರೆಗೂ ''ಕೈ ಕುಲುಕುವುದು'' ನಿಶಿದ್ಧ. ಇದನ್ನು ಪಾಲಿಸಬೇಕು. ಆ ಸಂದರ್ಭ ಬಂದಾಗ ನಮ್ಮ ಸಂಸ್ಕೃತಿ ಯಂತೆ ಎರಡು ಕೈಯಿಂದ ನಮಸ್ಕರಿಸಬಹುದು. ಹೇಗೆ ಶ್ರೀ ಶ್ರೀನಿವಾಸನ ಕಲ್ಯಾಣ, ಸೀತಾ ಕಲ್ಯಾಣ, ಇಂತಹ ಸಂದರ್ಭ ಗಳಲ್ಲಿ,ನಾವು ಪಾವಿತ್ರ್ಯತೆಯಿಂದ ಹೋಗುತ್ತೇವೆಯೊ ಆ ರೀತಿ ಮಂಟಪ ಪ್ರವೇಶಿಸ ಬೇಕು. ನಾವು ನಿಜವಾಗಿಯೂ ಇದನ್ನು ಪಾಲಿಸುತ್ತಿದ್ದೇವೆಯೆ ಎಂಬುದನ್ನು ನಾವೇ ಯೋಚಿಸಬೇಕು. ನಾವು ಕಲ್ಯಾಣ ಮಂಟಪದಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಮಂಗಳ ದ್ರವ್ಯ,ಪೇಟ, ಬಾಸಿಂಗ ಇತ್ಯಾದಿ ಧರಿಸಿರುವ ವಧು-ವರರ ಮುಖದ ಕಾಂತಿಯು ಬಹಳ ಸುಂದರವಾಗಿರುತ್ತದೆ ಹಾಗೂ ಅವರಲ್ಲಿ ಒಂದು ರೀತಿಯ ದೈವೀಕಳೆಯನ್ನು ನಾವು ಕಾಣಬಹುದು.

ಅಕ್ಷಾತರೋಹಣೆ - ಈ ಕಾರ್ಯವಿಧಾನದಲ್ಲಿ, ವಧು ಮತ್ತು ವರರ ಎರಡು ಕೈಗಳ ಬೊಗಸೆಯನ್ನು ಪ್ರತಿ ಸಾರಿ ತುಪ್ಪದಿಂದ ಸವರಿ, ಬೊಗಸೆಯ ತುಂಬ ನೆನೆಸಿ ಒಣಗಿದ ಅಕ್ಕಿಯನ್ನು ಒಬ್ಬೊಬ್ಬರ ತಲೆಯ ಮೇಲೆ ಒಬ್ಬರಾದ ಮೇಲೆ ಒಬ್ಬರು ಧಾರೆಯಂತೆ ಅಕ್ಕಿಯನ್ನು ತಲೆಯ ಮೇಲೆ ಹಾಕುತ್ತಾರೆ. ಈ ದೃಶ್ಯ ನೋಡಲು ಬಹಳ ಸುಂದರ ವಾಗಿರುತ್ತದೆ. ಈ ಮೂರು ಸಾರಿ ಹಾಕುವಾಗ ವಧುವು - ಭಾಗ್ಯ, ಸಂಪತ್ತು ಮತ್ತು ಸಂತಾನಭಾಗ್ಯಕ್ಕಾಗಿ ಮತ್ತು ವರನು ಯಜ್ಞ, ಧರ್ಮ ಮತ್ತು ಯಶಸ್ಸು ಅಥವಾ ಅಭ್ಯುದಯಕ್ಕಾಗಿ ಹಾಕುತ್ತಾರೆ. ಈ ಕಾಲದಲ್ಲಿ ಪುರೋಹಿತರು ಇಬ್ಬರಿಗೂ ಬೇರೆ-ಬೇರೆ ರೀತಿಯ ಮಂತ್ರವನ್ನು ಹೇಳಿಕೊಡುತ್ತಾರೆ. ಹೆಚ್ಚಿನಸಾರಿ ಹಾಕುವುದು ವೀಡಿಯೋ ಅಥವಾ ಫೋಟೋಗಾಗಿ. ಈ ಸಂದ ರ್ಭದಲ್ಲಿ ಸುವಾಸಿನಿಯರು ಎರಡು ಪಾರ್ಶ್ವದಲ್ಲಿ ಮೂವತ್ತೆರಡು ತಂಬಿಟ್ಟಿನ ದೀಪಗಳ ಸಹಿತ ನಿಂತಿರುತ್ತಾರೆ.

ಮಾಂಗಲ್ಯ ಧಾರಣೆ-ಬಲ್ಲವರು ಹೇಳುತ್ತಾರೆ.' ಮಾಂಗಲ್ಯ ಧಾರಣೆ"ಕಲ್ಪಸೂತ್ರದಲ್ಲಿಲ್ಲ. ಆದರೆ ಕೆಲವು ತಲತಲಾಂತರ ಗಳಿಂದ,ಈ ಪದ್ಧತಿ ಚಾಲ್ತಿಯಲ್ಲಿದೆ. ಆದರೆ ಇದು ಸೌಮಾಂಗಲ್ಯ ಸೂಚಕ. ಮಾಂಗಲ್ಯದ ಗಾತ್ರ, ಆಕಾರ ಅವರವರ ಪದ್ಧತಿ, ಪಂಗಡ ಮತ್ತು ದೇಶಾಚಾರವನ್ನು ಅವಲಂಭಿಸಿರುತ್ತದೆ. ಮಾಂಗಲ್ಯ ಧಾರಣೆಯ ಮುಂಚೆ, ಹಿರಿಯರೆಲ್ಲರು ವಧುವಿಗೆ 'ದೀರ್ಘಸುಮಾಂಗಲ್ಯ" ವನ್ನು ಆಶೀರ್ವದಿಸುತ್ತಾರೆ. ನಂತರ ವರನು ಮಂಗಳವಾದ್ಯ, ವೇದ ಘೋಷಣೆಯೊಂದಿಗೆ ವಧುವಿನ ಕಂಠದಲ್ಲಿ ಮಾಂಗಲ್ಯವನ್ನು ಕಟ್ಟಿ ಮೂರು ಗಂಟುಗಳನ್ನು ಹಾಕಿ ಗಂಟಿಗೆ ಅರಶಿನ ಕುಂಕುಮವನ್ನಿಟ್ಟು ಆಶೀರ್ವದಿಸುತ್ತಾನೆ. ಹಾಗೂ, ಹಿರಿಯ ಸುಮಂಗಲೀಯರು, ಆ ಮಾಂಗಲ್ಯದ ಗಂಟಿಗೆ ಅರಸಿನ ಕುಂಕುಮವನ್ನಿಟ್ಟು ದೀರ್ಘಸುಮಂಗಲಿ ಯಾಗಿರು ಎಂದು ಆಶೀರ್ವದಿಸುತ್ತಾರೆ. ನೆಂಟರು ಮತ್ತು ಅನೇಕರು ಬಹಳ ದೂರದ ಪ್ರದೇಶಗಳಿಂದ ಬಂದು ಈ ಪವಿತ್ರವಾದ "ವಿವಾಹ ಮಹೋತ್ಸವ" ವನ್ನು ನೋಡಿ ಆನಂದ ದಿಂದ ಆಶೀರ್ವದಿಸುತ್ತಾರೆ.

ಪ್ರಧಾನ ಹೋಮ (ಲಾಜ ಹೋಮ) - ಈ ಹೋಮದ ನಂತರವೆ ವಧುವರರು ದಂಪತಿಗಳಾಗುತ್ತಾರೆ. ಈ ಹೋಮದ ಕಾರ್ಯದಲ್ಲಿ, ವಧುವಿನ ಸಹೋದರ ಇಬ್ಬರಿಗೂ ಭತ್ತದ ಅರಳನ್ನು (ಲಾಜ) ಇವರ ಬೊಗಸೆಯಲ್ಲಿ ಹಾಕುತ್ತಾನೆ. ಲಾಜವನ್ನು ಅರ್ಯಮಾಗ್ನಿ, ವರುಣಾಗ್ನಿ, ಮತ್ತು ಪೂಷಾಗ್ನಿ, ಈ ಮೂರು ರೂಪದಲ್ಲಿರುವ ಯಗ್ನೇಶ್ವರನಿಗೆ ಮಂತ್ರ ಪೂರ್ವಕವಾಗಿ...ಸ್ವಾಹಾ, ಅಗ್ನೆಯೇ ಇದಂ ನಮಮ" ಅರ್ಪಿಸುತ್ತಾರೆ. ಈ ಅಗ್ನಿಯನ್ನು ಗೃಹ್ಯಾಗ್ನಿಯಾಗಿ ಸ್ವೀಕರಿಸಿ, ದಂಪತಿಗಳು ಈ ಗೃಹ್ಯಾಗ್ನಿಯನ್ನು ನಂದದೆ ಕಾಪಾಡಿಕೊಂಡು ಹೋಮ ಮತ್ತು ಯಜ್ಞಗಳಿಗೆ ಉಪಯೋಗಿಸಬೇಕು. ಈಗಿನ ಪರಿಸ್ಥಿತಿಯಲ್ಲಿ ಇದು ಸಾಧ್ಯವಾಗುವುದಿಲ್ಲ. ಹಿಂದಿನ ಕಾಲದಲ್ಲಿ ಇದು ನಡೆಯುತ್ತಿತ್ತು. ಈಗಲೂ ಅನೇಕರು ಇದನ್ನು ಕಾಪಾಡಿ ಕೊಂಡು ಬರುತ್ತಿದ್ದಾರೆ.

ಪಾಣಿ ಗ್ರಹಣ - ಈ ಕಾರ್ಯದಲ್ಲಿ ಹೆಂಡತಿಯ ಕೈಬೆರಳುಗಳನ್ನು ಹಿಡಿದು ಅಗ್ನಿಗೆ ಪ್ರದಕ್ಷಿಣೆ. ಸಾಮಾನ್ಯವಾಗಿ ಹೇಳುವ ಮಾತನ್ನು ಕೇಳಿದ್ದೇನೆ. ಪತಿಯ ಬಲಗೈ ಬೆರಳುಗಳನ್ನು ಹಿಡಿದರೆ, ಹೆಣ್ಣುಮಕ್ಕಳ ಸಂತತಿ ಜಾಸ್ತಿಯಾಗಿರುತ್ತದೆ, ಹಾಗೆಯೆ ಬಲಗೈಯಿನ ಹೆಬ್ಬೆರಳನ್ನು ಹಿಡಿದುಕೊಂಡರೆ, ಗಂಡು ಸಂತತಿ ಪ್ರಾಪ್ತಿಯಾಗುತ್ತದೆ ಎಲ್ಲಾ ಬೆರಳುಗಳನ್ನು ಹಿಡಿದುಕೊಂಡರೆ ಹೆಣ್ಣು ಮತ್ತು ಗಂಡು ಸಂತಾನಗಳಾಗುತ್ತದೆ. ಇದಕ್ಕೆ ವೈಜ್ಞಾನಿಕ ಕಾರಣ ವಿರಬಹುದು, ಇದನ್ನು ವಿದ್ವಾಂಸರು, ಪಂಡಿತರು ಸಂಶೋಧನೆ ಮಾಡಿರಬಹುದು.



ಒಂದು ಕ್ರಿಯೆಯು ಇಬ್ಬರಲ್ಲಿ ಆತ್ಮೀಯತೆಯನ್ನು ಬೆಳೆಸುತ್ತದೆ. ಇಲ್ಲಿ ಭೇದಭಾವ ಇರುವುದಿಲ್ಲ ಅನ್ಯೋನ್ಯತೆ ಮೂಡುತ್ತದೆ.ನಾನು ಓದಿದಂತೆ, ಈ ಕಾಲುಂಗರವನ್ನು ಧರಿಸುವುದರಿಂದ ಗರ್ಭಕೋಶ ಮತ್ತು ಬೆರಳಿಗೆ ಸಂಬಂಧವಿರುತ್ತದೆ,ಹಾಗೂ ಮಾಸಿಕಸ್ರಾವ ಕಾಲದಲ್ಲಿ ತೊಂದರೆಯಿರುವುದಿಲ್ಲ.ಬೆಳ್ಳಿ ಅಥವಾ ಪಂಚಲೋಹದ ಕಾಲುಂಗುರದಿಂದ ನಾಡಿಯಬಡಿತ ಹಿಡಿತದಲ್ಲಿರುತ್ತದೆ. ಧಾರ್ಮಿಕವಾಗಿ "ಕುಂಡಲನಿ" ಶಕ್ತಿ ಜಾಗೃತವಾಗಿಸುತ್ತದೆ, ಹಾಗೂ ಶಕ್ತಿವಂತರಾಗಿರುತ್ತಾರೆ. ಆದರೆ, ಈಗಿನ ದಿನಗಳಲ್ಲಿ, "ಫ್ಯಾಷನ್" ಗಾಗಿ ಎಲ್ಲಾ ಕಾಲಿನ ಬೆರಳುಗಳಿಗೆ ವಿವಿಧ ಲೋಹದ ಕಾಲುಂಗುರವನ್ನು ಹಾಕಿಕೊಳ್ಳುವುದನ್ನು ಕಾಣಬಹುದು. ಇದು ದೇಹದ ಮೇಲೆ ಯಾವ ಪರಿಣಾಮ ಬೀಳುತ್ತದೆ ಎಂಬುದನ್ನು ಬಲ್ಲವರು ಹೇಳಬೇಕು. ಆರೋಗ್ಯದ ದೃಷ್ಟಿಯ ಜೊತೆಗೆ,ಇದು ವಿವಾಹವಾದ ಗೃಹಿಣಿಯ ಸಂಕೇತ,ಹಾಗೆಯೇ, ಮಿಕ್ಕ ಗೃಹಿಣಿಯ ಆಭರಣಗಳು, ಐದು ಮುತ್ತುಗಳು - ಕಿವಿಗಳ ಓಲೆ, ಕೈಬಳೆಗಳು, ಮೂಗುಬೊಟ್ಟು, ಮಾಂಗಲ್ಯ ಕಾಲುಂಗರ,ಇವು ಮುತ್ತೈದೆಯ ಲಕ್ಷಣಗಳು.ಈ ಅಮೂಲ್ಯವಾದ ವಸ್ತುಗಳನ್ನು ಧರಿಸುವುದು ಶೋಕಿಗಲ್ಲ ಇದಕ್ಕೆ ಧಾರ್ಮಿಕ ಹಿನ್ನೆಲೆ ಜೊತೆಗೆ ವೈಜ್ಞಾನಿಕ ಕಾರಣಗಳೂ ಇವೆ. ಹಣೆಗೆ ಕುಂಕುಮ, ಸಿಂಧೂರವನ್ನು ಬೈತಲೆಯಲ್ಲಿ ಧರಿಸುವುದರಿಂದ ಉತ್ತಮ ಪರಿಣಾಮಗಳಿರುತ್ತದೆ. ಆಕಾಶದಲ್ಲಿ ಅರುಂಧತಿ ನಕ್ಷತ್ರವನ್ನು ಪತಿಯು ಪತ್ನಿಗೆ ತೋರಿಸುತ್ತಾನೆ. ಇದು ವಸಿಷ್ಠರ ಮಹಾ ಪತಿವ್ರತೆಯಾದ ಪತ್ನಿ ಮಹಾಮಾತೆಯಾದ ಅರುಂಧತಿ ನಕ್ಷತ್ರ. ಇದು ಸ್ಥಿರ ಮತ್ತು ಧ್ರುವನಕ್ಷತ್ರ. ಇದರಂತೆ, ನೀನು ನನ್ನ ಜೀವನದಲ್ಲಿ ಸ್ಥಿರವಾಗಿರು. ಆಕೆಯ ಆಶೀರ್ವಾದದಿಂದ ನಿನ್ನ ಪಾತಿವ್ರತ್ಯ, ನಮ್ಮ ದಾಂಪತ್ಯ ಜೀವನ ಸುಖಮಯವಾಗಿರಲಿ ಎಂದು ಪ್ರಾರ್ಥಿಸುತ್ತಾರೆ.

**ಸಪ್ತಪದಿ -** ಈ ಸಪ್ತಪದಿಯ ಕಾರ್ಯಕ್ರಮದಲ್ಲಿ ವರುಣಕಲಶವನ್ನು ಹೋಮಕುಂಡದ ಈಶಾನ್ಯ ಭಾಗ ದಲ್ಲಿಟ್ಟು ಅದಕ್ಕೆ ಪೂಜೆಯನ್ನು ಸಲ್ಲಿಸಿ, ಅಗ್ನಿಯ ಸಮ್ಮುಖದಲ್ಲಿ ಏಳು ಅಕ್ಕಿಯ ಸಣ್ಣ ರಾಶಿಯನ್ನು, ಪತಿಪತ್ನಿಯರು ಕೈ ಹಿಡಿದು ಕೊಂಡು ಒಂದೊಂದು ರಾಶಿಯ ಮೇಲೆ ನಿಂತು ಮಂತ್ರವನ್ನು ಹೇಳುತ್ತಾ ಏಳು ಅಕ್ಕಿಯ ಗುಡ್ಡೆಗಳನ್ನು ಇಬ್ಬರೂ ದಾಟುತ್ತಾರೆ. ಇದಕ್ಕೆ ಮಹತ್ತರವಾದ ಏಳು ಮೂಲತತ್ವಗಳಿವೆ. ಈ ಏಳು ಮಂತ್ರಗಳು -

೧.ಇಷ ಏಕಪದೀ ಭವ... - ಅನ್ನಾಹಾರಗಳ ಸಮೃದ್ಧಿಗಾಗಿ ಮೊದಲನೇ ಹೆಜ್ಜೆ ಇಟ್ಟು ನನ್ನನ್ನು ಅನುಸರಿಸು

೨.ಊರ್ಜೇದ್ವಿಪದೀಭವ..-ಬಲ ಆರೋಗ್ಯಗಳಿಗಾಗಿ ಎರಡನೇ ಹೆಜ್ಜೆ;

೩.ರಾಯಸ್ಪೋಷಾಯ ತ್ರಿಪದೀ ಭವ..-ಸಾಧನ ಸಂಪತ್ತಿಗಾಗಿ ಮೂರನೇ ಹೆಜ್ಜೆ ;

೪.ಮಯೋಭವ್ಯಾಯ ಚತುಷ್ಪದೀ ಭವ..-ಸುಖ ಆನಂದಕ್ಕಾಗಿ ನಾಲ್ಕನೇ ಹೆಜ್ಜೆ

೫. ಪ್ರಜಾಭ್ಯಃ ಪಂಚಪದೀಭವ..-ಉತ್ತಮ ಸಂತಾನಕ್ಕಾಗಿ ಐದನೇ ಹೆಜ್ಜೆ;

೬. ಋತುಭ್ಯಃ ಷಟ್ಪದೀ ಭವ.. - ನಿಯಮಿತ ಜೀವನ, ಉತ್ತಮ ಋತುಕಾಲಕ್ಕಾಗಿ ಆರನೇ ಹೆಜ್ಜೆ;

೭.ಸಖಾಸಪ್ತಪದೀ ಭವ.. - ಪರಸ್ಪರ ಸ್ನೇಹಕ್ಕಾಗಿ ಏಳನೇ ಹೆಜ್ಜೆ

ಈ ಸಪ್ತಪದೀ ಏಳು ಹೆಜ್ಜೆಗಳು ವಿವಾಹದಲ್ಲಿ ಮುಖ್ಯವಾದ ಮತ್ತು ಪ್ರಾಮುಖ್ಯವಾದ ಘಟ್ಟ. ಈ ಸಪ್ತಪದಿಯಿಲ್ಲದ ವಿವಾಹ ಕಾನೂನು ಬದ್ಧವಾಗಿರುವುದಿಲ್ಲ. ವಿವಾಹ ಪೂರ್ಣ ಮತ್ತು ಸಿದ್ಧಿಯಾಗುವುದಿಲ್ಲ.ಪತಿ ಪತ್ನಿಯರು ಇಲ್ಲಿಂದ "ಗೃಹಸ್ಥಾಶ್ರಮ' ಪ್ರವೇಶ.ಈ ಕಾರ್ಯಕ್ರಮದ ನಂತರ ಪತಿಯು ಪತ್ನಿಯ ಬಲ ಮತ್ತು ಎಡ ಪಾದದ ಎರಡನೆಯ ಬೆರಳಿಗೆ ಉಂಗುರನ್ನು ತೊಡಿಸುತ್ತಾನೆ (ಕಾಲುಂಗುರ). ಈ

ಪ್ರವೇಶಹೋಮ - ಪತಿಯು ಹೋಮದ ನಂತರ , ಹೋಮಶೇಷದ ತುಪ್ಪವನ್ನು ತನ್ನ ಮತ್ತು ಪತ್ನಿಯ ಹೃದಯಕ್ಕೆ ಲೇಪಿಸುತ್ತಾನೆ. ಇದರ ಮಂತ್ರಾರ್ಥ -

೧. ನಮ್ಮ ಹೃದಯಗಳು ಪ್ರೀತಿಯಿಂದ ಕೂಡಿರಲಿ

2. ವಿಶ್ವೇದೇವನು ನಮ್ಮನ್ನು ಸದಾ ಸ್ನೇಹಿತರಂತೆ ಇರಲು ಆಶೀರ್ವದಿಸಲಿ

೩. ಪರಮೇಶ್ವರನು ನಮಗೆ ಯಾವಾಗಲು ಪರಿಶುದ್ಧವಾದ ಮತ್ತು ದ್ವೇಶವಿಲ್ಲದ ಬುದ್ಧಿಯನ್ನು ಕರುಣಿಸಲಿ

೪. ಎಲ್ಲಾ ದೇವತೆಗಳು ನಮಗೆ ಮಾನಸಿಕ ಮತ್ತು ಶಾರೀರಕ ದೃಢತೆ ಮತ್ತು ಸ್ಥಿರತೆಯನ್ನು ಕೊಡಲಿ.

ಈ ಬ್ರಾಹ್ಮವಿವಾಹದ ಕ್ರಮದಲ್ಲಿ ಎಲ್ಲೋ ಹುಟ್ಟಿ ಎಲ್ಲೋ ಬೆಳೆದ ವಧು ಮತ್ತು ವರರಿಗೆ (ದಂಪತಿ) ನಾವಿಬ್ಬರೂ ಒಂದೇ ಎಂಬ ಭಾವನೆ ಬರುತ್ತದೆ. ಹಾಗೂ ಸಂತೋಷದಿಂದ ಆದರ್ಶ ದಂಪತಿಗಳಾಗಿರುತ್ತಾರೆ.ವಿವಾಹದ ಕಾರ್ಯಕ್ರಮದ ನಂತರ ವಧುವನ್ನು ಒಪ್ಪಿಸುವ ಮತ್ತು ತೆಗೆದು ಕೊಳ್ಳುವ ಕಾರ್ಯಕ್ರಮ ನಡೆಯುತ್ತದೆ. ಈ ಸಂದರ್ಭ ಬಹಳ ಸೂಕ್ಷ್ಮವಾಗಿರುತ್ತದೆ. ಮಗು ವಿನಂತೆ ವಾರ್ಷಾನುಗಟ್ಟಲೆ ಬೆಳೆಸಿ ಅವಳನ್ನು ಎಲ್ಲರ ಒಳ್ಳೆಯದಕ್ಕಾಗಿ ಪತಿಯ ಗೃಹಕ್ಕೆ ಕಳುಹಿಸುವ ಕಾರ್ಯ. ಇಲ್ಲಿ ಎಲ್ಲರ ಕಣ್ಣಲ್ಲಿ ನೀರು ಬರುತ್ತದೆ. ಹಿರಿಯರು ಕೆಲವು ಸುಭಾಷಿತ

ಗಳನ್ನು ಮತ್ತು ಕೆಲವು ಹಾಡುಗಳನ್ನು ಅವರವರ ಸಂಪ್ರದಾಯದಂತೆ ಹೇಳುತ್ತಾರೆ. (ನಮ್ಮ ಮನೆಂಗಳದಿ ಬೆಳೆದ ಹೂವ್...). ಎಲ್ಲಾ ಕಾರ್ಯಕ್ರಮದ ನಂತರ "ಗರ್ಭಾದಾನ" ದ ಕಾರ್ಯಕ್ರಮ. ಇದು ಬಹಳ ಮುಖ್ಯವಾದುದು, ಈ ಕಾರ್ಯಕ್ರಮವನ್ನು ಬಹಳ ಜಾಗರೂಕತೆಯಿಂದ ಶಾಸ್ತ್ರೋಕ್ತವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುತ್ತಾರೆ. ಕಾರಣ, ವಿವಾಹದ ಉದ್ದೇಶ "ವಂಶಾಭಿವೃದ್ಧಿ". ಎರಡನೆಯ ದಿನ "ವಸಂತೋತ್ಸವ (ಓಕುಳಿ)". ನಾವು ನೋಡಿದ್ದೇವೆ. ದೇವಾದಿ - ದೇವತೆಗಳ ವಿವಾಹದ ನಂತರ, ಈ ವಸಂತೋತ್ಸವ ಬಹಳ ವಿಜೃಂಭಣೆಯಿಂದ ನಡೆಯುತ್ತದೆ. ಈ ಓಕುಳಿ ಅರಶಿನ ಮತ್ತು ಸ್ವಲ್ಪ ಸುಣ್ಣ ಸೇರಿಸಿದ ಹಳದಿ ಮಿಶ್ರಿತ ಕೆಂಪು ನೀರು. ಈ ಓಕಳಿಯಿಂದ ದಂಪತಿಗಳು (ರಾಧೆ ಮತ್ತು ಕೃಷ್ಣರಂತೆ) ಸಂತೋಷದಿಂದ ಒಂದು ರೀತಿಯ ಸ್ನಾನ ಮಾಡುತ್ತಾರೆ. ಈ ಸಂತೋಷ ಮತ್ತು ಸಂಭ್ರಮದ ವಸಂತೋತ್ಸವದಲ್ಲಿ ಭಾಗವಹಿಸಿ ನಾವೆಲ್ಲರೂ ಒಂದೇ ಕುಟುಂಬದವರು ಎಂಬ ಭಾವನೆ ಬರುತ್ತದೆ. ಇದು ನಮ್ಮ ಹಿರಿಯರು ವಿವಾಹ ಸಂಸ್ಕಾರದಲ್ಲಿ ಸೇರಿಸಿರುವ ಕಾರಣ, ಅರಶಿನವು ಪೂತಿನಾಶಕ (ಆಂಟಿಸೆಪ್ಟಿಕ್), ಇದು ದಂಪತಿಗಳ ಮೇಲೆ ಬಿದ್ದರೆ, ಯಾವ ರೀತಿಯಾದ "ಇನ್ಫೆಕ್ಷನ್" ಆಗುವುದಿಲ್ಲ ಮತ್ತು ಎಲ್ಲವು ಪರಿಹಾರವಾಗುತ್ತದೆ.



**ವಿವಾಹದ ಮುಖ್ಯ ಉದ್ದೇಶಗಳು:**

ಕರ್ಮ ಸಿದ್ಧಾಂತದ ಪ್ರಕಾರ ಎಲ್ಲೋ ಬೆಳೆದ ಮಕ್ಕಳು ಗಂಡ ಹೆಂಡತಿಯರಾಗುತ್ತಾರೆ. ಇವೆಲ್ಲವು ಮೊದಲೇ ನಿಶ್ಚಿತವಾಗಿರುತ್ತದೆ. "ಋಣಾನುಬಂಧ ರೂಪೇಣ ಪಶು ಪತ್ನಿ ಸುತಾಲಯಃ ಪತ್ನಿಯಾದವಳು ಪತಿಯ ಗೃಹಕ್ಕೆ ಬಂದ ನಂತರ ಸಂಸಾರದಲ್ಲಿರುವ ಎಲ್ಲರನ್ನು ತನ್ನವರಂತೆ ಕಾಣುತ್ತಾಳೆ. ವಿವಾಹ ಕಾಲದಲ್ಲಿ ಮಾಡಿದ ಪ್ರತಿಜ್ಞೆಯಂತೆ ಗೃಹಸ್ಥ ಮತ್ತು ಗೃಹಿಣಿ ಸಂಯಮದಿಂದಿರಬೇಕು. ಅವರು ಸಮುದ್ರದಂತಿರಬೇಕು. ಸಮುದ್ರವು ಹೇಗೆ ಎಲ್ಲಾ ನದಿಗಳು ಬಂದು ತನ್ನಲ್ಲಿ ಸೇರಿದರೂ, ಎಲ್ಲಾ ನದಿಗಳನ್ನು ಸಮಾನತೆಯಿಂದ ಮತ್ತು ಸಮಾಧಾನದಿಂದ ಸ್ವೀಕರಿಸುತ್ತಾನೆ. ಹಾಗೂ, ಉಪ್ಪು ನೀರನ್ನು ತನ್ನಲ್ಲೆ ಉಳಿಸಿಕೊಂಡು, ಮೋಡಗಳ ಮುಖಾಂತರ ಸಿಹಿಯಾದ ಮತ್ತು ಶುದ್ಧವಾದ ನೀರನ್ನು ಕೊಡುತ್ತಾನೆ. ಅದರಂತೆ ದಂಪತಿಗಳು ಸಂಸಾರದಲ್ಲಿ ಏನಾದರು ಅಹಿತಕರವಾದ ಸಂದರ್ಭಗಳು ಮತ್ತು ಕಷ್ಟಗಳು ಬಂದಾಗ ಶಾಂತವಾಗಿ ಸಮುದ್ರದಂತೆ ಸ್ವೀಕರಿಸಿ ಸಂಸಾರಸಾಗರಕ್ಕೆ ಆಸರೆಯಾಗಿರಬೇಕು. ಗೃಹಸ್ಥಧರ್ಮವು ಬಹಳ ಪವಿತ್ರವಾದುದು. ಪತಿಪತ್ನಿಯರಲ್ಲಿ ಯಾವ ರೀತಿಯ ಭಿನ್ನಾಭಿಪ್ರಾಯಗಳು ಇರಬಾರದು ಮತ್ತು ಪತಿ ಪತ್ನಿಯರು ಕೆಲವು ನಿರ್ಧಾರಗಳನ್ನು ಮಾಡುವಾಗ ಇಬ್ಬರ ಸಮ್ಮತಿಯಿರಬೇಕು. ಈ ಕಾರಣದಿಂದಲೆ ಗೃಹಿಣಿಗೆ "ಸಹಧರ್ಮಣಿ", "ಧರ್ಮಪತ್ನಿ" ಎಂದು ಗೌರವ ಕೊಡುತ್ತಾರೆ. ಪತಿ ಪತ್ನಿಯರು ಸಂಸಾರದ ಆಧಾರ ಸ್ತಂಭಗಳು. ಅದರಲ್ಲೂ ಗೃಹಿಣಿಯಾದವಳ ಪಾತ್ರ ಬಹಳ ಹಿರಿದಾದದ್ದು. ಒಳ್ಳೆಯ ಮಕ್ಕಳನ್ನು ಪಡೆದು, ಸನ್ಮಾರ್ಗದಲ್ಲಿ ಬೆಳೆಸಿ ಸತ್ಪ್ರಜೆ ಗಳನ್ನಾಗಿ ಮಾಡುತ್ತಾಳೆ. ಮಕ್ಕಳಿಗೆ ಅವಳೇ ಮೊದಲನೆಯ ದೇವರು (ಮಾತೃದೇವೋಭವ). ಹಾಗೂ, ಪತಿಗೆ, ಆಕೆ "ಕಾರ್ಯೇಷು ದಾಸಿ, ಕರಣೇಶು ಮಂತ್ರಿ, ಭೋಜ್ಯೇಷು ಮಾತಾ, ಕ್ಷಮಯಾ ಧರಿತ್ರೀ, ಮತ್ತು ಶಯನೇಷು ರಂಭಾ". ಇದರ ಸಾಮಾನ್ಯ ಅರ್ಥವನ್ನು ಗ್ರಹಿಸಿದರೆ ಸ್ತ್ರೀಯ ಸ್ಥಾನ ಎಷ್ಟು ಪವಿತ್ರ ಮತ್ತು ಪ್ರಾಮುಖ್ಯವಾದುದು ಎಂದು ತಿಳಿಯುತ್ತದೆ. ಸಾಮಾನ್ಯವಾಗಿ ಋಣತ್ರಯಗಳನ್ನು ವಿವಿಧ ರೀತಿಯಲ್ಲಿ ತೀರಿಸಲು ಅವಕಾಶವಿದೆ. ಪತ್ನಿಯ ಋಣವನ್ನು ತೀರಿಸಬೇಕಾದರೆ, ಪತಿಯು ಆಕೆಗೆ ಮರ್ಯಾದೆಯನ್ನು ಕೊಟ್ಟು ಸಂಸಾರದ ಹಿರಿಯರು ಆಕೆಯನ್ನು ತಮ್ಮ ಮಗಳಂತೆ ನೋಡಿ ಮತ್ತು ಎಲ್ಲಾ ಸದಸ್ಯರು ಆಕೆಯನ್ನು ಪ್ರೀತಿ ಗೌರವಗಳಿಂದ ಸ್ವೀಕರಿಸಿದರೆ ಆ ಸಂಸಾರದಲ್ಲಿ ಸದಾ ಸಂತೋಷ ಮತ್ತು ಆರೋಗ್ಯ ಕರವಾದ ವಾತಾವರಣವಿರುತ್ತದೆ, ಮತ್ತು ಈಗ ಮಾಧ್ಯಮಗಳಲ್ಲಿ ನೋಡುತ್ತಿರುವ ಮತ್ತು ಪತ್ರಿಕೆಗಳಲ್ಲಿ ಬರುವ ಅನೇಕ "ಅನಾಹುತ"ಗಳನ್ನು ತಪ್ಪಿಸಬಹುದೇನೋ ಎಂದು ನನ್ನ ಅನಿಸಿಕೆ.

ನಮ್ಮ ಹಿಂದಿನ ತಲೆಮಾರಿನವರು-ಋಷಿಗಳು, ತಪಸ್ವಿಗಳು, ದೇವತೆಗಳು, ಯಾವ ರೀತಿ ತಮ್ಮ ಗೃಹಸ್ಥಾಶ್ರಮ ಧರ್ಮವನ್ನು ಪರಿಪಾಲಿಸುತ್ತಿದ್ದರು ಎಂಬುದು ಎಲ್ಲರಿಗೂ ತಿಳಿದಿದೆ. ಆದರ್ಶ ದಂಪತಿಗಳಾದ ಶ್ರೀ ರಾಮಚಂದ್ರ ಮತ್ತು ಸೀತೆ, ಏನೇ ತೊಂದರೆ ಮತ್ತು ಕಷ್ಟಗಳು ಬಂದರೂ, ಸಾಮಾನ್ಯ ಮಾನವರಂತೆ ತಮ್ಮ ಜೀವನದಲ್ಲಿ ಎದುರಿಸಿ ಆದರ್ಶ ದಂಪತಿಗಳಾದರು. ಅದೇ ರೀತಿ ಆದಿ ದಂಪತಿಗಳಾದ ಶಿವ - ಪಾರ್ವತಿ ಅವರ ಫ್ಯಾಮಿಲೀ ಫೋಟೋ ನೋಡಿದರೆ ಆನಂದವಾಗುತ್ತದೆ. ಮಕ್ಕಳ ಜೊತೆ, ಹಾವು, ಸಿಂಹ ಎಲ್ಲರೂ ಅನ್ಯೋನ್ಯತೆ ಯಿಂದಿರುವುದನ್ನು ಕಾಣಬಹುದು.

ನಾಲ್ಕು ಆಶ್ರಮಗಳಲ್ಲಿ ಬಹು ಪ್ರಾಮುಖ್ಯವಾದುದು "ಗೃಹಸ್ಥಾಶ್ರಮ", ಆಯಾಯ ಆಶ್ರಮ ಕಾಲದಲ್ಲಿ, ಧರ್ಮಗಳನ್ನು ಪಾಲಿಸಿದರೆ ಎಲ್ಲರೂ, ಎಲ್ಲವೂ ಸುಭಿಕ್ಷೆಯಾಗಿರುತ್ತದೆ. ಅದಕ್ಕೆ ಇದನ್ನು "ಧನ್ಯಾಶ್ರಮ" ಎಂದು ಹೇಳಿದ್ದಾರೆ. ಮತ್ತು ಇದನ್ನು "ಧನ್ಯೋಗೃಹಸ್ಥಾಶ್ರಮ" ಎನ್ನುತ್ತಾರೆ. ಆಧುನಿಕ ಕಾಲಕ್ಕೆ ಸರಿಯಾಗಿ, ಹಿಂದಿನ ಕೆಲವು ಸಂಪ್ರದಾಯಗಳನ್ನು ಪಾಲಿಸಿದರೆ ಈಗಲೂ ಸಂಸಾರದಲ್ಲಿ ಸುಖ, ಸಂತೋಷ ಮತ್ತು ಆರೋಗ್ಯ ಕರವಾದ ವಾತಾವರಣವನ್ನು ಕಾಣಬಹುದು.

**ಶ್ರೀರಸ್ತು ಶುಭಮಸ್ತು.**

# ಚಂಪಾ ಷಷ್ಠಿ

## ಕುಕ್ಕೆ ಸುಬ್ರಹ್ಮಣ್ಯದಲ್ಲಿ ಜಾತ್ರೆಯ ಸಂಭ್ರಮ



- ಶ್ರೀಮತಿ - ಸುಮಚಂದ್ರಶೇಖರ್

ಪಶ್ಚಿಮ ಘಟ್ಟಗಳ ತಪ್ಪಲಿನಲ್ಲಿ ತಣ್ಣಗೆ ಮಲಗಿರುವ ಕುಕ್ಕೆ ಶ್ರೀ ಸುಬ್ರಹ್ಮಣ್ಯದಲ್ಲಿ ಪುಷ್ಠಿ ಮಹೋತ್ಸವದ ಸಂಭ್ರಮ ಆರಂಭವಾಗಿದೆ. ಸರ್ಪಸಂಸ್ಕಾರ, ನಾಗಪ್ರತಿಷ್ಠೆ, ಮುಂತಾದ ವುಗಳಿಗೆ ಹೆಸರಾಗಿರುವ ಈ ಕ್ಷೇತ್ರಕ್ಕೆ ಲಕ್ಷಾಂತರ ಮಂದಿ ಭಕ್ತರು ನಾಡಿನ ಒಳಗೂ ಹೊರಗೂ ಇದ್ದಾರೆ ಕರ್ನಾಟಕ ಸರ್ಕಾರಕ್ಕೆ ಅತ್ಯಧಿಕ. ಆದಾಯ ತಂದು ಕೊಡುವ ಈ ದೇವಾಲಯದ ಉತ್ಸವಕ್ಕೆ ಈಗ ಭಕ್ತಾದಿಗಳ ಮಹಾಪೂರ.

ಸುಬ್ರಹ್ಮಣ್ಯ ಗ್ರಾಮ ಮಲೆನಾಡಿನ ಗರ್ಭಸ್ಥಾನ ಎನ್ನ ಬಹುದು. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲೂಕಿನ ಪೂರ್ವ ಭಾಗದಲ್ಲಿದೆ. ಈ ಊರು ಕೊಡಗು, ಹಾಸನ ಜಿಲ್ಲೆಗಳೊಂದಿಗೆ ಗಡಿಯನ್ನು ಹೊಂದಿದೆ. ಸುತ್ತಲೂ ತಲೆ ಎತ್ತಿ ನಿಂತಿರುವ ಸಹ್ಯಾದ್ರಿ ಬೆಟ್ಟಗಳ ನಿತ್ಯ ಹರಿದ್ವರ್ಣ ಕಾಡುಗಳು ಕ್ಷೇತ್ರವನ್ನು ಬಳಸಿ ಹರಿಯುವ ಪುಣ್ಯನದಿ ಕುಮಾರಧಾರೆ.ಸುಬ್ರಹ್ಮಣ್ಯ ನೆಲೆ ನಿಂತಿರುವ ಈ ಕ್ಷೇತ್ರವಿಶೇಷ ಮೆರಗನ್ನು ನೀಡಿದೆ.

ನಿಸರ್ಗದತ್ತವಾದ ಪ್ರಕೃತಿ,ಸೌಂದರ್ಯದ ಮೇರು ವೆನಿಸಿದ ಕುಮಾರ ಪರ್ವತದ ತಪ್ಪಲು. ಗ್ರಾಮ್ಯ ವಾತಾವರಣ. ಘನವಾದ ಪೌರಾಣಿಕ ಹಿನ್ನೆಲೆಯ ಇಂಥ ಪವಿತ್ರ ಸಾನಿಧ್ಯದಲ್ಲಿ ವಾಸುಕೀ ಸಮೇತನಾಗಿ ಶ್ರೀ ಸುಬ್ರಹ್ಮಣ್ಯನು ನೆಲೆ ನಿಂತ ತಾಣವೇ ಕುಕ್ಕೆ ಸುಬ್ರಹ್ಮಣ್ಯ.ಸಕಲ ದೋಷ ನಿವಾರಕನಾಗಿ ದಿನನಿತ್ಯ ಅಂಖ್ಯಾತ ಭಕ್ತಾದಿಗಳಿಂದ ಪ್ರಧಾನ ದೇವತೆಯಾಗಿ ಭಕ್ತ ಸಮುದಾಯವನ್ನು ಹರಸುತ್ತಿದ್ದಾನೆ.

ದುಷ್ಟ ರಾಕ್ಷಸರ ದಮನಕ್ಕಾಗಿ ಜನ್ಮವೆತ್ತಿದ ಕುಮಾರ ಸ್ವಾಮಿಯು ತಾರಕ, ಸಿಂಹವಕ್ರ, ಗಜಸ ಮತ್ತು ಶೂರ ಪದ್ಮಾಸುರನನ್ನು ಯುದ್ಧದಲ್ಲಿ ಸಂಹರಿಸಿ, ಸಕಲ ರಾಕ್ಷಸ ಕುಲವನ್ನು ನಾಶಮಾಡಿ ಗಣೇಶ, ವೀರಬಾಹು ಪ್ರಮುಖರಾದ ಸೋದರರ ಸಹಿತನಾಗಿ ಕುಮಾರ ಪರ್ವತಕ್ಕೆ ಆಗಮಿಸಿದನು. ದೇವತೆಗಳ ಒಡೆಯನಾದ ಇಂದ್ರನು ತನ್ನ ಮಗಳಾದ ದೇವಸೇನೆಯನ್ನು (ಚಂಪಾ) ಮದುವೆಯಾಗುವಂತೆ ಷಣ್ಮುಖ ಸ್ವಾಮಿಯನ್ನು ಪ್ರಾರ್ಥಿಸಿದಾಗ ಆತ ಸಂತೋಷದಿಂದ ಒಪ್ಪಿ ಮಾರ್ಗಶಿರ ಶುದ್ಧ ಷಷ್ಠಿಯ ದಿನ ಕುಮಾರಧಾರ ತೀರ್ಥದ ತಟದಲ್ಲಿ ವಿವಾಹವಾಗುತ್ತಾನೆ.

### ತೇರಿನ ಊರಲ್ಲಿ ಸಡಗರ

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಕಾರ್ತಿಕ ಬಹುಳ ದ್ವಾದಶಿಯಿಂದ ಜಾತ್ರೆ ಆರಂಭಗೊಂಡು ಮಾಗರ್ಶಿರ ಶುದ್ಧ ದ್ವಾದಶಿಯಂದು ಕೊಪ್ಪರಿಗೆ ಇಳಿಯುವುದರೊಂದಿಗೆ ಜಾತ್ರೆ ಮುಕ್ತಾಯ. ಕಾರ್ತಿಕ ಬಹುಳ ಏಕಾದಶಿಯಂದು ಸುಬ್ರಹ್ಮಣ್ಯ ದೇವರ ಗರ್ಭಗುಡಿಯೊಳಗಿನಿಂದ 'ಮೂಲ ಮೃತ್ತಿಕೆ'ಯನ್ನು ಭಕ್ತಿ ಶ್ರದ್ಧೆಯಿಂದ ತರಲಾಗುವುದು (ಹುತ್ತದ ಮಣ್ಣು). ಮೃತ್ತಿಕೆಯೇ ಇಲ್ಲಿ ಮೂಲ ಪ್ರಸಾದವಾಗಿರುವುದು ವಿಶೇಷವಾಗಿದೆ.

ಮರುದಿನದಿಂದ ಧಾರ್ಮಿಕ ಆಚರಣೆಗಳು ಆರಂಭ ಗೊಳ್ಳುತ್ತವೆ. ಮುಂದಿನ 15 ದಿನಗಳಲ್ಲಿ 'ಕೊಪ್ಪರಿಗೆ ಅನ್ನ'

ಭಕ್ತರಿಗೆ ಮಹಾಪ್ರಸಾದ. ಕಾರ್ತಿಕ ಅಮಾವಾಸ್ಯೆಯಂದು ಲಕ್ಷ ದೀಪೋತ್ಸವ. ಅನಂತರ ಪಾಡ್ಯ, ಬಿದಿಗೆ, ತದಿಗೆ, ಚೌತಿ ದಿನಗಳಲ್ಲಿ ಚಂದ್ರಮಂಡಲ ರಥೋತ್ಸವ,ಅಶ್ವವಾಹನ, ಮಯೂರ ವಾಹನೋತ್ಸವ, ಚೌತಿಯಂದು ಹೂವಿನ ತೇರಿನ ರಥೋತ್ಸವ, ಪಂಚಮಿಯಂದು ಪಂಚಮಿ ರಥೋತ್ಸವ, ಷಷ್ಠಿದಿನ ಪ್ರಾತಃಕಾಲದ ನಿಶ್ಚಿತ ಶುಭ ಮುಹೂರ್ತದಲ್ಲಿ ಸುಬ್ರಹ್ಮಣ್ಯ ದೇವರ ಹಾಗೂ ಉಮಾಮಹೇಶ್ವರ ದೇವರ ಸಮೇತ ಉತ್ಸವ ಹೊರಟು ಸುಬ್ರಹ್ಮಣ್ಯ ಸ್ವಾಮಿಯು ಬ್ರಹ್ಮರಥದಲ್ಲಿಯೂ, ಉಮಾಮಹೇಶ್ವರ ದೇವರು ಪಂಚಮಿ ರಥದಲ್ಲೂ ರಥಾರೋಹಣವಾಗಿ ಅರ್ಧ ಬೀದಿಯವರೆಗೆ ಪಯಣಿಸಿ ಮತ್ತೆ ಸ್ವಸ್ಥಾನಕ್ಕೆ ಮರಳುತ್ತಾರೆ.ಷಷ್ಠಿಯ ಮರುದಿನ ಕುಮಾರಧಾರಾ ನದಿಯಲ್ಲಿ ಶ್ರೀ ದೇವರ ಅವಭೃತೋತ್ಸವ, ನೌಕಾವಿಹಾರ ನಡೆಯುತ್ತದೆ. ಬೀದಿಯಲ್ಲಿ ಉತ್ಸವ ಆರಂಭವಾದಂದಿನಿಂದ ಕುಮಾರಧಾರಾ ನದಿಯಿಂದ ದೇವಳದವರೆಗೆ ಉರುಳು ಸೇವೆ (ಬೀದಿ ಮಡೆಸ್ನಾನ) ನಡೆಯುವುದು ಕಾಣಬಹುದಾಗಿದೆ. ಚೌತಿ ಹಾಗೂ ಪಂಚಮಿ ರಥೋತ್ಸವದಂದು ವಿಶೇಷ ಸಿಡಿ ಮದ್ದಿನ ಪ್ರದರ್ಶನವಿದ್ದು, ಬಾನಂಗಣದಲ್ಲಿ ಚಿತ್ತಾರ ಮೂಡಿಸಿ ಎಲ್ಲರ ಮನಸೂರೆಗೊಳ್ಳುತ್ತದೆ.




ಕೊಪ್ಪರಿಗೆ ಇಳಿಯುವ ದಿನದಂದು (ದ್ವಾದಶಿ) ಜಾತ್ರೆ ಮುಕ್ತಾಯಗೊಳ್ಳುತ್ತದೆ. ಅಂದು ದೇವಳದ ಅಂಗಣದಲ್ಲಿ 'ನೀರು ಬಂಡಿ ಉತ್ಸವ' ವಿಶೇಷವಾಗಿದೆ. ಹಿಂದಿನ ದಿನ ಏಕಾದಶಿಯಂದು ದೇವಳದ ಹೊರಾಂಗಣದಲ್ಲಿ ನೀರು ತುಂಬಿಸಲಾಗುವುದು.ಬಂಡಿ ಉತ್ಸವ ಮುಕ್ತಾಯಗೊಂಡ ಬಳಿಕ ತುಂಬಿಸಿದ ನೀರನ್ನು ಖಾಲಿ ಮಾಡಲಾಗುವುದು. ಇದು ಎಲ್ಲೂ ಕಂಡು ಬಾರದ ಅಪೂರ್ವ ಪದ್ಧತಿಯಾಗಿದೆ. ಇಲ್ಲಿ ನಡೆಯುವ ಉತ್ಸವಾದಿಗಳಲ್ಲಿ ದೇವರನ್ನು ಪಲ್ಲಕ್ಕಿಯ ಮೇಲೆ ಕುಳ್ಳಿರಿಸಿ ಹಲವು ಪ್ರದಕ್ಷಿಣೆಗಳನ್ನು ನಡೆಸಲಾಗುತ್ತದೆ. ವರ್ಷಂಪ್ರತಿ ಬರುವ ವಾದ್ಯ ಸೆಟ್‌ನವರು, ಬ್ಯಾಂಡ್‌ನವರು, ಚೆಂಡೆ, ಡೋಲಿನವರು, ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಂಡು ಕಣ್ಣಿನ ಜತೆಗೆ ಕಿವಿಗೂ ಇಂಪನ್ನುಂಟು ಮಾಡುತ್ತಾರೆ. ಪಲ್ಲಕ್ಕಿಯ ಮುಂದೆ ದೀವಟಿಕೆ, ಕಟ್ಟಿಗೆ ಕೋಲು, ಛತ್ರಚಾಮರ, ಮಕರ ತೋರಣಗಳು ಸಾಲಂಕೃತ ಗಜಗಮನೆ ಯಶಸ್ವಿನಿ (ದೇವಳದ ಆನೆ) ಇವುಗಳ ಇರುವಿಕೆಯಿಂದ ರಾಜವೈಭವದ ಮೆರಗು ಇಲ್ಲಿ ಕಾಣುತ್ತದೆ.

### ಸುಬ್ರಹ್ಮಣ್ಯ ನೆಲೆನಿಂತ ಇತಿಹಾಸ

ಕುಮಾರ ಸುಬ್ರಹ್ಮಣ್ಯನು ಇಲ್ಲಿ ನೆಲೆನಿಂತ ಕಥೆ ರೋಚಕವಾಗಿದೆ.ಕಶ್ಯಪನಿಗೆ ಆದಿತಿಯಲ್ಲಿ ಹುಟ್ಟಿದ ಮಗ ವಜ್ರಾಂಗ. ವಜ್ರಾಂಗ ತಪಸ್ಸು ಮಾಡುತ್ತಿದ್ದಾಗ ಅವನ ಪತ್ನಿ ವರಾಂಗಿಗೆ ಇಂದ್ರ ಕಿರುಕುಳ ನೀಡಲಾರಂಭಿಸಿದ. ಪ್ರತೀಕಾರನಾಗಿ ವಜ್ರಾಂಗ ತಾರಕನೆಂಬ ಮಗನನ್ನು ಪಡೆಯುವನು. ತಾರಕನು ಘೋರ ತಪಸ್ಸು ಮಾಡಿ ಶಿವನಿಂದ ಏಳು ದಿನಗಳ ಕೂಸಲ್ಲದೆ ಮತ್ತೆ ಯಾರಿಂದಲೂ ಸಾವು ಬರಬಾರದೆಂದು ವರ ಪಡೆಯುತ್ತಾನೆ. ಮುಂದೆ ತಾರಕನು ದೇವತೆಗಳನ್ನೆಲ್ಲ ಹೊಡೆದೋಡಿಸಿ ದೇವೇಂದ್ರನ ಪದವಿಯನ್ನು ಆಕ್ರಮಿಸುವನು, ದೇವತೆಗಳೆಲ್ಲ ಬ್ರಹ್ಮನ ಮೊರೆ ಹೋಗುವರು.ಮನ್ಮಥನ ಸಹಾಯದಿಂದ ಹಿಮವಂತನ ಕುಮಾರಿಯಾದ ಪಾರ್ವತಿಯನ್ನು ಈಶ್ವರನು ವರಿಸುವಂತೆ ಮಾಡುತ್ತಾರೆ. ದೇವತೆಗಳು ನಂತರ ಅಗ್ನಿಯ ಸಹಾಯದಿಂದ ರುದ್ರ ವೀರ್ಯವನ್ನು ಸಂಗ್ರಹಿಸುವರು.ಅಗ್ನಿ ಮತ್ತು ಗಂಗೆಯ ಸಹಾಯದಿಂದ ಹುಲ್ಲಿನ ಪೊದೆಯಲ್ಲಿ ಕುಮಾರನ ಜನನವಾಗುತ್ತದೆ. ಮಗು ರೋಧಿಸುತ್ತಿರಲು ಷಟ್ ಕೃತ್ತಿಕೆಗಳು ಬಂದು ಆ ಶಿಶುವಿಗೆ ಸ್ತನ್ಯವನ್ನು ಕುಡಿಸುವರು.ಆರು ಮುಖಗಳಿಂದ ಹಾಲನ್ನು ಕುಡಿದ ಮಗುವು ಷಣ್ಮುಖನೆಂದು ನಾಮ ಧರಿಸಿತು.

ಈ ವಿಚಾರ ತಿಳಿದ ಈಶ್ವರ ಪಾರ್ವತಿಯರು ಬಂದು ಮಗುವನ್ನು ಕರೆದ್ಯೊಯ್ದುರು ಕೌಮಾರಾವಸ್ಥೆಯಲ್ಲೇ ರಹಸ್ಯವಾಗಿ ಧನುರ್ವಿದ್ಯೆಯನ್ನು ಕಲಿತ ಮಗುವಿಗೆ ಪಾರ್ವತಿ ತನ್ನ ಶಕ್ತಿ ಆಯುಧವನ್ನು ಪ್ರದಾನ ಮಾಡಿದಳು. ತನ್ನ ಹುಟ್ಟಿದ ಉದ್ದೇಶ ತಿಳಿದ ಷಣ್ಮುಖ ತಾರಕ ಸಂಹಾರಕ್ಕಾಗಿ ಮಹೀಸಾಗರ ಸಂಗಮಕ್ಕೆ ಬರುವನು. ಅಲ್ಲಿ ಪರ್ವತ ಶಿಖರದಲ್ಲಿ ದೇವತೆಗಳು ಈತನಿಗೆ ಮಹೀತೀರ್ಥದಿಂದ ದೇವಸೇನಾ ಪತಿಯಾಗಿ ಪಟ್ಟಾಭಿಷೇಕ ಮಾಡುವರು. ವಿಷ್ಣುವಿನ ಸಲಹೆಯಂತೆ ಕುಮಾರ ಸ್ವಾಮಿಯು ತಾರಕನನ್ನು ಸಂಹರಿಸಿದನು.

ಕಂಟಕನಾಗಿ ಬೆಳೆದ ತಾರಕನ ಸಂಹಾರದಿಂದ ದೇವತೆಗಳೆಲ್ಲ ಸಂತೋಷಗೊಳ್ಳುವರು. ಸಹ್ಯಾದ್ರಿಯಲ್ಲಿರುವ ಸಿದ್ಧರೂ, ಮಹರ್ಷಿಗಳು, ನಾಗ ಗಣಗಳೂ ಮತ್ತು ವಾಸುಕಿಯ

ಕುಟುಂಬ ಸಮೇತರಾಗಿ ಬಂದು ಕುಮಾರನಿಗೆ ನಮಿಸು ವರು. ಮಹೇಂದ್ರನು ತನ್ನ ಕುಮಾರಿಯಾದ ದೇವಸೇನೆ ಯನ್ನು ಕುಮಾರನು ವಿವಾಹವಾಗುವಂತೆ ಕೇಳಿಕೊಳ್ಳು ತ್ತಾನೆ. ಕುಮಾರಧಾರಾ ನದಿಯ ದಡದಲ್ಲಿ ಸ್ವಾಮಿ ಕಾರ್ತಿಕ ನಗರವನ್ನು ನಿರ್ಮಿಸಿ ದೇವಸೇನಾ ಸುಬ್ರಹ್ಮಣ್ಯನ ವಿವಾಹ ವನ್ನು ದೇವೇಂದ್ರನು ನೆರವೇರಿಸುವವನು. ಇದೇ ದಿನವನ್ನು ಚಂಪಾಷಷ್ಠಿಯೆಂದು ಭಕ್ತರು ಆಚರಿಸಿಕೊಂಡು ಬಂದಿದ್ದಾರೆ.

ದೇವತೆಗಳ ಪ್ರಾರ್ಥನೆಯಂತೆ ಸುಬ್ರಹ್ಮಣ್ಯನು ತಾರಕನು ಮಡಿದ ಸ್ಥಳದಲ್ಲಿ ಸ್ಕಂದೇಶ್ವರನನ್ನು ಪ್ರತಿಷ್ಠಾಪಿದನು. ತಮ್ಮ ಅಭೀಷ್ಟ ಈ ಕ್ಷೇತ್ರದಲ್ಲಿ ಸಿದ್ಧಿಯಾದುದರಿಂದ ಸಮಸ್ತ ದೇವತೆಗಳು ಸೇರಿ ಇಲ್ಲಿ ಸಿದ್ಧೇಶ್ವರನನ್ನು ಸ್ಥಾಪಿಸಿದರು. ಕುಮಾರಸ್ವಾಮಿ ದೇವಸೇನೆಯ ಈ ಕ್ಷೇತ್ರದಲ್ಲಿ ವಾಸುಕಿಯೊಂದಿಗೆ ವಾಸಿಸತೊಡಗಿದರು. ಪುತ್ರ ವಾತ್ಸಲ್ಯದಿಂದ ಶಿವ ಪಾರ್ವತಿಯರೂ ಇಲ್ಲಿ ನೆಲೆಸಲು ಈ ಕ್ಷೇತ್ರ ಕುಕ್ಕೆಲಿಂಗವೆಂಬ ಖ್ಯಾತಿ ಪಡೆಯಿತು ಎಂಬುದು ಕ್ಷೇತ್ರ ಚರಿತ್ರೆ ತಿಳಿಸುತ್ತದೆ. ಗಣಪತಿಯೂ ಇಲ್ಲಿ ಬಂದು ನೆಲೆಸತೊಡಗಿದನು. ಅದರಿಂದಾಗಿ ಈ ಸ್ಥಾನದ ಮಹಿಮೆ ಇನ್ನೂ ಹೆಚ್ಚಿತು.



ಹಿಂದೆ ಕುಕ್ಕೆ ಎಂದೇ ಹೆಸರಾಗಿದ್ದ ಈ ಕ್ಷೇತ್ರ ಇಂದು ಸುಬ್ರಹ್ಮಣ್ಯನ ದೆಯಯಿಂದ ಕುಕ್ಕೆ ಸುಬ್ರಹ್ಮಣ್ಯವಾಗಿದೆ ಆದರೆ, ಈ ಸ್ಥಳಕ್ಕೆ ಕುಕ್ಕೆ ಎಂಬ ಹೆಸರು ಬಂದ ಬಗ್ಗೆ ವಿಭಿನ್ನ ಹೇಳಿಕೆಗಳಿವೆ. ಈ ಕ್ಷೇತ್ರದಲ್ಲಿ ಹಿಂದೆ ಜನರು ಕುಕ್ಕೆಗಳಲ್ಲಿ ಈಶ್ವರ ಲಿಂಗವನ್ನಿಟ್ಟು ಪೂಜಿಸುತ್ತಿದ್ದರಂತೆ. ಹೀಗಾಗಿ ಈ ಊರಿಗೆ ಕುಕ್ಕೆ ಎಂದೂ ಹಾಗೂ ಇಲ್ಲಿನ ಶಿವಲಿಂಗಕ್ಕೆ ಕುಕ್ಕೆಲಿಂಗ ಎಂದು ಹೆಸರು ಬಂದಿದೆ ಎನ್ನುತ್ತಾರೆ ಕೆಲವರು. ಆದರೆ, ಕುಕ್ಕೆ ಎಂಬ ಪದಕ್ಕೆ ಹಳೆಗನ್ನಡದಲ್ಲಿ 'ಗುಹೆ' ಎಂದು ಅರ್ಥನೀಡುವ ಸಂಸ್ಕೃತದ 'ಕುಕ್ಷಿ' ಎಂಬ ಪದ ಪ್ರಯೋಗವಿದೆ. ಹೀಗಾಗಿ ಇದಕ್ಕೆ ಕುಕ್ಕೆ ಎಂಬ ಹೆಸರು ಬಂದಿದೆ. ಗುಹೆಯೊಳಗೆ ಶಿವಲಿಂಗ ಇರುವುದರಿಂದ ಈ ಲಿಂಗಕ್ಕೆ ಕುಕ್ಕೆ ಲಿಂಗ ಎಂಬ ಹೆಸರು ಬಂದಿದೆ ಎನ್ನುತ್ತಾರೆ ಕೆಲವರು.

ಸುಬ್ರಹ್ಮಣ್ಯ ಕ್ಷೇತ್ರ ಪೂರ್ವದಲ್ಲಿ ಕುಕ್ಕೆ ಪುಟ್ಟಣವೆಂದೇ ಪ್ರಸಿದ್ಧಿಯಾಗಿತ್ತೆಂದು ಶಾಸನಗಳಿಂದಲೂ, ಗ್ರಂಥಗಳಿಂದಲೂ ತಿಳಿದು ಬರುತ್ತದೆ. ಶ್ರೀ ಆದಿಶಂಕರಾಚಾರ್ಯರು ದಿಗ್ವಿಜಯಕ್ಕಾಗಿ ಇಲ್ಲಿಗೆ ಬಂದು ಕೆಲವು ದಿನ ವಾಸ ಮಾಡಿದ್ದರೆಂದೂ ಆನಂದ ವಿರಚಿತ ಶಂಕರ ವಿಜಯದಲ್ಲಿ ಹೇಳಿದೆ. ಶ್ರೀ ಶಂಕರಾಚಾರ್ಯ ವಿರಚಿತ 'ಸುಬ್ರಹ್ಮಣ್ಯ ಭುಜಂಗ ಪ್ರಯಾತ' ಸ್ತೋತ್ರದಲ್ಲಿ 'ಭಜೇ ಕುಕ್ಕೆಲಿಂಗಂ' ಎಂದು ಈ ಕ್ಷೇತ್ರದ ಉಲ್ಲೇಖವಿದೆ. ಇಲ್ಲಿಯ ಸ್ಥಳ ಪುರಾಣ ಸ್ತೋತ್ರದಲ್ಲಿ 'ಭಜೇ ಕುಕ್ಕೆಲಿಂಗಂ' ಎಂದು ಈ ಕ್ಷೇತ್ರದ ಉಲ್ಲೇಖವಿದೆ. ಇಲ್ಲಿಯ ಸ್ಥಳ ಪುರಾಣ ಪ್ರಕಾರ ಅನೇಕ ದೇವ ಋಷಿಗಳ ಶಿವಲಿಂಗಗಳನ್ನು ಈ ಕ್ಷೇತ್ರದಲ್ಲಿ ಸ್ಥಾಪಿಸಿದ್ದಾಗಿ ತಿಳಿದು ಬರುತ್ತದೆ. ಇಂತಹ ಪ್ರಸಿದ್ಧ ಶಿವಲಿಂಗವನ್ನು ಉಲ್ಲೇಖಿಸುವುದೇ ಕುಕ್ಕೆಲಿಂಗವೆಂಬ ಶಬ್ದದ ಅರ್ಥವಾಗಿರುವುದೆಂದು ತಿಳಿಯಬೇಕು. ಶ್ರೀ ಸ್ಕಂದಪುರಾಣದ ಸನತ್‌ಕುಮಾರ ಸಂಹಿತೆಯಲ್ಲಿ ಸಹ್ಯಾದ್ರಿ ಖಂಡದ ತೀರ್ಥಕ್ಷೇತ್ರದ ಮಹಿಮಾ ರೂಪಣದೊಳಗೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರವು ಧಾರಾ ನದಿಯ ತೀರದಲ್ಲಿರುವುದು ಎಂದಿದೆ. ಈ ಕ್ಷೇತ್ರವನ್ನು ಗುಪ್ತ ಕ್ಷೇತ್ರವೆಂಬುದಾಗಿಯೂ ಕರೆಯುತ್ತಾರೆ. ಶ್ರೀದೇವರಿಗೆ ಅನ್ನದಾತ ಸುಬ್ರಹ್ಮಣ್ಯನೆಂದು ಹೆಸರೂ ಇದೆ.

## ಮಲೆಕುಡಿಯರ ನಂಟು

ಇಲ್ಲಿನ ಬುಡಕಟ್ಟು ಜನಾಂಗವಾದ ಮಲೆಕುಡಿಯರಿಗೂ ಈ ದೇವರಿಗೂ ಹತ್ತಿರದ ನಂಟಿದೆ. ಊರಿನಲ್ಲಿ ಇವರನ್ನೊಳಗೊಂಡಂತೆ ಒಂದು ಕಥೆ ಕೇಳಿ ಬರುತ್ತದೆ. ಯುಗಗಳ ಹಿಂದೆ ಈ ಪ್ರದೇಶದ ಮಲೆಗಳಲ್ಲಿ ಕಾಡ್ಗಿಚ್ಚು ಹತ್ತಿಕೊಂಡಿತಂತೆ. ಬೆಂಕಿಯ ನಡುವೆ ದಿಗ್ಬಂಧನವಾಗಿದ್ದ ದೇವ ಸರ್ಪವೊಂದರ ನರಳುವಿಕೆ ಬೇಟೆಗೆಂದು ಹೋಗಿದ್ದ ಮಲೆಕುಡಿಯ ಜನಾಂಗದ ಪೂರ್ವಜರ ಕಿವಿಗೆ ಬಿದ್ದಿತಂತೆ. ಸರ್ಪದ ದಯನೀಯ ಸ್ಥಿತಿ ಕಂಡು ಅದನ್ನು ಬೆಂಕಿಯಿಂದ ರಕ್ಷಿಸಿ ತಾನು ತಂದ ಕುಕ್ಕೆಯಲ್ಲಿ ಇಟ್ಟುಕೊಂಡು ಬೆಟ್ಟದ ಕೆಳಗೆ ನಡೆಯುತ್ತಿದ್ದಾಗ 'ನಿನಗೆ ಭಾರವೆನಿಸಿದ ಜಾಗದಲ್ಲಿ ನನ್ನ ನಿಳಿಸು' ಎಂಬ ಅಶರೀರವಾಣಿ ಕೇಳಿತಂತೆ. ಆ ಮಾತಿನಂತೆ ಅದು ಭಾರವಾಗ ತೊಡಗಿದ ಜಾಗದಲ್ಲಿ ಇಳಿಸಲಾಯಿತು. ಆದರೆ ಆ ಸ್ಥಳ ಬೆಂಕಿಯ ಭಯದಿಂದ ಬೆಂದಿದ್ದ ಸರ್ಪಕ್ಕೆ ಕ್ಷೇಮವೆನಿಸದ ಕಾರಣ ಅದು ಅಲ್ಲಿಂದ ಸುಮಾರು ಹೆಜ್ಜೆಯ ದೂರದಲ್ಲಿ ಸುತ್ತಲೂ ನೀರು ಹರಿಯುವ ಸ್ಥಳದಲ್ಲಿ ತನ್ನನ್ನು ಬಿಡುವಂತೆ ಸೂಚಿಸಿತಂತೆ. ಸರ್ಪವನ್ನು ಮೂಲವಾಗಿ ಇಳಿಸಿದ ಸ್ಥಳವೇ 'ಆದಿ ಸುಬ್ರಹ್ಮಣ್ಯ' ಎಂದು ಪ್ರಸಿದ್ಧವಾಯಿತು. ದರ್ಪಣ ತೀರ್ಥ ಹಾಗೂ ಕುಮಾರಧಾರೆ ನದಿಯು ಕುಕ್ಕೆ

ದೇವಸ್ಥಾನ ಪ್ರದೇಶದ ಸುತ್ತಲೂ ಹರಿದು ಹೋಗುತ್ತವೆ. ಕುಕ್ಕೆಯಲ್ಲಿ ಹೊತ್ತು ತಂದದ್ದಕ್ಕೆ ಸರ್ಪ ನೆಲೆಸಿದ ಸುತ್ತಲೂ ನೀರಿರುವ ಜಾಗ ಕುಕ್ಕೆಸುಬ್ರಹ್ಮಣ್ಯ ಎಂದು ನಾಮಕರಣಗೊಂಡಿದೆ ಎಂಬುದಾಗಿ ದಂತಕಥೆ. ಆದಿ ಸುಬ್ರಹ್ಮಣ್ಯ ಕುಮಾರ ಸ್ವಾಮಿಯ ದೇವಾಲಯದಿಂದ 100 ಮೀ ದಕ್ಷಿಣಕ್ಕೆ ಇದೆ. ದರ್ಪಣ ತೀರ್ಥದ ಪಕ್ಕದಲ್ಲಿ ಈ ಗುಡಿಯ ಗರ್ಭಗೃಹದೊಳಗೆ ದೊಡ್ಡ ವಾಲ್ಮೀಕಿ ಹುತ್ತವು ಗೋಚರಿಸುತ್ತದೆ. ಇಲ್ಲಿ ನಿತ್ಯಪೂಜೆ, ನಂದಾದೀಪ, ನೈವೇದ್ಯಾದಿಗಳು ನಡೆಯುತ್ತವೆ. ಬ್ರಹ್ಮನಿಂದ ಪ್ರತಿಷ್ಠಿತವಾದ ಶಿವಲಿಂಗವೂ ಇಲ್ಲಿದೆ. ಸುಬ್ರಹ್ಮಣ್ಯ ಕ್ಷೇತ್ರಕ್ಕೆ ಬಂದ ಭಕ್ತಾದಿಗಳು ಇಲ್ಲಿನ ದರ್ಶನ ಲಾಭವಿಲ್ಲದೆ ಹೋದರೆ ಅವರಿಗೆ ಯಾತ್ರಾ ಫಲ ದೊರೆಯದೆಂಬ ಶಾಪವಿದೆ.

### ಬೆತ್ತದ ತೇರಿನ ಹಿಂದಿದೆ, ಮೂಲ ನಿವಾಸಿಗಳ ಬೆವರು

ಕುಕ್ಕೆ ಸುಬ್ರಹ್ಮಣ್ಯ ಜಾತ್ರೆಯಲ್ಲಿ ಬಹುಪಾಲು ರಥಗಳದ್ದೇ ಆಗಿರುತ್ತದೆ. ಆದುದರಿಂದ ಈ ತೇರಿನ ಊರಿನ ಜಾತ್ರೆಗೆ ಮೂಲ ನಿವಾಸಿಗಳಾದ ಮಲೆಕುಡಿಯ ಜನಾಂಗದವರು ರಚಿಸುವ ಆಕರ್ಷಕ ಬೆತ್ತದ ರಥಗಳು ಭೂಷಣವಾಗಿದ್ದು, ಸಾಲಾಂಕೃತ ರಥಗಳು ಜಾತ್ರೆಯ ಸೊಬಗನ್ನು ಇಮ್ಮಡಿ ಗೊಳಿಸುತ್ತದೆ. ಕುಕ್ಕೆ ಕ್ಷೇತ್ರದ ಜಾತ್ರಾ ಮಹೋತ್ಸವಕ್ಕಾಗಿ ಮಲೆಕುಡಿಯ ಜನಾಂಗದವರು ತಮ್ಮ ಅದ್ಭುತ ಕೈಚಳದಿಂದ ತೇರನ್ನು ಸಿದ್ಧಗೊಳಿಸುವ ಕಾಯಕವನ್ನು ಹಗಲಿರುಳೆನ್ನದೆ ಶ್ರಮವಹಿಸಿ ನಡೆಸುತ್ತಾರೆ. ಶ್ರೀ ಕ್ಷೇತ್ರದಲ್ಲಿ ಮೂಲ ನಿವಾಸಿಗಳಾದ ಮಲೆಕುಡಿಯ ಜನಾಂಗಕ್ಕೆ ವಿಶೇಷ ಸ್ಥಾನವಿದೆ. ಶ್ರೀ ಕ್ಷೇತ್ರದ ಜಾತ್ರಾ ಸಮಯದಲ್ಲಂತೂ ಇವರ ಪಾತ್ರ ಅನನ್ಯ. ರಥಗಳದ್ದೇ ಇಲ್ಲಿ ಜಾತ್ರೆ ಆದುದರಿಂದ ಇಲ್ಲಿನ ರಥಗಳನ್ನು ಅತ್ಯಂತ ವಿಶಿಷ್ಟ ಪೂರ್ಣ ಮತ್ತು ಸುಂದರವಾಗಿ ನಿರ್ಮಿಸುವ ಕೈಂಕರ್ಯವನ್ನು ತಲೆ ತಲಾಂತರದಿಂದ ಮಾಡಿಕೊಂಡು ಬರುತ್ತಿರುವ ಕೀರ್ತಿ ಇವರಿಗೆ ಸಲ್ಲುತ್ತದೆ. ಈಗೀಗ ಹಿರಿಯರೊಂದಿಗೆ ಯುವ ಜನಾಂಗವೂ ಕೂಡ ಶ್ರೀದೇವರ ಈ ಸೇವೆಯಲ್ಲಿ ಭಾಗವಹಿಸುತ್ತಿರುವುದರಿಂದ ಅವರ ಸೇವಾಕಾರ್ಯಕ್ಕೆ ಸಾಕ್ಷಿ.



ಸುಬ್ರಹ್ಮಣ್ಯದ ಚಂಪಾ ಷಷ್ಠಿಗೆ ಸಿದ್ಧತೆ ನಡೆಯುವುದೇ ರಥಕ್ಕೆ ಕುಟ್ಟಿ ಹಾಕುವುದರ ಮೂಲಕ. ನಂತರ ಮೂಲ ನಿವಾಸಿಗಳು ಕಾಡಿಗೆ ತೆರಳಿ ರಥಕ್ಕಾಗಿ ಬೆತ್ತವನ್ನು ಸಂಗ್ರಹಿಸುತ್ತಾರೆ. ಬಳಿಕ ಬ್ರಹ್ಮರಥವನ್ನು ಕಟ್ಟಲು ಆರಂಭಿಸುತ್ತಾರೆ. ಬೆತ್ತದಿಂದಲೇ ತಯಾರಿಸುವ ಈ ರಥದ ಆಕರ್ಷಣೆಯೇ ಇವರ ಸೇವಾ ಕೈಚಳಕಕ್ಕೆ ಹಿಡಿದ ಕೈಗನ್ನಡಿಯಾಗಿ ಗೋಚರಿಸುತ್ತದೆ. ರಥದ ಮೇಲ್ಭಾಗವನ್ನು ಬೆತ್ತದಿಂದಲೇ ನಿರ್ಮಿಸಲಾಗುತ್ತಿದ್ದು, ರಥ ಎಳೆಯಲು ಕೂಡ ಬೆತ್ತವನ್ನೇ ಬಳಸುವುದು ವಿಶೇಷ, ಉಳಿದಂತೆ ರಥ ಕಟ್ಟಲು ಬೆತ್ತದ ಸೀಳುಗಳನ್ನು ಉಪಯೋಗಿಸಿದರೆ, ಎಳೆಯಲು ಉಪಯೋಗಿಸುವ ಬೆತ್ತ ಮಾತ್ರ ಇಡಿಯಾಗಿರುತ್ತದೆ. ಈ ಬೆತ್ತವನ್ನು ಭಕ್ತರು ತುಂಡು ಮಾಡಿ ತಮ್ಮ ಮನೆಗಳಿಗೆ ತೆಗೆದುಕೊಂಡು ಹೋಗುತ್ತಾರೆ. ಇದು ಮನೆಯಲ್ಲಿದ್ದರೆ ಒಳಿತು ಮತ್ತು ಇದು ಔಷಧಕಾರಕ ಎಂಬ ನಂಬಿಕೆಯೂ ಇದೆ.

ಈ ರೀತಿಯಾಗಿ ಮೂಲ ನಿವಾಸಿಗಳಾದ ಮಲೆಕುಡಿಯರು ಆಕರ್ಷಕ ಶೈಲಿಯಲ್ಲಿ ರಥವನ್ನು ನಿರ್ಮಿಸಿ, ಇದಕ್ಕೆ ಬಟ್ಟೆಯ ಪತಾಕೆಗಳಿಂದ ಸಿಂಗರಿಸುತ್ತಾರೆ. ರಥಗಳ ಗಾಂಭೀರ್ಯತೆ, ಅದರ ಶೈಲಿ, ಆಕರ್ಷಣೆಗಳು ಹಾಗೂ ರಥಗಳ ವಿನ್ಯಾಸಗಳೇ ಇವರ ಅತ್ಯುತ್ತಮ ರಚನಾ ಕೌಶಲ್ಯವನ್ನು ತೆರೆದಿಡುತ್ತದೆ.

### ಪಾವನತೀರ್ಥ - ಕುಮಾರಧಾರಾ

ಈ ಕ್ಷೇತ್ರದಲ್ಲಿ ಹರಿಯುವ ಕುಮಾರಧಾರಾ ನದಿ ಒಂದು ಪುಣ್ಯತೀರ್ಥ. ಕೃತಯುಗದಲ್ಲಿ ಇಂದ್ರದ್ಯುಮ್ನನೆಂಬ ರಾಜನು ಭಕ್ತಿಯಿಂದ ಭೂಮಿಯ ಮೇಲೆ ಯುದ್ಧ ಮಾಡುತ್ತಿರಲು



ಭೂದೇವಿಯು ಸಂತೃಪ್ತಳಾಗಿ, ಭೂಗರ್ಭದಿಂದ ಉಕ್ಕಿ ಪ್ರವಹಿಸಿದ ಸಮಸ್ತ ತೀರ್ಥಗಳ ಸಾರವೇ ಈ ನದಿ. ಪೂರ್ವದಲ್ಲಿ ಮಹೀನದಿ ಎಂದೂ ತರುವಾಯ ಧಾರಾನದಿಯೆಂದೂ, ಕುಮಾರಸ್ವಾಮಿಗೆ ತೀರ್ಥಾಭಿಷೇಕವಾದ ನಂತರ ಕುಮಾರ ಧಾರಾನದಿಯೆಂದೂ ಖ್ಯಾತವಾಯಿತು. ಚರ್ಮವ್ಯಾಧಿಗಳು ಈ ತೀರ್ಥಸ್ನಾನದಿಂದ ಪರಿಹಾರವಾಗುತ್ತವೆ. ಶ್ರಾವಣ ಮಾಸದ ಅಮಾವಾಸ್ಯೆ ಮತ್ತು ಸಂಕ್ರಾಂತಿಯಂದು ಈ ತೀರ್ಥಸ್ನಾನ ಅತ್ಯಂತ ಪುಣ್ಯ ಫಲಪ್ರದವೆಂಬ ನಂಬಿಕೆ ಜನರಲ್ಲಿ ಬೆಳೆದು ಬಂದಿದೆ. ದರ್ಪಣ ತೀರ್ಥ ಮತ್ತು ಮತ್ಸ್ಯ ತೀರ್ಥ ಇವುಗಳು ಇಲ್ಲಿನ ಇತರ ಪುಣ್ಯ ತೀರ್ಥಗಳು. ಬಿಲದ್ವಾರ ಇಲ್ಲಿನ ಇನ್ನೊಂದು ಪವಿತ್ರ ಸ್ಥಾನ. ದೇವಸ್ಥಾನ ಅರ್ಧ ಕಿ.ಮೀ. ದಕ್ಷಿಣಕ್ಕೆ ಈ ಬಿಲದ್ವಾರ ಕಾಣಿಸುತ್ತದೆ. ಪೂರ್ವಕಾಲದಲ್ಲಿ ವಾಸುಕಿಯು ಗರುಡನ ಬಾಧೆ ತಾಳಲಾರದೆ ಈ ಗುಹೆಯಲ್ಲಿ ವಾಸವಾಗಿದ್ದನು ಎಂದು ಪ್ರತೀತಿ.

**ಈ ವರ್ಷದ ಷಷ್ಠಿ ಉತ್ಸವವು 2.12.2019 ರಂದು ನಡೆಯಲಿದೆ. ಪ್ರತಿವರ್ಷ ವರ್ಷಾವಧಿ ಮಹೋತ್ಸವವು ಕಾರ್ತಿಕ ಮಾಸದ ದ್ವಾದಶಿಯಂದು ಆರಂಭವಾಗಿ ಮಾರ್ಗಶಿರ ಪೌರ್ಣಿಮಿಯಂದು ಅಂತ್ಯಗೊಳ್ಳುತ್ತದೆ. ಕಾರ್ತಿಕ ಅಮಾವ್ಯಾಸೆಯಂದು ಲಕ್ಷ ದೀಪೋತ್ಸವ, ನಂತರ ಪಾಡ್ಯ ಬಿದಿಗೆ, ತದಿಗೆ, ಚೌತಿಯಂದು ಕ್ರಮವಾಗಿ ಚಂದ್ರಮಂಡೋಲೋತ್ಸವ,ಅಶ್ವವಾಹನೋತ್ಸವ, ಮಯೂರ ವಾಹನೋತ್ಸವ, ಹೂವಿನ ತೇರಿನೋತ್ಸವ ಷಷ್ಠಿದಿನ ಪೂರ್ವಾಹ್ನ ಕಾಲದ ಸುಮೂಹೂರ್ತದಲ್ಲಿ ಶ್ರೀ ಸುಬ್ರಹ್ಮಣ್ಯಸ್ವಾಮಿ ಮತ್ತು ಉಮಾಮಹೇಶ್ವರರ ಸಮೇತವಾಗಿ ರಥೋತ್ಸವ, ಗರುಡ ದರ್ಶನವಿಲ್ಲದ ಈ ಕ್ಷೇತ್ರಕ್ಕೆ ಅಂದು ಗರುಡದರ್ಶನ ನೀಯುವುದು ಈ ಕ್ಷೇತ್ರ ಮಹಿಮೆ. ಸಂತಾನ ಪ್ರಾಪ್ತಿ, ನಾಗ ದೋಷ ಮತ್ತು ರೋಗ ನಿವಾರಣೆ, ಶಕ್ತಿ ಜ್ಞಾನವೃದ್ಧಿಗಾಗಿ ಭಕ್ತರು ಈ ಕ್ಷೇತ್ರಕ್ಕೆ ಭೇಟಿ ನೀಡುತ್ತಾರೆ. ಯಾತ್ರಿಕರ ತೊಂದರೆಗಳನ್ನು ನಿವಾರಿಸಲು ದೇವಸ್ಥಾನದ ಆಡಳಿತವು ವ್ಯಾಪಕವಾದ ಕ್ರಮಗಳನ್ನು ಕೈಗೊಂಡಿದೆ.**

**ಸರ್ಪಸಂಸ್ಕಾರ, ನಾಗ ಪ್ರತಿಷ್ಠೆಯ ತವರು.**

ಇತಿಹಾಸ ಪ್ರಸಿದ್ಧ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮುಖ್ಯ ಸೇವೆಯಾದ ಸರ್ಪ ಸಂಸ್ಕಾರ, ನಾಗಪ್ರತಿಷ್ಠೆ ಮಾಡಿಸುವ ಭಕ್ತರ ದಿನದಿಂದ ದಿನಕ್ಕೆ ಅಧಿಕಗೊಳ್ಳುತ್ತದೆ. ಜಾತಿ, ಮತ ಬೇದವಿಲ್ಲದೆ ಎಲ್ಲರೂ ಮಾಡುವ ವಿಶಿಷ್ಟ ಸೇವೆ ಇದು. ಸರ್ಪ ದೋಷದಿಂದಾಗಿ ದೊರೆಯುವ ವಿವಾಹ ಭಾಗ್ಯ, ಮಕ್ಕಳಾಗದ ಚಿಂತೆ, ದೀರ್ಘ ಕಾಲದ ಕಾಯಿಲೆ, ಆರ್ಥಿಕ ನಷ್ಟ ಮೊದಲಾದ ಸಮಸ್ಯೆಗಳಿಗೆ ಸರ್ಪಸಂಸ್ಕಾರ, ನಾಗಪ್ರತಿಷ್ಠೆ ಸೇವೆಯಿಂದ ಪರಿಹಾರ ಆಗುತ್ತದೆ ಎಂಬುದು ಭಕ್ತ ಜನರ ನಂಬಿಕೆ. ಹಾಗಾಗಿ ಈ ಸೇವೆಯನ್ನು ಸರ್ವಧರ್ಮೀಯರೂ ನಂಬಿ ಮಾಡುತ್ತಾರೆ.

ಸರ್ಪ ಸಂಸಾರವೆಂದರೆ ಎರಡು ದಿನ ನಡೆಸುವ ಸರ್ಪದ ಉತ್ತರಕ್ರಿಯೆ. ನಾಗ ಪ್ರತಿಷ್ಠೆಯು ನಾಗಕುಲದ ಅಭಿವೃದ್ಧಿಯ ಸಂಕೇತ. ಇದರಿಂದ ಭಕ್ತರ ಕುಲ ಕೂಡಾ ಅಭಿವೃದ್ಧಿಯಾಗುತ್ತದೆ ಎಂಬುದು ನಂಬಿಕೆ. ಉಪನಯನ ಸಂಸ್ಕಾರವಿರುವ ವರ್ಗದವರು ಈ ಕ್ರಿಯೆ ಮಾಡುವಂತಿಲ್ಲ, ತಂದೆಯೇ ಅದನ್ನು ನೆರವೇರಿಸಬೇಕು. ವೃದ್ಧಾಪ್ಯ, ಅಸೌಖ್ಯಗಳಿಂದ ಅಶಕ್ತರಾಗಿದ್ದರೆ ಮಾತ್ರ ಮಕ್ಕಳಿಂದ ಈ ಕ್ರಿಯೆ ನಡೆಸಬಹುದಾಗಿದೆ. ಉಪನಯನ ರಹಿತ ವರ್ಗದವರು ಈ ಸೇವೆಯನ್ನು ಇನ್ನೊಬ್ಬ ಬ್ರಾಹ್ಮಣ ಕರ್ತೃವಿನ ಮೂಲಕ ನೆರವೇರಿಸಬಹುದು. ಅವರಿಗೆ ದೇವಳದ ವತಿಯಿಂದಲೇ ಕರ್ತೃಗಳನ್ನು ನಿಯೋಜಿಸಿ ಸೇವೆಯನ್ನು ಸರದಿ ಪ್ರಕಾರ ನಡೆಸಿ ಕೊಂಡು ಬರಲಾಗುತ್ತದೆ. ಆದರೆ ದೇವಳದಲ್ಲಿ ಮುಂದಾಗಿ ತಮ್ಮ ಹೆಸರನ್ನು ನೊಂದಾಯಿಸುವ ವ್ಯವಸ್ಥೆ ಮಾಡಲಾಗಿದೆ.

**ತೀರ್ಥಪ್ರಬಂಧದಲ್ಲಿ 'ಸುಬ್ರ ಹ್ಮಣ್ಯ ಸುತ್ತಿ'**

ಆದಿ ಸುಬ್ರಹ್ಮಣ್ಯನೇ, ನಿನ್ನ ಹೃತ್ಕಮಲದೊಳಗೆ ಎಲ್ಲರ ಹೃದಯಗಳು ಅಡಕವಾಗಿವೆ.ಅವೆಲ್ಲವೂ ಶ್ರೀ ಹರಿಗೆ ಸಮರ್ಪಣೆಯಾಗಿದೆ. ಶಾಂತನಾಗಿ ಆತನನ್ನು ಧ್ಯಾನಿಸಲು ಸಾಧ್ಯವಾಗಿದೆ. ಹೇ ಷಣ್ಮುಖನೇ ನೀನು ಶ್ರೀ ವಿಷ್ಣುತೀರ್ಥ ಮುನಿಯ ಪರಮಾಪ್ತ ಸ್ನೇಹಿತನು.ತಾರಕಾಸುರನ ಶತ್ರುವಾಗಿದ್ದೀಯ. ಶ್ರೀ ಕೃಷ್ಣನ ಪರಮಾಪ್ತ ಭಕ್ತನಾಗಿದ್ದೀಯ. ಸ್ಮರಣೆ ಮಾತ್ರದಿಂದಲೇ ಭಕ್ತರ ಸಂಕಷ್ಟಗಳೆಲ್ಲವನ್ನೂ ಕಳೆಯುವಷ್ಟರ ಮಟ್ಟಿಗೆ ಸಮರ್ಥನಿದ್ದೀಯ.ದಯ ಮಾಡಿ ನಮ್ಮ ಮೇಲೆ ಕೃಪೆ ತೋರು. ಪರಬ್ರಹ್ಮ ಜ್ಞಾನವನ್ನು ದಯಪಾಲಿಸು

ಎಂದು ಶ್ರೀ ವಾದಿರಾಜ ತೀರ್ಥರು ತಮ್ಮ ತೀರ್ಥ ಪ್ರಬಂಧ ಗ್ರಂಥದಲ್ಲಿ ಸುಬ್ರಹ್ಮಣ್ಯ ಸ್ವಾಮಿಯನ್ನು ಸ್ತುತಿಸುತ್ತಾರೆ.

### ಕೊಪ್ಪರಿಗೆ ಏರುವುದು ವಿಶೇಷ

ಕಾರ್ತಿಕ ಬಹುಳ ದ್ವಾದಶಿಯಂದು ಕುಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಕೊಪ್ಪರಿಗೆ ಏರುವುದರೊಂದಿಗೆ ಸಂಭ್ರಮದ ವಾರ್ಷಿಕ ಜಾತ್ರೋತ್ಸವ ಆರಂಭವಾಗುತ್ತದೆ. ಎಲ್ಲಾ ಕ್ಷೇತ್ರಗಳಲ್ಲಿ ಕೊಡಿ ಏರುವುದರ ಮೂಲಕ ಜಾತ್ರೆ ಆರಂಭವಾದರೆ, ಕುಕ್ಕೆ ಕ್ಷೇತ್ರದಲ್ಲಿ ಮಾತ್ರ ಕೊಪ್ಪರಿಗೆ ಏರುವುದರೊಂದಿಗೆ ವಾರ್ಷಿಕ ಜಾತ್ರೋತ್ಸವ ಆರಂಭಗೊಳ್ಳುವುದು ವಿಶೇಷ. ರಾಮ-ಲಕ್ಷ್ಮಣ ಎಂಬ ಹೆಸರಿನ ಜೋಡಿ ಅನ್ನದ ಕೊಪ್ಪರಿಗೆಗಳಿಗೆ ವಿಶೇಷ ಪೂಜೆ ಸಲ್ಲಿಸಿ, ಬಳಿಕ ಸುಮೂಹೂರ್ತದಲ್ಲಿ ದೇವಳದ ಒಳಾಂಗಣದಲ್ಲಿರುವ ದೊಡ್ಡದಾದ ಎರಡು ಒಲೆಗಳ ಮೇಲೆ ಏರಿಸಲಾಗುವುದು... ಕೊಪ್ಪರಿಗೆಗಳಲ್ಲಿ ಅನ್ನ ಬೆಂದ ಬಳಿಕ ಅದಕ್ಕೆ ಪೂಜೆ ಸಲ್ಲಿಸಲಾಗುವುದು. ಅನ್ನದಾನ ಕ್ಷೇತ್ರವೆಂದು ಪ್ರಸಿದ್ಧವಾಗಿರುವ ಶ್ರೀ ಕ್ಷೇತ್ರದಲ್ಲಿ ಜಾತ್ರೆಯ ಸಂದರ್ಭದಲ್ಲಿ ನಿರಂತರ ಅನ್ನದಾನ ನಡೆಯುವುದು.

### ಚಂಪಾ ಷಷ್ಠಿ

ಮಾರ್ಗಶಿರ ಶುದ್ಧ ಷಷ್ಠಿಯನ್ನು ಚಂಪಾಷಷ್ಠಿ ಎಂದು ಕರೆಯಲಾಗಿದೆ. ಇದು ಸುಬ್ರಹ್ಮಣ್ಯನಿಗೆ ಅತ್ಯಂತ ಪ್ರಿಯವಾದ ದಿನ. ಈ ದಿನ ಕುಕ್ಕೆಕ್ಷೇತ್ರದಲ್ಲಿ ಶ್ರೀಸ್ವಾಮಿಯು ಸುಮೂರ್ತದಲ್ಲಿ ಬ್ರಹ್ಮರಥಾರೋಹಣನಾಗುತ್ತಾನೆ. ಇದಕ್ಕಿಂತ ಮೊದಲು ಉಮಾಮಹೇಶ್ವರ ದೇವರು ಮತ್ತು ಸುಬ್ರಹ್ಮಣ್ಯ ದೇವರು ಒಂದೇ ಪಲ್ಲಕ್ಕಿಯಲ್ಲಿ ಬಂದು, ಉಮಾಮಹೇಶ್ವರ ದೇವರು ಪಂಚಮಿ ರಥದಲ್ಲಿ, ಸುಬ್ರಹ್ಮಣ್ಯ ದೇವರು ಬ್ರಹ್ಮರಥದಲ್ಲೂ ವಿರಾಜಮಾನರಾಗುತ್ತಾರೆ ಶ್ರೀ ದೇವರ ಬ್ರಹ್ಮರಥಾರೋಹಣವಾದ ನಂತರ ಸುವರ್ಣ ದೃಷ್ಟಿಯಾಗುತ್ತದೆ. ಈ ಸಂದರ್ಭದಲ್ಲಿ ಗರುಡನು ಬಂದು ಮೂರು ಪ್ರದಕ್ಷಿಣೆ ಹಾಕುತ್ತಾನೆ ಎಂಬ ನಂಬಿಕೆ ಇದೆ. ಮೊದಲಿಗೆ ಪಂಚಮಿ ರಥವನ್ನು ಎಳೆದರೆ ನಂತರ ಶ್ರೀಸ್ವಾಮಿಯ ಚಂಪಾಷಷ್ಠಿ ಬ್ರಹ್ಮರಥೋತ್ಸವವು ಜರುಗುತ್ತದೆ. ಭಕ್ತಾದಿಗಳು ತಮ್ಮ ಹರಕೆಯಂತೆ ಕಾಳುಮೆಣಸು, ಹಣ ಮತ್ತು ಏಲಕ್ಕಿ ಇತ್ಯಾದಿ ದವಸಧಾನ್ಯಗಳನ್ನು ರಥಕ್ಕೆ ಎಳೆದು ಕೃತಾರ್ಥರಾಗುತ್ತಾರೆ.

### ದೀವಟಿಗೆ ಸಲಾಂ

ರಾಜರ ಆಳ್ವಿಕೆಯ ಪ್ರಭಾವ ಇಲ್ಲಿ ದಟ್ಟವಾಗಿತ್ತು ಎಂಬುದನ್ನು ದೇವಸ್ಥಾನದ ರಿವಾಜುಗಳು ಸ್ಪಷ್ಟಪಡಿಸುತ್ತವೆ. ಮುಸ್ಸಂಜೆಯ ಹೊತ್ತಿನಲ್ಲಿ ದೀವಟಿಗೆ ಸಲಾಂ (ಕಟ್ಟಿಗೆ ಕೋಲಿನವರು ದೀವಟಿಗೆ ಬೆಳಕಿನಲ್ಲಿ ಒಳಾಂಗಣ, ಹೊರಾಂಗಣಕ್ಕೆ ಪ್ರದಕ್ಷಿಣೆ ಒಂದು ದೇವರನ್ನು ಸುತ್ತಿಸುವುದು) ಇಲ್ಲಿ ನಿತ್ಯ ನಡೆಯುತ್ತದೆ.

### ರಥಗಳದ್ದೇ ಜಾತ್ರೆ

ಕುಕ್ಕೆ ಸುಬ್ರಹ್ಮಣ್ಯದ ಜಾತ್ರಾ ವೈಭವಕ್ಕೆ ರಥಗಳೇ ಪ್ರಮುಖ ಇಲ್ಲಿ ಅಸಂಖ್ಯಾತ ರಥಗಳ ಮೂಲಕವೇ ದೇವರು ಭಕ್ತರಿಗೆ ತನ್ನ ದರ್ಶನ ನೀಡುವುದರಿಂದ ಇಲ್ಲಿ ರಥಗಳದ್ದೇ ಜಾತ್ರೆ.

### ರಾಜಗಾಂಭೀರ್ಯದ ಬ್ರಹ್ಮರಥ

ಶ್ರೀಕ್ಷೇತ್ರದ ಬ್ರಹ್ಮರಥವು ಸುಮಾರು 400 ವರ್ಷಗಳಿಗಿಂತಲೂ ಹಳೆಯದು ಎಂದು ಹೇಳಲಾಗುತ್ತದೆ. ಈ ರಥವು ನಾಡಿನ ಅತ್ಯಂತ ಎತ್ತರವಾದ ತೇರುಗಳಲ್ಲಿ ಒಂದು. ಇದನ್ನು ಬೆತ್ತದಿಂದಲೇ ಕಟ್ಟುತ್ತಾರೆ. ಇದನ್ನು ಎಳೆಯಲು ಕೂಡ ಬೆತ್ತವನ್ನೆ ಬಳಸುವುದೂ ವಿಶೇಷ ಈ ರಥದಲ್ಲಿ ರಾಮಾಯಣ ಮಹಾಭಾರತದ ಕೆತ್ತನೆಗಳು ಮನಮೋಹಕವಾಗಿದ್ದು ಇದನ್ನು ಹಿಂದೆ 18 ಅಂತಸ್ತುಗಳಲ್ಲಿ ಕಟ್ಟುತ್ತಿದ್ದರು. ಅದು ಇಳಿಕ್ಕಿಳಿದು ಈಗ ಐದಾಗಿದೆ ಎಂದು ಹೇಳಲಾಗುತ್ತದೆ.

### ನೌಕಾವಿಹಾರ ಮತ್ತು ಅವಭೃಥೋತ್ಸವ

ಪಾವನತೀರ್ಥ ಕುಮಾರಧಾರದಲ್ಲಿ ಕುಕ್ಕೆ ಸುಬ್ರಹ್ಮಣ್ಯ ದೇವರ ನೌಕಾವಿಹಾರ ಮತ್ತು ಅವಭೃಥೋತ್ಸವ ನಡೆಯುತ್ತದೆ. ಬೆಳಗ್ಗೆ ದೇವಳದ ದ್ವಾದಶಿ ಮಂಟಪದಲ್ಲಿ ಓಕುಳಿ ಪೂಜೆ ನಡೆದು, ನಂತರ ಓಕುಳಿ ಚಲ್ಲಾಟ, ದೇವರಿಗೆ ಓಕುಳಿ ಸಮರ್ಪಣೆ ತದನಂತರ ಭಕ್ತಾದಿಗಳಿಗೆ ಓಕುಳಿ ಪ್ರೋಕ್ಷಣೆ ಮತ್ತು ಓಕುಳಿ ಚೆಲ್ಲಾಟ ನಡೆದು ನಂತರ ದೇವಳದಿಂದ ಹೊರಟು ಬಿಲದ್ವಾರದ ಕಟ್ಟೆಯಲ್ಲಿ ಪೂಜೆ. ನಂತರ ಕುಮಾರ ಧಾರ ನದಿಯಲ್ಲಿ,ಮಾವು, ಬಾಳೆಗಳನ್ನೊಳಗೊಂಡು ತಳಿರು ತೋರಣ ಮತ್ತು ಹೂವುಗಳಿಂದ ಸಿಂಗರಿಸಲ್ಪಟ್ಟ ತೆಪ್ಪದಲ್ಲಿ ಶ್ರೀ ಸ್ವಾಮಿಯ ನೌಕಾ ವಿಹಾರ ನಡೆಯುತ್ತದೆ. ತದನಂತರ ಮಂತ್ರಘೋಷಣೆಯೊಂದಿಗೆ ಕ್ಷೇತ್ರದ ಅವಭೃಥೋತ್ಸವ ಸಂಪನ್ನವಾಗುತ್ತದೆ. ಅವಭೃಥೋತ್ಸವ ಬಳಿಕ ಕುಮಾರಧಾರ ನದಿ ತೀರದ ಕಟ್ಟೆಯಲ್ಲಿ ಪೂಜೆ ನೆರವೇರುತ್ತದೆ. ಅವಭೃಥೋತ್ಸವ ಮುಗಿದ ಬಳಿಕ ದೇವಳದ ದ್ವಾದಶೀ ಮಂಟಪದಲ್ಲಿ ಪೂಜೆ ಮತ್ತು ಒಳಾಂಗಣದಲ್ಲಿ ಸಮಾಪನ ಪೂಜಾ ಕಾರ್ಯಕ್ರಮ ನೆರವೇರುತ್ತದೆ.



# ನಮ್ಮ ಆರೋಗ್ಯಕ್ಕಾಗಿ ಪ್ರಕೃತಿಯ ಕೊಡುಗೆ - ಹೊಂಗೆ

ಮೂಲ. ಡಾ॥ ಸಿ. ಮಧುಸೂದನ ಶರ್ಮ
9000761390
- ಅನುವಾದ : ಶ್ರೀಮತಿ.





ಹೊಂಗೆ ಮರವು ಗ್ರಾಮ, ಪಟ್ಟಣ, ನಗರ ಪ್ರಾಂತ್ಯಗಳಲ್ಲಿ ಸರ್ವೇ ಸಾಮಾನ್ಯವಾಗಿ ಬೆಳೆಯುವ ದಿವ್ಯವಾದ ಔಷಧೀಯ ವೃಕ್ಷ. ಇದನ್ನು ಕೆಲವು ಪ್ರಾಂತ್ಯಗಳಲ್ಲಿ ಪೊಂಗೆ ಮರ ಎಂದೂ ಕರೆಯುತ್ತಾರೆ.

ಸಂಸ್ಕೃತದಲ್ಲಿ ಇದಕ್ಕೆ ಕರಂಜ ಎಂಬ ಹೆಸರಿದೆ. ಈ ಮರದ ಎಲೆಗಳು ನುಣ್ಣಗೆ, ತೆಳುವಾದ ಎಣ್ಣೆ ಹಚ್ಚಿದಂತೆ ಇರುವುದರಿಂದ ಸ್ನಿಗ್ಧ ಪತ್ರವೆಂದೂ, ಗುಚ್ಚ - ಗುಚ್ಚವಾದ ಹೂಗಳನ್ನು ಹೊಂದಿರುವುದರಿಂದ ಗುಚ್ಚ ಪುಷ್ಪವೆಂದೂ ಇದರ ಬೀಜಗಳಲ್ಲಿ ತುಪ್ಪವನ್ನು ಹೋಲುವ ತೈಲವಿರುವುದರಿಂದ ಘೃತಪೂರಕ ಎಂದೂ ಸಂಸ್ಕೃತ ನಾಮಧೇಯಗಳಿವೆ.

'ಪೊಂಗಾಮಿಯಾ ಗ್ಲಾಬ್ರಾ' ಎಂಬ ಶಾಸ್ತ್ರೀಯ ನಾಮಧೇಯ ಹೊಂದಿರುವ ಈ ಹೊಂಗೆ ಫಾಸಿಲಿಯಾನೇಸಿ ಎಂಬ ವೃಕ್ಷ ಜಾತಿಗೆ ಸೇರಿದುದು.

ಆಂಗ್ಲದಲ್ಲಿ ಇದನ್ನು 'ಇಂಡಿಯನ್ ಬೀಚ್' ಎನ್ನುತ್ತಾರೆ.

ನಮ್ಮ ದೈನಂದಿನ ಬದುಕಿನಲ್ಲಿ ಎದುರಾಗುವ ವಿವಿಧ ಬಗೆಯ ಅನಾರೋಗ್ಯ ಸಮಸ್ಯೆಗಳಿಗೆ ಹೊಂಗೆಯನ್ನು ಹೇಗೆ ಸದ್ವಿನಿಯೋಗ ಪಡಿಸಿಕೊಳ್ಳಬಹುದೆಂದು ಪ್ರಸ್ತುತ ತಿಳಿಯೋಣ.

ಮೂಗಿನಿಂದ ಉಸಿರು ತೆಗೆದುಕೊಳ್ಳುವುದು ಕಷ್ಟವಾಗುತ್ತಿದ್ದಲ್ಲಿ:

ಹೊಂಗೆಯ ಬೀಜದ ಭಾಗಗಳನ್ನು ಬಿಡಿಸಿಕೊಂಡು ಅದರ ಮೇಲ್ಭಾಗದ ಸಿಪ್ಪೆ ತೆಗೆದು, ತಕ್ಕಷ್ಟು ನೀರು ಹಾಕಿ ನಾದಿ ಪೇಸ್ಟಿನಂತೆ ಮಾಡಿ 100 ಮಿ.ಲಿ ತುಪ್ಪದಲ್ಲಿ ಕಲಿಸಿ ಸಣ್ಣದಾದ ಉರಿಯ ಮೇಲೆ ಆ ಪೇಸ್ಟು ಕಪ್ಪಗಾಗುವವರೆಗೆ ಬಿಸಿ ಮಾಡಿ, ಕೆಳಗಿಳಿಸಿ,ಬಿಸಿಯಾರಿದ ನಂತರ ಸೋಸಿ ಶೇಖರಿಸಿಟ್ಟುಕೊಂಡು ರಾತ್ರಿ ಮಲಗುವಾಗ ಒಂದೊಂದು ಮೂಗಿನ ಹೊಳ್ಳೆಯಲ್ಲಿ 3-4 ಚುಕ್ಕೆ ಹಾಕಿಕೊಳ್ಳುತ್ತಿರಬೇಕು.

ಹೀಗೆ ಮಾಡುವುದರಿಂದ ಮೂಗಿನ ದುರ್ಮಾಂಸ ಕರಗಿ ಹೋಗುತ್ತದೆ. ಮೂಗಿನ ಒಳಭಾಗ ಒಣಗಿ , ಮೂಗು ಕಟ್ಟುವುದು ಸಹಾ ತಗ್ಗುತ್ತದೆ. ಉಸಿರನ್ನು ಸುದೀರ್ಘವಾಗಿ ಎಳೆದುಕೊಳ್ಳಲು ನೆರವಾಗುತ್ತದೆ.

## ಮಲದ್ವಾರ ಬಿರುಕುಗಳು (ಪೈಲ್ಸ್ ಅಥವಾ ಮೂಲಶಂಕೆ)

ದಿನಕ್ಕೆರಡು ಬಾರಿ ಐದಾರು ಹೊಂಗೆ ಚಿಗುರೆಲೆಗಳನ್ನು ಮೆತ್ತಗೆ ನುರಿದು 100 ಮಿ.ಲೀ. ತಾಜಾ ಮಜ್ಜಿಗೆಯಲ್ಲಿ ಕಲಿಸಿ ಸೇವಿಸುತ್ತಿರಬೇಕು.

ಇಲ್ಲವೇ 25 ಗ್ರಾಂ ಹೊಂಗೆ ಬೀಜದ ಪುಡಿಯನ್ನು 50 ಗ್ರಾಂ ಸ್ಫಟಿಕ ಬೆಲ್ಲದ ಪುಡಿಯಲ್ಲಿ ಕಲಿಸಿಟ್ಟುಕೊಂಡು ದಿನ ಹಸಿಹೊಟ್ಟೆಯಲ್ಲಿ 100 ಮಿ.ಲೀ.2-3 ಗ್ರಾಂ ಪುಡಿಯನ್ನು ಕಲಿಸಿ ಸೇವಿಸುತ್ತಿರಬೇಕು.

ಮೇಲೆ ಬಾವು ಅನಿಸಿದಲ್ಲಿ ರಾತ್ರಿ ವೇಳೆ ಹೊಂಗೆಯ ಚಿಗುರೆಲೆ 2-3 ನ್ನು ತೆಗೆದುಕೊಂಡು ಸ್ವಲ್ಪ ಹರಳೆಣ್ಣೆ ಹಾಕಿ ನುರಿದು, ಬೆಚ್ಚಗೆ ಮಾಡಿ ಮೂಲವ್ಯಾದಿ ಗಂಟುಗಳ ಮೇಲಿಟ್ಟು ಕಟ್ಟು ಕಟ್ಟಿಕೊಂಡು ಬೆಳಗ್ಗೆ ತೆಗೆದು ಬಿಡಬೇಕು.





## ಚೇಳು ಕಡಿತಕ್ಕೆ

ಹೊಂಗೆ ಬೀಜ ಹಾಗೂ ಸ್ಫಟಿಕ ಸಮನಾಗಿ ಕಲಿಸಿ ನೀರು ಸೇರಿಸಿ ಮೆತ್ತಗೆ ನುರಿದು ಚೇಳು ಕಡಿದ ಭಾಗಕ್ಕೆ ದಟ್ಟವಾಗಿ ಲೇಪಿಸಿದರೆ ಶೀಘ್ರವಾಗಿ ಉರಿ, ಪೋಟು, ನೋವುಗಳು ತಗ್ಗುತ್ತವೆ.

## ಶರೀರ ದುರ್ಗಂಧ ತಗ್ಗಲು

50 ಗಾಂನಂತೆ ಹೊಂಗೆ ಬೀಜ , ಹುಣಸೇ ಹಣ್ಣಿನ ಗೊಜ್ಜು ತೆಗೆದುಕೊಂಡು ಎರಡನ್ನು ಕಲಿಸಿ ಮೆತ್ತಗೆ ನುರಿದು ಮೈಗೆ ಪೂಸಿಕೊಂಡು ಅರ್ಧಗಂಟೆ ನಂತರ ಸ್ನಾನ ಮಾಡುತ್ತಿರಬೇಕು.

ಪುರುಷರಲ್ಲಿ ವೃಷ್ಣಣಗಳ ಬಾವು, ನವೆ, ನೋವಿಗೆ: ಹೊಂಗೆ ಬೀಜ, ಔಡಲ ಬೀಜ, ಕೆಂಜಿಗೆ ಬೀಜ ಈ ಮೂರನ್ನು ಸಮಾನವಾಗಿ ತೆಗೆದುಕೊಂಡು ಸ್ವಲ್ಪವೇ ನೀರು ಹಾಕಿ ಮೆತ್ತಗೆ ನುರಿದು ವೃಷಣಗಳ ಮೇಲೆ ಲೇಪಿಸಿ 1-2 ತಾಸು ನಂತರ ತೊಳೆದುಕೊಳ್ಳಬೇಕು.

## ಅತಿ ಮೂತ್ರಕ್ಕೆ

ಚೆನ್ನಾಗಿ ಒಣಗಿಸಿದ ಹೊಂಗೆ ಹೂವುಗಳನ್ನು ಚೆನ್ನಾಗಿ ಪುಡಿ ಮಾಡಿ ಜರಡಿ ಹಿಡಿದು ಶೇಖರಿಸಿಟ್ಟು ದಿನವೂ ಎರಡು ಬಾರಿ,ಬಾರಿಯೊಂದಕ್ಕೆ 2-3 ಗ್ರಾಂ ಪುಡಿಯನ್ನು 100.ಮಿ.ಲೀ.ಉಗುರು ಬೆಚ್ಚಗಿನ ನೀರಿನಲ್ಲಿ ಕಲಿಸಿ, ಸೇವಿಸುತ್ತಿರಬೇಕು.

## ಸೋರಿಯಾಸಿಸ್ ಎಂಬ ಚರ್ಮವ್ಯಾಧಿ ಶಮನಕ್ಕೆ

ದಿನವೂ ಒಂದು ಬಾರಿ 200 ಮಿ.ಲೀ. ನೀರಿನಲ್ಲಿ 2-3 ಗಾಂ ಹೊಂಗೆ ಬೀಜದ ಪುಡಿ , 2-3 ಗ್ರಾಂ 100 ಮಿ.ಲೀ ತಾಳೆ ಸಕ್ಕರೆ (ಕಲ್ಲುಸಕ್ಕರೆ)ಯನ್ನು ಸೇರಿಸಿ ನೀರು ಉಳಿಯುವಂತೆ ಮರಳಿಸಿ,ಕೆಳಗಿಳಿಸಿ, ಬಿಸಿಯಾರಿದ ನಂತರ ಶೋಧಿಸಿ ಸೇವಿಸುತ್ತಿದ್ದರೆ ಸೋರಿಯಾಸಿಸ್ ಎಂಬ ಚರ್ಮ ವ್ಯಾಧಿ ತಗ್ಗುವುದರ ಜೊತೆಗೆ ಸೋರಿಯಾಸಿಸ್ ಜೊತೆಗೆ ಬರುವ ಸೋರಿಯಾಸಿಸ್ ಆರ್ಥೈಟಿಸ್ ಎಂಬ ಕೀಲು ನೋವು ಸಹಾ ಕಡಿಮೆಯಾಗುತ್ತದೆ.

## ಚರ್ಮವ್ಯಾಧಿಗಳ ಬಾವಿಗೆ

ಬೇಕಾದಷ್ಟು ಹೊಂಗೆ ಬೀಜಗಳನ್ನು ತಕ್ಕಷ್ಟು ನೀರು ಅಥವಾ ನಿಂಬೆರಸ ಅಥವಾ ‘ಚಾಲ್‌ಮೋಗ್ರಾ’ ಎಂಬ ಎಣ್ಣೆಯೊಂದಿಗೆ ಕಲಿಸಿ, ಮೆತ್ತಗೆ ನುರಿದು, ಲೇಪಿಸುತ್ತಿದ್ದರೆ ಸೋರಿಯಾಸಿಸ್ ತಗ್ಗುವುದೊಂದೇ ಅಲ್ಲದೆ ಕಜ್ಜಿ, ಎಗ್ಜಿಮಾ, ಬೆವರುಸಾಲೆ, ಸಿಡುಬು ಮುಂತಾದ ಚರ್ಮವ್ಯಾಧಿಗಳು ತಗ್ಗುತ್ತವೆ.

## ಜ್ವರಕ್ಕೆ

ಹೊಂಗೆ ಬೀಜದ ಪುಡಿ - 20 ಗ್ರಾಂ, ಹಿಪ್ಪಲಿ ಚೂರ್ಣ 20 ಗ್ರಾಂ ತುಂಬೆ ಚಿಗುರಿನ ಪುಡಿ 10 ಗ್ರಾಂ ಕಲಿಸಿ ತಕ್ಕಷ್ಟು ನೀರಿನಲ್ಲಿ ಮೆತ್ತಗೆ ನುರಿದು ಶೇಂಗಾ ಬೀಜದಷ್ಟು ಮಾತ್ರೆಗಳನ್ನು ಮಾಡಿ ದಿನವೂ 2-3 ಬಾರಿಯೊಂದಕ್ಕೆ ಒಂದೊಂದು ಮಾತ್ರೆಯಂತೆ ಉಗುರು ಬೆಚ್ಚಗಿನ ನೀರಿನೊಂದಿಗೆ ಸೇವಿಸುತ್ತಿದ್ದರೆ ಅತಿ ಶೀಘ್ರದಲ್ಲಿ ವಿವಿಧ ಬಗೆಯ ತಾತ್ಕಾಲಿಕ ದೀರ್ಘ ಕಾಲಿಕ ಜ್ವರಗಳು ಕಡಿಮೆಯಾಗುತ್ತದೆ.

## ನೆಗಡಿ, ಕೆಮ್ಮಿನಂತಹ ಕಫದ ವ್ಯಾಧಿಗಳಿಗೆ

ಹೊಂಗೆ ಮರದ ಕಾಂಡವನ್ನು ಚೆನ್ನಾಗಿ ಒಣಗಿಸಿ, ಸುಟ್ಟು ಬೂದಿ ಮಾಡಿ, ಬಿಸಿಯಾರಿದ ನಂತರ ಜರಡಿ ಹಿಡಿದು ಶೇಖರಿಸಿಟ್ಟುಕೊಂಡು ದಿನವೂ ಎರಡು ಬಾರಿ ಬಾರಿಯೊಂದಕ್ಕೆ 1-2 ಗ್ರಾಂ ಬೂದಿಯನ್ನು 10 ಮಿ.ಲೀ.ಶುಂಠಿ ರಸದೊಂದಿಗೆ ಅಥವಾ ತಕ್ಕಷ್ಟು ಜೇನಿನೊಂದಿಗೆ ಕಲಿಸಿ ಸೇವಿಸಬೇಕು. ಇದರಿಂದ ನೆಗಡಿ, ಕೆಮ್ಮು, ಉಗುಳು ನುಂಗಲು ಆಗದಿರುವಿಕೆ, ಗಂಟಲು ಕೆರೆತ,ಆಯಾಸ, ಗೊರಕೆಯಂತಹ ಕಫಕ್ಕೆ ಸಂಬಂಧಿಸಿದ ವ್ಯಾಧಿಗಳು ತಗ್ಗುತ್ತವೆ.

ಜಾತ್ಯಾದಿ ಘೃತಂ, ಕರಂಜಾದಿ ಘೃತಂ, ಬಿಲ್ವಾದಿ ಘೃತಂ ಮೊದಲಾದ ಔಷಧೀಯ ತಯಾರಿಕೆಗಳಲ್ಲೂ ಈ ಹೊಂಗೆ ಯನ್ನು ಬಳಸುತ್ತಾರೆ.

# ಗೀತಾಜಯಂತಿ

**ಮೂಲ - ವೈಷ್ಣವಾಂಘ್ರಿ ಸೇವಕ್‌ದಾಸ್**
**- 9821914642**
**ಅನುವಾದ - ಡಿ.ಎಸ್. ಭೂಮಿಕ**

ಡಿಸೆಂಬರ್ 8 ನೇ ತಾರೀಖಿಗೆ ಗೀತಾಜಯಂತಿ ಹಬ್ಬವಿರುತ್ತದೆ. ವಿಶ್ವವ್ಯಾಪಕವಾಗಿ ಸದ್ಭಾವನೆಯಿಂದ ಒಂದು ಗ್ರಂಥಕ್ಕೆ ಜರುಗಿಸಲಾಗುವ ಮಹೋತ್ಸವ ಖ್ಯಾತಿ ಕೇವಲ ಭಗವದ್ಗೀತೆ ಮಾತ್ರವೇ ಹೊಂದಿರುತ್ತವೆ. ಭಗವದ್ಗೀತೆ ಸಾಕ್ಷಾತ್ ಭಗವದ್ವಾಣಿಯ ಸ್ವರೂಪ. ಶ್ರೀಕೃಷ್ಣನೇ ಸ್ವತಃ ಪರೋಕ್ಷವಾಗಿ ಅರ್ಜುನನಿಗೆ ಉಪದೇಶಿಸಿದ ಜ್ಞಾನಾರ್ಜನೆಯೇ ಭಗವದ್ಗೀತೆ. ಭಗವದ್ಗೀತೆ ಆವಿರ್ಭವಿಸಿದ್ದೇ ಅದ್ಭುತವಾದ ವಿಜಯ, ಐಶ್ವರ್ಯ, ಅಸಾಧಾರಣವಾದ ಶಕ್ತಿ, ನೀತಿಯನ್ನು ಪ್ರಸಾದಿಸಲೆಂದು ತಿಳಿಯುತ್ತಲೇ ಗೀತೆಯ ಮೇಲೆ ಅಮೋಘವಾದ, ಅಪೂರ್ವವಾದ ಅಭಿಮಾನ ವುಂಟಾಗುತ್ತದೆ. ಪ್ರಪಂಚದಲ್ಲಿ ಯಾರಾದರೂ ವಿಜಯವನ್ನೇ ಬಯಸುತ್ತಾರೆ. ಆದರೆ ವಿಜಯವು ನಿಶ್ಚಿತವಾಗಿ ದೊರಕುವುದೆಂದು ಬಹಳ ಸ್ವಲ್ಪ ಶೇಕಡವಾರು ಮಂದಿಯೇ ಹೇಳುತ್ತಾರೆ. ಆದರೆ ವಿಜಯವು ಬೇಡವೆಂದು ಹೇಳಿದ ವ್ಯಕ್ತಿಯೆಂದರೆ ಅದು ಅರ್ಜುನನೊಬ್ಬ ಮಾತ್ರವೇ. "ವಿಜಯವೂ ಬೇಡ ರಾಜ್ಯಭೋಗವೂ ಬೇಡ."ಎಂದು ಹೇಳಿದ ಅರ್ಜುನನೇ ಭಗವದ್ಗೀತೆಯ ಉಪದೇಶವನ್ನು ಆಲಿಸಿದ ಬಳಿಕ ಸಮಸ್ತ ವಿಜಯವನ್ನು ಸಾಧಿಸಿ 'ವಿಜಯ'ನಾಗಿ ಪ್ರಸಿದ್ಧಿ ಹೊಂದಿದ್ದಾನೆ.ಯಾರಾದರೂ ಸರಿಯೇ ವಿಜಯವನ್ನು ಬೇಡವೇ ಬೇಡವೆಂದು ಭಾವಿಸಿದರೂ ಭಗವದ್ಗೀತೆಯನ್ನು ಶ್ರದ್ಧೆಯಿಂದ ಅನುಸರಿಸಿದರಲ್ಲಿ ವಿಜಯವನ್ನು ಖಚಿತವಾಗಿ ಹೊಂದುತ್ತಾನೆ. ಇದರಿಂದ ನಮಗೆ ಅರ್ಥವಾಗುವುದೇನೆಂದರೆ ಪ್ರಪಂಚದಲ್ಲಿ ವಿಜಯವನ್ನು ಬಯಸುವವರು ನೂರಕ್ಕೆ ನೂರು ಮಂದಿಯಿದ್ದರೂ, ವಿಜಯವು ನಿಶ್ಚಯವಾಗಿ ಉಂಟಾಗಿಯೇ ತೀರುತ್ತದೆಂದು ನಿಖರವಾಗಿ ಹೇಳಬಲ್ಲ ಧೀಮಂತರು ನೂರಕ್ಕೆ ಹತ್ತರಷ್ಟು ಸಹಾ ಇಲ್ಲದೇ ಇರಬಹುದು. ಆದರೆ ಮನುಷ್ಯ ಯಾವಾಗ ಗೀತಾಧ್ಯಯನ ಮಾಡಿ ಗೀತೋಪದೇಶವನ್ನು ಅನುಸರಿಸಿ ಜೀವನವನ್ನು ನಡೆಸುತ್ತಾನೋ. ಆಗ ಮಾತ್ರ ನೂರಕ್ಕೆ ನೂರು ಪಾಲು ವಿಜಯವನ್ನು ಸಾಧಿಸುತ್ತಾನೆ. ಅಷ್ಟೇ ಅಲ್ಲ ವಿಜಯವನ್ನು ಸಾಧಿಸಿಯೇ ತೀರುತ್ತೇನೆಂಬ ಛಲವನ್ನು ಹೊಂದುತ್ತಾನೆ.ಇದೇ ಗೀತೆಯ ಮಹಿಮೆ. ಮಾನವರಿಗೆ ಜೀವನದಲ್ಲಿ ಪರಮವಾದ ವಿಜಯವನ್ನು ತಂದು ಕೊಡಲೆಂದೇ ಆವಿರ್ಭವಿಸಿದೆ ಈ ಗೀತೆ.

ಭಗವದ್ಗೀತೆಯನ್ನು ಅನುಸರಿಸುವುದು ವಿಜಯವನ್ನು ಹೇಗೆ ತಂದು ಕೊಡುತ್ತದೆಂದು ವಿದ್ಯಾರ್ಥಿಗಳು ಅರ್ಥಮಾಡಿಕೊಂಡರೆ ಖಚಿತವಾಗಿ ಅವರು ಗೀತಾಭಿಮಾನಿಗಳಾಗುತ್ತಾರೆ. ಗೀತಾಭಿಮಾನದ ಮೂಲಕ ಉಂಟಾಗುವ ಮೊಟ್ಟ ಮೊದಲ ಪ್ರಭಾವವೆಂದರೆ ಮೋಹವನ್ನು ತೊಲಗಿಸುವುದು ಮೋಹವೆಂದರೆ ಮಾಡಬೇಕಾದ ಕೆಲಸಗಳನ್ನು ಬಿಟ್ಟು ಮತ್ಯಾವುದೋ ಅನಾವಶ್ಯಕವಾದ ಅಲೋಚನೆಯಲ್ಲಿ ಬೀಳುವುದು. ಅರ್ಜುನನು ಯುದ್ಧ ಹೊಡಲೆಂದೇ ರಣರಂಗಕ್ಕೆ ಬಂದು ಆ ಕೆಲಸವನ್ನೇ ಮಾಡದೇ ಸನ್ಯಾಸವನ್ನು ಸ್ವೀಕರಿಸುತ್ತೇನೆಂಬ ನಿರ್ಧಾರಕ್ಕೆ ಬರುವುದು ಮೋಹದ ಹೆಗ್ಗುರುತು.ಉತ್ತಮ ರೀತಿಯಲ್ಲಿ ಅಭ್ಯಸಿಸಬೇಕಾದ ವಿದ್ಯಾರ್ಥಿಗಳು ಓದನ್ನು ಬಿಟ್ಟು ಬೇರೆ ಕಾರ್ಯ



ವೆಸಗದಂತೆ ಇರಬೇಕಾದ ವಿದ್ಯಾರ್ಥಿಗಳು ಅದನ್ನೇ ಬಿಟ್ಟು ಬೇರಾವುದೋ ಕಾಲಕ್ಷೇಪದಲ್ಲಿ ಬೀಳುವುದು ಮೋಹವೇ ಸರಿ. ಇದು ಸುಮಾರು ಶೇಕಡ ಎಂಭತ್ತು ವಿದ್ಯಾರ್ಥಿಗಳಲ್ಲಿ ಕಂಡು ಬರುತ್ತದೆ. ಗೀತಾಭ್ಯಾಸದ ಮೂಲಕ ಮೋಹವು ತೊಲಗಿ ಸ್ಮೃತಿ ದೊರಕುತ್ತದೆ. ಸ್ಮೃತಿಯೆಂದರೆ ಜ್ಞಾಪಕವು. ಅರ್ಜುನನಿಗೆ ಗೀತಾ-ಶ್ರವಣದ ನಂತರವೇ ತನ್ನ ಕರ್ತವ್ಯವು ನೆನಪಿಗೆ ಬಂದಂತೆ ವಿದ್ಯಾರ್ಥಿಗಳಿಗೆ, ಯುವಕರಿಗೆ ಸಹಾ ತಮ್ಮ ಪ್ರಸ್ತುತ ಕರ್ತವ್ಯಗಳು ಜ್ಞಾಪಕಕ್ಕೆ ಬರುತ್ತವೆ. ಅದೇ ಒಳ್ಳೆಯ ಪರಿ ಣಾಮ. ಕರ್ತವ್ಯ ನೆನಪಿಗೆ ಬರುತ್ತಲೇ ಆಗುವ ಇನ್ನೊಂದು ಉತ್ತಮ ಪರಿಣಾಮವೆಂದರೆ ಚಂಚಲತೆ ತೊಲಗಿ ಸುಸ್ಥಿರತೆಯುಂಟಾಗುವುದು. ಇಂತಹ ಅದ್ಭುತ ವಾದ ಪರಿಣಾಮ ಜೀವನದಲ್ಲಿ ಮನೆಮಾಡುತ್ತಲೇ ಮನುಷ್ಯನಲ್ಲಿನ ಎಲ್ಲಾ ಸಂದೇಹಗಳು ಬಗೆಹರಿದು ಬಿಡುತ್ತವೆ. ಆಗ ಕಾರ್ಯನಿರ್ವಹಣೆಯೊಂದೇ ಕಣ್ಮುಂದೆ ಬಂದು ನಿಂತು ಬಿಡುತ್ತದೆ. "ಕರಿಷ್ಯೇ ವಚನಂ ತವ - ಶ್ರೀ ಕೃಷ್ಣಾ! ನೀನು ಕೊಟ್ಟಿರುವ ಕಾರ್ಯ ಪೂರೈಸಲು ನಾನು ಸಿದ್ಧನಾಗಿದ್ದೇನೆ" ಎಂದು ಅರ್ಜುನನು ಆಗ ಕೃಷ್ಣನಿಗೆ ಹೇಳಿದ್ದಾನೆ.

"ಕೃಷಿತೋ ನಾಸ್ತಿ ದುರ್ಭಿಕ್ಷಂ - ಕೃಷಿ ಮಾಡುವವನಿಗೆ ಅಸಾಧ್ಯ ವಾದುದಾವುದೂ ಇರದು"ಆದರೆ ನಿರಂತರವಾಗಿ ಕೃಷಿ ಮಾಡುವ ಅದ್ಭುತವಾದ ಸ್ಥಿತಿಯನ್ನು ಭಗವದ್ಗಿತೋಪ ದೇಶದ ಪಾಲನೆ ಎಲ್ಲರಿಗೂ ತಂದು ಕೊಡುತ್ತೆ. ಈ ರೀತಿಯಾಗಿ ಮಾನವರೆಲ್ಲರನ್ನು ಕರ್ತವ್ಯ ಪಾರಾಯಣರ ನ್ನಾಗಿ ಮಾಡಿ ಜೀವನದಲ್ಲಿ ಅದ್ಭುತವಾದ ವಿಜಯವನ್ನು ಸಾಧಿಸುವಂತೆ ಪರಿರ್ತಿಸಲೆಂದೇ ಭಗವದ್ಗೀತೆ ಆವಿರ್ಭವಿಸಿದೆ. ಯಾವಾಗ ಮನುಷ್ಯನು ವಿಶೇಷವಾಗಿ ಯುವಕರು ಗೀತಾಭಿಮಾನಿಗಳಾಗಿ ಪರಿವರ್ತನೆಗೊಳ್ಳುತ್ತಾರೋ ಆಗ ಜೀವನದಲ್ಲಿ ಅಸಾಧ್ಯವಾದ ವಿಜಯದ ಸಾಲನ್ನೇ ಸಾಧಿಸಿಬಿಡುತ್ತಾರೆ. ಇಂತಹ ಗೀತಾ ಜಯಂತಿ ಕಾರ್ಯ ಕ್ರಮವು ನಿಮ್ಮ ಸುತ್ತುಮುತ್ತಲಲ್ಲಿ ಎಲ್ಲಿ ನಡೆದರೂ ತಪ್ಪದೇ ಪಾಲ್ಗೊಳ್ಳಿರಿ. ಅದೇ ನೀವು ಗೀತಾಭಿಮಾನಿ ಗಳಾಗಲು ಪ್ರಥಮ ಹೆಜ್ಜೆ; ಪ್ರಪ್ರಥಮ ಪ್ರಯತ್ನ. ಈ ಚಿಕ್ಕದೊಂದು ಪ್ರಯತ್ನವೇ ನಿಮ್ಮ ಜೀವನದಲ್ಲಿ ಅಖಂಡ ವಾದ ವಿಜಯವನ್ನು ಅವಿಚ್ಛಿನ್ನವಾದ ಆನಂದವನ್ನು ಅಬೋಧವಾದ ಸುಖವನ್ನು ತಂದುಕೊಡುತ್ತದೆ.

**"ವಿಜಯ ಮಸ್ತು"**

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 ಯ | ಮು | ನೈ | ತ್ತು | ರೈ | ವ | ನೈ | ಕ್ಕ |
| 2 | ಲ್ | ಡ | ಕ್ಕ | ಗ | 5 ವಂ | | ಲ್ಲಾ | ತ್ತ |
| 3 | ಯ | ಕ್ಕು | ವೈ | ಪಾ | 6 ನಂ | 11 ತೋ | 14 ವ | ರು |
| 4 | ವ | ಲ್ | ಳ್ಳ | 7 ವ | 10 ಉ | ರ | | 15 ತಿ |
| 5 | ನ್ನ | 2 ಪಾ | ರೋ | ರ್ | ಲ | ಣ | | |
| 6 | 3 13 ಅ | ನ್ರಿ | ವು | ಲ | ಹ | ಮ್ | ಳ್ಳು | 8 ಪ |
| 7 | 4 ಶ್ರೈ | ಯೊ | ದ | ನ | ಳಂ | ನಾ | ಳ್ಳಿ | 12 ಪ |
| 8 | | ತ್ತು | ಯ | 9 ವೈ | ದ | ಟ್ಟ | 16 ಕಿ | ರೈ |

ಧಾರಾವಾಹಿಕ


## ವೈಕುಂಠವನ್ನು ತೊರೆದ ಶ್ರೀ ಮಹಾಲಕ್ಷ್ಮಿ

ಸದಾ ತಾನು ನಿವಸಿಸುವ ವಿಷ್ಣುವಿನ ಹೃದಯ ಸ್ಥಾನವನ್ನು ಒದ್ದು ಅಪವಿತ್ರಗೊಳಿಸಿದ ಭೃಗುಮಹರ್ಷಿಯ ಮೇಲೆ ಕೋಪಿಸಿಕೊಳ್ಳದೇ, ಶಿಕ್ಷಿಸದೇ, ಆದರಿಸಿ, ಪ್ರೇಮದಿಂದ ಬೀಳ್ಕೊಟ್ಟದ್ದು ಆ ಮಹಾಲಕ್ಷ್ಮಿಗೆ ಸ್ವಲ್ಪವೂ ಇಷ್ಟವಾಗಲಿಲ್ಲ. ಆಕೆ ವಿಪರೀತವಾದ ಕೋಪದಿಂದ ವಿಷ್ಣುವಿನ ಮೇಲೆ ಮುನಿಸಿಕೊಂಡಳು. ವಿಷ್ಣುವು ಎಷ್ಟೇ ಸಮಾಧಾನ ಪಡಿಸಿದರೂ ಕೇಳದೇ ಆಕೆ ವೈಕುಂಠವನ್ನು ಬಿಟ್ಟು ಪಾತಾಳ ಲೋಕದಲ್ಲಿನ ಕಪಿಲಮುನಿಯ ಆಶ್ರಮಕ್ಕೆ ಬಂದು ತಪಸ್ಸಿಗೆ ಆರಂಭಿಸಿದಳು. ಮತ್ತೆ ಕೆಲವು ಕಾಲಕ್ಕೆ ದೇವತೆಗಳ ಬೇಡಿಕೆಯ ಮೇರೆಗೆ ಭೂಲೋಕದಲ್ಲಿ ಕೊಲ್ಹಾಸುರ, ಕರವೀರ ಎಂಬ ರಾಕ್ಷಸರನ್ನು ಸಂಹರಿಸಿ ಕೊಲ್ಹಾಪುರಕ್ಷೇತ್ರದಲ್ಲಿ “ಶ್ರೀಮಹಾಲಕ್ಷ್ಮಿ”ಯಾಗಿ ನೆಲೆಸಿದಳು.

ಇತ್ತ ಲಕ್ಷ್ಮೀದೇವಿ ಇಲ್ಲದ ವೈಕುಂಠದಲ್ಲಿ ಇರಲಾರದ ವಿಷ್ಣುವು ಆಕೆಯನ್ನು ಅರಸುತ್ತಾ ಕೊನೆಗೆ ಆಕೆ ಕಂಡು ಬರದೇ ಭೂಲೋಕದಲ್ಲಿ ಆದಿವರಾಹಕ್ಷೇತ್ರವನ್ನು ಸೇರಿದ. ಅಲ್ಲಿ ಹಸಿವೆ ಬಾಯಾರಿಕೆಗಳಿಂದ ಬಳಲುತ್ತಾ ಇರುವುದಕ್ಕೆ ಯಾವುದೇ ಸ್ಥಳ ದೊರೆಯದೇ ತಿರುಗುತ್ತಿದ್ದ ವಿಷ್ಣುವಿಗೆ ಈ ಕ್ಷೇತ್ರದಲ್ಲಿ “ಸ್ವಾಮಿ ಪುಷ್ಕರಿಣೀ ತೀರ್ಥ”ಅದಕ್ಕೆ ದಕ್ಷಿಣದಲ್ಲಿ ಒಂದು ಹುಣಸೇಮರ, ಅದರ ಕೆಳಗೆ ಒಂದು ದೊಡ್ಡ ಹುತ್ತ ಕಂಡು ಬಂದುವು. ದೊಡ್ಡ ಗುಹೆಯಂತೆ ಇದ್ದ ಆ ಹುತ್ತದಲ್ಲಿ ವಿಷ್ಣುವು ತಲೆಮರೆಸಿಕೊಂಡ.

ವಿಷ್ಣುವಿನ ಈ ದೀನಾವಸ್ಥೆಯನ್ನು ನೋಡಿದ ಶಿವ, ಬ್ರಹ್ಮ ಇಬ್ಬರೂ ಕೊಲ್ಹಾಪುರಕ್ಕೆ ಹೋಗಿ ಶ್ರೀ ಮಹಾಲಕ್ಷ್ಮಿಗೆ ಸ್ವಾಮಿಯ ಪರಿಸ್ಥಿತಿಯನ್ನು ವಿವರಿಸಿ, ಆತನನ್ನು ಸೇರಬೇಕೆಂದು ಕೇಳಿಕೊಂಡರು.

ಆದರೆ ಆಕೆ ಅವರ ಮಾತನ್ನು ಕೇಳಲಿಲ್ಲ. ಕೊನೇ ಪಕ್ಷ ಆತನ ಹಸಿವು ನೀರಡಿಕೆಗಳಾನ್ನಾದರೂ ತೀರಿಸಬೇಕೆಂದು ಆಕೆಯನ್ನು ಒಪ್ಪಿಸಿದರು. ಮೂವರು ವರಾಹಕ್ಷೇತ್ರಕ್ಕೆ ಬಂದರು. ಬ್ರಹ್ಮನು ಗೋವಾಗಿ, ಶಿವನು ಕರುವಾಗಿ, ಲಕ್ಷ್ಮೀದೇವಿಯು ಗೋವನ್ನು ಪಾಲಿಸುವವಳಾಗಿ, ಅವರನ್ನು ಆ ಪ್ರಾಂತ್ಯದ ರಾಜನಾದ ಚೋಳ ರಾಜನಿಗೆ ವಿಕ್ರಯಿಸಿ ಹೊರಟುಹೋದಳು.



ರಾಜನ ಪಶುಗಳ ಮಂದೆಯಲ್ಲಿ ಸೇರಿಕೊಂಡ ಆ ಹಸು, ಕರು ಪ್ರತಿದಿನ ಗೋಪಾಲಕನ ಕಣ್ತಪ್ಪಿಸಿ ವರಾಹ ಕ್ಷೇತ್ರದಲ್ಲಿನ ಹುತ್ತದಲ್ಲಿ ನೆಲೆಸಿದ್ದ ವಿಷ್ಣುವಿಗೆ ಹಾಲನ್ನು ಕರೆಯುತ್ತಾ ಹಸಿವೆಯನ್ನು ನೀಗಿಸುತ್ತಿತ್ತು. ಪ್ರತಿದಿನ ಹುತ್ತದಲ್ಲಿನ ಸ್ವಾಮಿಗೆ ಹಾಲನ್ನೆಲ್ಲಾ ನೀಡುತ್ತಿದ್ದರಿಂದ ಮನೆಯ ಬಳಿ ಹಾಲನ್ನು ನೀಡುತ್ತಿರಲಿಲ್ಲ. ಈ ರೀತಿ ನಡೆಯುತ್ತಿರುವುದರ ಕಾರಣ ತಿಳಿಯಬೇಕೆಂಬ ಆಸಕ್ತಿಯಿಂದ ಗೋಪಾಲಕನು ಬಚ್ಚಿಟ್ಟುಕೊಂಡು ಆ ಹಸು ಕರುವನ್ನು ಅನುಸರಿಸಿದ.

ಅಷ್ಟೇ! ಮರು ದಿನ ಬೆಟ್ಟದ ಮೇಲಿನ ಹುತ್ತದಲ್ಲಿ ಹಾಲನ್ನು ನೀಡುತ್ತಿರುವ ಹಸುವನ್ನು ನೋಡಿ ಕೋಪಗೊಂಡ. ಅದೇ ಕೋಪದಲ್ಲಿ ಹಸುವಿನ ಮೇಲೆ ಕೊಡಲಿಯನ್ನು ಬಿಸುಟ. ಹಸು ಹೆದರಿಕೊಂಡು ಪಕ್ಕಕ್ಕೆ ಸರಿಯಿತು. ಈ ಗಲಾಟೆಗೆ ಹುತ್ತದಿಂದ ಮೇಲೆ ಬಂದ ಶ್ರೀನಿವಾಸನ ಹಣೆಗೆ ಕೊಡಲಿಯ ಏಟು ಬಲವಾಗಿ ತಗುಲಿತು. ಗಾಯವಾಗಿ ರಕ್ತ ಕಾರತೊಡಗಿತು. ಇದ್ದಕ್ಕಿದ್ದಂತೆ ರಕ್ತ ಕಾರುತ್ತಾ ಹೊರಗೆ ಬಂದ ದಿವ್ಯ ಪುರುಷನನ್ನು ನೋಡಿ ದಿಗ್ಭ್ರಮೆಗೊಳಗಾದ ಆ ಗೊಲ್ಲ ಅಲ್ಲೇ ಮರಣಿಸಿದ.

ಮೂಲ: ಜೂಲಗಂಟಿ ಬಾಲಸುಬ್ರಹ್ಮಣ್ಯಂ
ಅನುವಾದ : ಶ್ರೀಮತಿ ಬಿ.ಪದ್ಮಜ
- 9010379476





ಆ ವಿಷಯವನ್ನು ತಿಳಿದ ಚೋಳರಾಜ ಹುತ್ತದ ಬಳಿ ಧಾವಿಸಿ ಬಂದು ಅಲ್ಲಿ ನಡೆದಿರುವ ಆಚಾತುರ್ಯಕ್ಕೆ ಕ್ಷಮಿಸ ಬೇಕೆಂದು ಶ್ರೀನಿವಾಸನನ್ನು ಬೇಡಿಕೊಂಡ. ಮಾಡಿದ ಪಾಪಕ್ಕೆ ಶಿಕ್ಷೆ ತಪ್ಪುವುದಿಲ್ಲ ಎನ್ನುತ್ತಾ ಶ್ರೀನಿವಾಸನು ಚೋಳರಾಜನನ್ನು ಪಿಶಾಚಿಯಾಗೆಂದು ಶಪಿಸಿದ. ವಿವಿಧ ರೀತಿಯಲ್ಲಿ ಪಶ್ಚಾತ್ತಾಪ ಪಟ್ಟರಾಜನ ಮೇಲೆ ಕರುಣೆಯನ್ನು ತೋರಿ,ಶೀಘ್ರದಲ್ಲೇ ಆಕಾಶ ರಾಜನ ಮಗಳಾದ ಪದ್ಮಾವತಿಯನ್ನು ವಿವಾಹವಾಗುತ್ತೇನೆಂದು ಆ ಸಂದರ್ಭದಲ್ಲಿ ರಾಜನು ತನಗೆ ಒಂದು ಬಂಗಾರದ ಕಿರೀಟವನ್ನು ಉಡುಗೊರೆಯಾಗಿ ನೀಡುತ್ತಾನೆಂದೂ ಅದನ್ನು ಧರಿಸಿದ ಕೂಡಲೇ ನಿನಗೆ ಶಾಪ ವಿಮೋಚನೆ ಉಂಟಾಗುತ್ತದೆಂದು ವರವನ್ನು ನೀಡಿದ ಶ್ರೀನಿವಾಸ.

ನಂತರ ಈ ಭೂಲೋಕದಲ್ಲಿ ತನ್ನನ್ನು ಮೊಟ್ಟ ಮೊದಲ ಬಾರಿ ದರ್ಶಿಸಿದ ಗೊಲ್ಲರ ವಂಶಕ್ಕೆ ಕಲಿಯುಗಾಂತ್ಯದವರೆಗೂ ಪ್ರತೀದಿನ ಮೊದಲ ದರ್ಶನವನ್ನು ವರವನ್ನಾಗಿ ಪ್ರಸಾದಿಸಿದ.

ನಂತರ ಅಲ್ಲೇ ತಿರುಗಾಡುತ್ತಿದ್ದ ಶ್ರೀನಿವಾಸನಿಗೆ ವರಾಹ ಸ್ವಾಮಿಯು ಕಾಣಿಸಿದ. ತನ್ನ ಕಥೆಯನ್ನೆಲ್ಲಾ ವಿವರಿಸಿ, ತಾನು ನೆಲೆಸುವುದಕ್ಕೆ ನೂರು ಯೋಜನೆಗಳ ಸ್ಥಳವನ್ನು ದಾನವಾಗಿ ನೀಡಬೇಕೆಂದು ಕೇಳಿದ. ಅದಕ್ಕೆ ಪ್ರತಿಫಲವಾಗಿ ಕಲಿಯುಗಾಂತ್ಯದವರೆಗೂ ಯಾತ್ರಿಕರು ಮೊದಲು ವರಾಹ ಸ್ವಾಮಿಯನ್ನು ದರ್ಶಿಸಿದ ನಂತರವೇ ತನ್ನನ್ನು ದರ್ಶಿಸಬೇಕೆಂದೂ ಹಾಗೆಯೇ ಪ್ರತೀದಿನ ಮೊದಲ ಪೂಜೆ, ಮೊದಲ ನೈವೇದ್ಯ ವರಾಹಸ್ವಾಮಿಗೇ ನಡೆಯಬೇಕೆಂದು ತಿಳಿಸಿದ ಶ್ರೀನಿವಾಸ.

ಅದಕ್ಕೆ ಅಂಗೀಕರಿಸಿದ ವರಾಹಸ್ವಾಮಿಯು ಆ ದಾನದೊಂದಿಗೆ ಶ್ರೀನಿವಾಸನ ಸೇವೆಗಾಗಿ“ಬಕುಳಾದೇವಿ” ಯನ್ನೂ ನೇಮಿಸಿದ.

ಆ ಬಕುಳಾದೇವಿ ಯಾರು? ವರಾಹಸ್ವಾಮಿಯು ಶ್ರೀನಿವಾಸನ ಸೇವೆಗಾಗಿ ಆಕೆಯನ್ನೇ ಏಕೆ ನೇಮಿಸಿದ? ಎಂದು ನಮಗೆ ತಿಳಿಯಬೇಕೆಂದರೆ ದ್ವಾಪರಯುಗದ ಕಥೆಯನ್ನು ತಿಳಿದುಕೊಳ್ಳಬೇಕಾದ್ದದ್ದೇ!


**ಯಶೋದಾದೇವಿಯೇ ಈ ಬಕುಳಾದೇವಿ**

ದ್ವಾಪರಯುಗದಲ್ಲಿ ಪುಟ್ಟ ಕೃಷ್ಣನನ್ನು ಬೆಳೆಸಿದ ತಾಯಿ ಯಶೋದೆ! ಮುದ್ದು ಕೃಷ್ಣನ ಲೀಲೆಯನ್ನು ಕಂಡು ಆನಂದಿಸಿದ್ದ ಯಶೋದೆ ಶ್ರೀ ಕೃಷ್ಣನಿಗೆ ಒಂದು ವಿವಾಹವನ್ನೂ ಮಾಡಲಿಲ್ಲ. ಕೊನೇ ಪಕ್ಷ ಅವನ ಮದುವೆಯನ್ನು ನೋಡುವ ಭಾಗ್ಯವೂ ಆಕೆಗೆ ದೊರೆಯಲಿಲ್ಲ.

ಪಾಪ ಆಕೆಯ ನೋವನ್ನು ಅರಿತ ಶ್ರೀಕೃಷ್ಣನು ಅಮ್ಮಾ ಕಲಿಯುಗದಲ್ಲಿ ನಾನು ಶ್ರೀನಿವಾಸನಾಗಿ ಬರುತ್ತೇನೆ. ಆಕಾಶ ರಾಜನ ಮಗಳಾದ ಪದ್ಮಾವತಿಯನ್ನು ನಾನು ವಿವಾಹವಾಗುತ್ತೇನೆ. ಆ ಮದುವೆ ನಿನ್ನ ಮುಂದಾಳುತ್ವದಲ್ಲೇ ನಡೆಯುತ್ತದೆಂದು ವರ ನೀಡಿದ.ಅಂದಿನ ಯಶೋದಾದೇವಿಯೇ ಇಂದಿನ ಬಕುಳಾದೇವಿ.

ಆಕೆ ಶ್ರೀನಿವಾಸನನ್ನು ತನ್ನ ಮಗನಂತೆ ನೋಡಿಕೊಂಡಳು. ಶ್ರೀನಿವಾಸನು ಮತ್ತೊಮ್ಮೆ ಮಾತೃ ಪ್ರೇಮದ ಸವಿಯನ್ನು ಸವಿದನು.

ಒಂದು ದಿನ ಶ್ರೀನಿವಾಸನು ಬೇಟೆಗಾಗಿ ಬೆಟ್ಟದಲ್ಲಿನ ಅರಣ್ಯಕ್ಕೆ ಹೋದನು. ಅಲ್ಲಿ ಆಕಾಶರಾಜನ ಮಗಳಾದ ಪದ್ಮಾವತಿಯನ್ನು ಕಾಡಾನೆಯೊಂದು ಅಟ್ಟಿಸಿಕೊಂಡು ಬರು



ತ್ತಿತ್ತು. ಆ ಆನೆಯಿಂದ ರಕ್ಷಿಸಿದ ಶ್ರೀನಿವಾಸನು ಆಕೆಯ ಮೋಹಕ್ಕೆ ಒಳಗಾದ. ಆಕೆಯೊಂದಿಗೆ ಇದ್ದ ಸಖಿಯರು ಶ್ರೀನಿವಾಸನ ಮೇಲೆ ಕಲ್ಲುಗಳನ್ನು ಎಸೆದು ಅಲ್ಲಿಂದ ಅವನನ್ನು ಓಡಿಸಿದರು. ಗಾಯಗೊಂಡು ಬಂದ ಶ್ರೀನಿವಾಸನನ್ನು ಬಕುಳಾ ದೇವಿಯು ನೋಡಿ ಗಾಬರಿಯಾದಳು.

ನಡೆದ ಕಥೆಯನ್ನೆಲ್ಲಾ ಹೇಳಿ ಆಕಾಶರಾಜನ ಮಗಳು ಪದ್ಮಾವತಿ ಮತ್ತು ತಾನು ಪರಸ್ಪರ ಪ್ರೇಮಿಸುತ್ತಿದ್ದೇವೆಂದೂ, ಆಕೆಯನ್ನೇ ಮದುವೆಯಾಗುತ್ತೇನೆಂದು ಹೇಳಿ ಆ ವಿಷಯದ ಬಗೆಗೆ ಆಕಾಶರಾಜನ ಬಳಿ ಹೋಗಿ ಮಾತನಾಡಬೇಕೆಂದು ಬಕುಳಾದೇವಿಯನ್ನು ಶ್ರೀನಿವಾಸನು ಕೇಳಿಕೊಂಡ.

ಬೆಟ್ಟಗುಡ್ಡಗಳಲ್ಲಿ ತಿರುಗಾಡುವ ನಾವೆಲ್ಲಿ? ಆಕಾಶ ರಾಜನ ಮಗಳೆಲ್ಲಿ? ಇಬ್ಬರಿಗೂ ಯಾವುದೇ ರೀತಿಯಲ್ಲೂ ಹೊಂದಾಣಿಕೆಯಾಗುವುದಿಲ್ಲವೆಂದು ಸಂದೇಹಿಸುತ್ತಿದ್ದ ಬಕುಳಾದೇವಿಯೊಂದಿಗೆ. ಅಮ್ಮಾ ದ್ವಾಪರಯುಗದ ಯಶೋದೆ ನೀನು, ಅಂದಿನ ಕೃಷ್ಣನು ನಾನು ಎಂದು ಆಕೆಗೆ ಹಿಂದಿನ ಘಟನೆಗಳನ್ನು ಮನವರಿಕೆ ಮಾಡಿಸಿದ.

ಅಷ್ಟೇಅಲ್ಲ, ಆಕಾಶರಾಜನ ಪುತ್ರಿ ಅಂದಿನ ತ್ರೇತಾ ಯುಗದ ವೇದವತಿ ಎಂದೂ ತಿಳಿಸಿದ.

**ವೇದವತಿಯೇ ಪದ್ಮಾವತಿ**

ಸೀತಾ ರಾಮಲಕ್ಷ್ಮಣರು ಅರಣ್ಯವಾಸ ಮಾಡುತ್ತಿದ್ದ ಸಮಯದಲ್ಲಿ ರಾವಣಾಸುರನು ಸೀತೆಯನ್ನು ಅಪಹರಿಸಿದ. ಆ ಸಮಯದಲ್ಲಿ ಅಗ್ನಿದೇವನು ಎದಿರಾಗಿ ರಾವಣಾ! ಈಕೆ ಯಾರು? ಎಂದು ಕೇಳಿದ.

ಈಕೆ ಸೀತಾದೇವಿ ಎಂದ ರಾವಣ. ಈಕೆ ಸೀತೆಯಲ್ಲ. ನಿಜವಾದ ಸೀತೆ ನನ್ನ ಬಳಿ ಇದ್ದಾಳೆ ಎನ್ನುತ್ತಾ ವೇದವತಿಯನ್ನು ತೋರಿಸಿದ. ರಾವಣಾಸುರನು ಅಗ್ನಿಯ ಬಳಿ ಇದ್ದ ವೇದವತಿಯನ್ನು ಕರೆದೊಯ್ದು, ಲಂಕೆಯಲ್ಲಿ ಸೀತೆಯ ಬದಲಾಗಿ ವೇದವತಿ ಇದ್ದಳು. ಪುನಃ ರಾವಣನ ಸಂಹಾರ ವಾದ ನಂತರ ಸೀತೆ ಅಗ್ನಿ ಪ್ರವೇಶ ಮಾಡಿದ ಸಮಯದಲ್ಲಿ, ಅಗ್ನಿಕುಂಡದಿಂದ ಸೀತೆಯ ರೂಪದಲ್ಲಿ ಇಬ್ಬರು ಸ್ತ್ರೀಯರು ಹೊರಗೆ ಬಂದರು.

ಅದನ್ನು ನೋಡಿ ಆಶ್ಚರ್ಯಗೊಂಡ ಶ್ರೀರಾಮನನ್ನು ನೋಡಿ ಅಗ್ನಿದೇವನು ಪ್ರತ್ಯಕ್ಷನಾಗಿ, ರಾಮಚಂದ್ರಾ! ಇಲ್ಲಿಯವರೆಗೂ ಲಂಕೆಯಲ್ಲಿದ್ದವಳು ಈ ವೇದವತಿ. ನಿಜ ವಾದ ಸೀತೆ ನನ್ನ ಬಳಿ ಇದ್ದಾಳೆ ಎಂದು ಸೀತೆಯನ್ನು ತೋರಿಸಿದ. ಕೂಡಲೇ ಸೀತಾದೇವಿ ರಾಮನನ್ನು ಕುರಿತು, ಇಷ್ಟು ದಿನ ನನಗಾಗಿ ಲಂಕೆಯಲ್ಲಿ ಕಷ್ಟಗಳನ್ನು ಅನುಭವಿಸಿದ ವೇದವತಿಯನ್ನು ವಿವಾಹವಾಗಬೇಕೆಂದು ಕೇಳಿಕೊಂಡಳು.

ಆಗ ಶ್ರೀರಾಮನು, ಈ ಅವತಾರದಲ್ಲಿ ನಾನು ಏಕ ಪತ್ನೀ ವ್ರತಸ್ಥ, ಕಲಿಯುಗದಲ್ಲಿ ವೇಂಕಟಾಚಲಪತಿಯಾಗಿ ಅವತರಿಸಿದಾಗ, ಈಕೆ ಆಕಾಶರಾಜನ ಪುತ್ರಿಯಾಗಿ ಅವತರಿಸುತ್ತಾಳೆ. ಆಗ ಆಕೆಯನ್ನು ವಿವಾಹವಾಗುತ್ತೇನೆಂದು ರಾಮನು ವರವನ್ನು ನೀಡಿದ. ಆ ರಾಮನೇ ನಾನು, ಆ ವೇದವತಿಯೇ ಈ ಪದ್ಮಾವತಿ ಎಂದು ತಿಳಿಸಿದ.

ವೇದವತಿಯೂ ಲಕ್ಷ್ಮಿಯ ಅವತಾರವೇ! ಮಯನೆಂಬ ವೇದಪಂಡಿತ ವೇದಾಧ್ಯಯನ ಮಾಡುತ್ತಿದ್ದಾಗ ಒಮ್ಮೆ ಊರ್ವಶಿ ಎಂಬ ಅಪ್ಸರೆ ಕಂಡು ಬಂದಳು. ಆಕೆಯನ್ನು ನೋಡಿದ ವಿಪ್ರನು ಕಾಮಪ್ರೇರಿತನಾದ. ಆಗ ಅವನ ಇಂದ್ರಿಯ ಪತನವಾಯಿತು. ಆದ್ದರಿಂದ "ಲಕ್ಷ್ಮಿದೇವಿ" ಶಿಶುವಾಗಿ ಅವತರಿಸಿದಳು. ವೇದವನ್ನು ಪಠಿಸುತ್ತಿರುವಾಗ ಹುಟ್ಟಿದಳಾದ್ದರಿಂದ ಆಕೆಗೆ ವೇದವತಿ ಎಂಬ ಹೆಸರನ್ನು ನೀಡಿದ. ಅದು ಅಂದಿನ ಪದ್ಮಾವತಿಯ ಕಥೆ! ಎನ್ನುತ್ತಾ ಶ್ರೀನಿವಾಸನು ಎಲ್ಲವನ್ನೂ ಬಕುಳಾದೇವಿಗೆ ವಿವರಿಸಿದ.

## ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ

ತಿರುಮಲೆ ಸ್ವಾಮಿಯವರ ಆಲಯದಲ್ಲಿ ಸೆಲ್‌ಫೋನ್, ಕೆಮರಾ, ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸಲಾಗಿದೆ. ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯರನ್ನು ಆಲಯದೊಳಗೆ ಅನುಮತಿಸಲಾಗುವುದಿಲ್ಲ. ಆದ್ದರಿಂದ ಭಕ್ತರು ತಿ.ತಿ.ದೇ.ಯೊಂದಿಗೆ ಸಹಕರಿಸಬೇಕಾಗಿ ಕೋರಲಾಗಿದೆ.

**- ಕಾರ್ಯನಿರ್ವಹಣಾಧಿಕಾರಿ**

ತಿರುಮಲೆ ತಿರುಪತಿ ದೇವಸ್ಥಾನಗಳು

# ಭಕ್ತರ ಸೇವೆಯಲ್ಲಿ.........

# ಶ್ರೀನಿವಾಸ ಕಲ್ಯಾಣಗಳು – ಪ್ರಪಂಚ ವ್ಯಾಪ್ತಿಯಾಗಿ.......

## ಸಿಂಗಪೂರ್‌ನಲ್ಲಿ......

12-10-2019 ರಂದು ಸಿಂಗಪೂರ್‌ನಲ್ಲಿ ನಡೆದ ಶ್ರೀನಿವಾಸನ ಕಲ್ಯಾಣದಲ್ಲಿ ತಿ.ತಿ.ದೇ., ಧರ್ಮಕರ್ತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ.ಸುಬ್ಬಾರೆಡ್ಡಿಯವರು ಸತಿ ಸಮೇತವಾಗಿ ಪಾಲ್ಗೊಂಡರು. ಈ ಸಂದರ್ಭವಾಗಿ ಅವರು ಮಾತನಾಡುತ್ತಾ ಶ್ರೀನಿವಾಸ ಕಲ್ಯಾಣವು ಪ್ರಪಂಚ ವ್ಯಾಪ್ತಿಯಾಗಿ ಭಕ್ತಿ ಭಾವದಿಂದ ನಡೆಸುವುದು ಶ್ರೀ ವೆಂಕಟೇಶ್ವರನ ಮೇಲೆ ಭಕ್ತಿ ಭಾವವನ್ನು ಮೂಡುವಂತೆ ಮಾಡುತ್ತದೆಂದು ತಿಳಿಸಿದರು.











## ಮೆಲ್‌ಬೋರ್ನಿಯಾದಲ್ಲಿ.....

09-11-2019 ರಂದು ಮೆಲ್‌ಬೋರ್ನಿಯಾದಲ್ಲಿ ತಿ.ತಿ.ದೇ., ನಿರ್ವಹಿಸಿದ ಶ್ರೀನಿವಾಸನ ಕಲ್ಯಾಣದಲ್ಲಿ ತಿ.ತಿ.ದೇ., ಧರ್ಮಕರ್ತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿಯವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡರು. ಈ ಸಂದರ್ಭವಾಗಿ ಅವರು ಮಾತನಾಡುತ್ತಾ ಕಲಿಯುಗ ಪ್ರತ್ಯಕ್ಷದೈವನಾದ ಶ್ರೀನಿವಾಸನ ಆಶೀರ್ವಾದಗಳೇ ಎಲ್ಲರಿಗೂ ಶ್ರೀ ರಾಮರಕ್ಷೆ ಎಂದರು. ದೇಶವನ್ನು ಬಿಟ್ಟು ಬಂದರು ನಮ್ಮ ಸಂಸ್ಕೃತಿ ಸಂಪ್ರದಾಯಗಳನ್ನು ಮರೆಯದೆ ಇಂದಿಗೂ ಆಚರಿಸುತ್ತಿರುವುದು ಹೆಮ್ಮೆಯ ವಿಷಯವೆಂದು ಹೇಳಿದರು. ತಿರುಮಲೆ ತಿರುಪತಿ ದೇವಸ್ಥಾನವು ಕೈಗೊಳ್ಳುತ್ತಿರುವ ಕಾರ್ಯಕ್ರಮಗಳ ಬಗ್ಗೆ ತಿಳಿಸಿದರು.







## ತಿರುಪತಿಯಲ್ಲಿ.....

24-10-2019 ರಂದು ತಿರುಪತಿಯಲ್ಲಿರುವ ತಿ.ತಿ.ದೇ. ಸಾರಿಗೆ ವಿಭಾಗದಲ್ಲಿ ದಸರಾ ಹಬ್ಬದ ಸಂದರ್ಭವಾಗಿ ಆಯುಧ ಪೂಜೆಯು ವೈಭವವಾಗಿ ನಡೆಯಿತು. ಈ ಕಾರ್ಯಕ್ರಮಕ್ಕೆ ತಿ.ತಿದೇ. ಧರ್ಮಕರ್ತ ಮಂಡಳಿಯ ಅಧ್ಯಕ್ಷರು ಶ್ರೀ ವೈ.ವಿ. ಸುಬ್ಬಾರೆಡ್ಡಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡರು. ಈ ಸಂದರ್ಭದಲ್ಲಿ ಅವರು ಮಾತನಾಡುತ್ತಾ ದಸರಾ ಪರ್ವದಿನದಂದು ತಿ.ತಿ.ದೇ. ಸಾರಿಗೆ ವಿಭಾಗದಲ್ಲಿ ಆಯುಧ ಪೂಜೆಯನ್ನು ನಿರ್ವಹಿಸುವುದು ಆನಾದಿಯಿಂದಲೂ ಬಂದಿದೆ. ಭಕ್ತರಿಗೆ, ವಿಶೇಷ ಸೇವೆಯನ್ನು ಕಲ್ಪಿಸುತ್ತಿರುವ ತಿ.ತಿ.ದೇ., ಸಾರಿಗೆ ವಿಭಾಗದ ಅಧಿಕಾರಿಗಳಿಗೆ, ಸಿಬ್ಬಂದಿಯರಿಗೆ ಈ ಸಂದರ್ಭದಲ್ಲಿ ಶುಭ ಹಾರೈಸಿದರು.



*Edited and Published on behalf of T.T.Devasthanams by* ***Dr. K. Radha Ramana****, M.A., M.Phil., Phd., Chief Editor, T.T.D. and Printed at T.T.D. Press by* ***Sri R.V. Vijaya Kumar,*** *B.A., B.Ed., Dy. E.O. (Publications & Press), T.T.D. Press, Tirupati - 517 507.*

# ಲೋಕಕ್ಷೇಮಕ್ಕಾಗಿ......

## ತಿರುಮಲೆ ತಿರುಪತಿ ದೇವಸ್ಥಾನಗಳು

## ಶ್ರೀನಿವಾಸ ಮಂಗಾಪುರಂ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ ಅಲಯದಲ್ಲಿ 16-10-2019 ರಿಂದ 18-10-2019 ರ ವರೆಗೆ ನಡೆದ ಅಷ್ಟೋತ್ತರ ಶತಕುಂಡಾತ್ಮಕ ಶ್ರೀನಿವಾಸ ಮಹಾಯಾಗ ಮಹೋತ್ಸವ ದೃಶ್ಯಮಾಲಿಕೆ










SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 25-11-2019. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020

